India saw from the beginning, — and, even in her ages of reason....

ಅಖಿಲ ಭಾರತ ಪತ್ರಿಕೆ

ಅಕ್ಟೋಬರ್ 2023

If India is to survive, she must be made young again. Rushing and billowing streams of energy must be poured into her; her soul must become, as it was in the old times, like the surges, vast, puissant, calm or turbulent at will, an ocean of action or of force.

India of the ages is not dead nor has she spoken her last creative word; she lives and has still something to do for herself and the human peoples....

# ವಂದೇ ಮಾತರಂ





This is an hour in which, for India as for all the world ...

Mother India is not a piece of earth; she is a Power, a Godhead...

So with India rests the future of the world.

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಶ್ರಮಿಸುತಿಹಳೀಗ ಅವಳಿಲ್ಲಿ ಸತತ ಮೂಲವನು ಸ್ಥಾನಗೊಳಿಸಿ
ಲುಪ್ತವಾಗಿದ್ದ ಅನಂತಾನಂತದಾ ಅವಳ ಸ್ಮರಣೆಯೊಳಗೆ.

**– ಪುಟ್ಟು ಕುಲಕರ್ಣಿ**

**ಅಖಿಲ ಭಾರತ ಪತ್ರಿಕೆ**
**ಅಕ್ಟೋಬರ್ 2023**

ಸಂಪುಟ: 33 ಸಂಚಿಕೆ: 10

## ಪರಿವಿಡಿ

# ವಂದೇ ಮಾತರಂ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಭಾರತ ಮಾತೆ** 5
ಅನು: ನಾಗಜ್ಯೋತಿ ಮಾನ್ವಿ

**ಜಾಗ್ರತ ಭಾರತ** 11
ಅನು: ಡಾ॥ ಮಹಾದೇವ ಸಕ್ರಿ
ಅನು: ವಿಶಾಲಾಕ್ಷೀ ಸತ್ಯನ್

**ರಾಷ್ಟ್ರ ಭಾರತ** 31
ಅನು: ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 53
ಅನು: ಜಾನ್ವಿ

**ತ್ರಾಟಕ ಸೂರ್ಯ** 62
– ಪುಟ್ಟು ಕುಲಕರ್ಣಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ನೂತನ ಭಾರತವೊಂದು ಜಗತ್ತಿಗೆ ಕಾಣುವಂತೆ ಉದಿಸುತ್ತಲಿದೆ. ಭಾರತದ ಈ ಉದಯವನ್ನು ಮಾತೆಯು ಕೇವಲ ತನ್ನ ಸಲುವಾಗಿ ಮಾತ್ರವೇ ಎಂದು ಭಾವಿಸುವದಿಲ್ಲ, ಆದರೆ ಈ ಉದಯವು ಇಡೀ ಭೂ–ಮಂಡಲಕ್ಕೆ ಮತ್ತು ಮಾನವೀಯತೆಯ ಸಲುವಾಗಿಯೇ ರೂಪಿಸಿದ್ದಾಳೆ. ಅವಳ ಉದ್ದೇಶವನ್ನು ಫಲಪ್ರದಗೊಳ್ಳಲು ಇದು ಭಾರತದಲ್ಲಿ ಈಡೇರಲೇಬೇಕಾಗಿದೆ ಎಂದಾದಲ್ಲಿ ಮೊದಲು "ಭಾರತ ಮಾತೆಯು" ತನ್ನಲ್ಲಿಯೇ ತನ್ನನ್ನು ಪರಿಶೋಧಿಸಿಕೊಳ್ಳಬೇಕಿದೆ. ಅವಳು ತನ್ನಲ್ಲಿಯೇ ಇರುವ ಜಾಣ್ಮೆ ಮತ್ತು ಮಹತ್–ಸಾಮರ್ಥ್ಯದ ಅಂತರಾಳಕ್ಕೆ ಸಾಗಬೇಕಾಗಿದೆ. ಅಲ್ಲಿಂದಲೇ ಅವಳ ಸಾಮರ್ಥ್ಯವನ್ನು ಅವಳದೇ ಸನಾತನದ ನಿಧಿ ಸ್ವರೂಪದ ಸಲಿಲಧಾರೆಗಳಿಂದ ತನ್ನನ್ನು ತಾನೆ ಪುನರುಜ್ಜೀವನಗೊಳಿಸಿಕೊಳ್ಳಬೇಕಾಗಿದೆ. ಈ ಸಂಚಿಕೆಯು ಭಾರತ ಮಾತೆಯ ಆತ್ಮಕ್ಕೆ ಸಮರ್ಪಣಾ ಸ್ವರೂಪದಲ್ಲಿದೆ. (ಎಐಎಮ್)

---

## ಸಂಪಾದಕೀಯ

## ರಾಷ್ಟ್ರದ ಪರಿಕಲ್ಪನೆ

'ಆಧ್ಯಾತ್ಮಿಕ ಜೀವನ ಶೈಲಿಯೇ ಭಾರತದ ಪ್ರತಿಭಾನ್ವಿತ ಅಸ್ಮಿತೆ'ಯಾಗಿದೆ. ಇಂತಹ ಜೀವನ ಶೈಲಿಯನ್ನು ನಿಸರ್ಗ ಸಹಜವಾಗಿಯೇ ಒದಗಿಸುವ ಒಂದು ಭೂಖಂಡದ ಹಿನ್ನೆಲೆಯಲ್ಲಿ 'ರಾಷ್ಟ್ರದ ಪರಿಕಲ್ಪನೆ' ನಮ್ಮಲ್ಲಿ ಇತ್ತು. ಅದಕ್ಕಾಗಿಯೇ 'ಪೃಥಿವ್ಯಾ ಸಾಗರಪರ್ಯಾಂತ್ ಏಕ ರಾಟ್' (ಸಾಗರದಿಂದ ಸುತ್ತುವರೆಯಲ್ಪಟ್ಟಿರುವ ಭೂ–ಖಂಡವೇ ರಾಷ್ಟ್ರ"ವೆನ್ನುವ ಉದಾತ್ತ ಮನೋಭಾವವನ್ನು ನಮ್ಮ ದ್ರಷ್ಟಾರರು ಹೊಂದಿದ್ದರು). ಆದರೆ ಮಾನವನ ತಮೋಗುಣಕ್ಕೆ ಪ್ರಾಧಾನ್ಯತೆಯಿತ್ತು, ಜ್ಞಾನಕ್ಕೆ ಗಡಿಯಿರಿಸಿಕೊಂಡ ಹಾಗೆ, ಭೂ–ಭಾಗಕ್ಕೂ ಸಹಿತ ತನ್ನದೇ ಕಲ್ಪಿತ ರೇಖೆಗಳನ್ನು ಎಳೆದುಕೊಂಡು, ದೇಶದ ಕಲ್ಪನೆಯಲ್ಲಿ ಸೀಮಿತಗೊಳ್ಳತೊಡಗಿದ. ಆ ಸೀಮಿತತನವು ಮತ್ತೂ ಮತ್ತೂ ಘನವಾಗುತ್ತಲೇ ಬಂದು, ಅದಕ್ಕೊಂದು "ಮತದ" ಆಲೇಪನವನ್ನು ಕೊಟ್ಟುಕೊಂಡು, ಅದೇ 'ಅಂತಿಮ ಸತ್ಯ' ಎಂದು ಹಕ್ಕೊತ್ತಾಯದಿಂದಲೇ ಆ ಮತದ ಮತ್ತಿನಲ್ಲಿಯೇ ಜನ ಸಮುದಾಯವನ್ನು ವಿಭ್ರಮೆಗೊಳಿಸಿ, ಬೆದರಿಸಿ ಅವರ ಮೇಲೆ ಹೇರಲಾಯಿತು. ಆಗ ಅಲ್ಲಿ ನಿಸರ್ಗ ಸಹಜವಾದ ಬದುಕಿನ ಸ್ಪಂದನಗಳು, ಕೃತಕವಾಗಿ ರೂಪಿಸಲ್ಪಟ್ಟು, ಪ್ರಕೃತಿಗೂ ಮತ್ತು ಮಾನವನಿಗೂ ಇರುವ ಆತ್ಮೀಯ ಸಂಬಂಧವನ್ನೇ ತುಂಡರಿಸಲಾಯಿತು. ಅದು

ಪೀಳಿಗೆ ಪೀಳಿಗೆಗಳ ಕಾಲ ಮುಂದುವರೆಯುತ್ತ ಬಂದ ಹಾಗೆ, ಆ ಅಂಧಕಾರವೇ ಬದುಕು ಎಂದುಕೊಂಡ ಪೀಳಿಗೆಯು, ಯಾವಾಗಲೂ ಅಸಮರ್ಥರಾಗಿಯೇ ಉಳಿಯುವದೂ ಅಲ್ಲದೇ, ತಮ್ಮನ್ನೇ ತಾವು ಗುಲಾಮರಂತೆ ಒಪ್ಪಿಸಿಕೊಂಡಿರುತ್ತಾರೆ.

ತತ್ವಜ್ಞಾನದ ಸೂತ್ರದಲ್ಲಿಯೇ ತತ್ವಜ್ಞಾನವನ್ನು ವಿಶ್ಲೇಷಿಸಿದಲ್ಲಿ ಅದು 'ಜ್ಞಾನವನ್ನು ಪ್ರೇಮಿಸು', 'ಜ್ಞಾನವನ್ನು ಆರಾಧಿಸು' ಎಂದೇ ಅರ್ಥ ಕೊಡುತ್ತದೆ. ಇಂತಹ ತತ್ವಜ್ಞಾನವನ್ನು ಸಾಕಾರಗೊಳಿಸುವ ಅವಕಾಶವನ್ನು ಒದಗಿಸುವ ಭೂ–ಭಾಗವೇ 'ರಾಷ್ಟ್ರ'ವಾಗಿರುತ್ತದೆ. ಮಾನವನಿಗೆ ಬದುಕು ಕೊಟ್ಟ 'ತಾಯಿ' ಹೇಗೆ ಸದಾ ಪೂಜ್ಯಳೋ, ಅದೇ ರೀತಿ ಮನುಕುಲಕ್ಕೆ 'ಬದುಕು' ಕೊಟ್ಟ ಈ 'ಭೂಮಿ'ಯೂ ತಾಯಿಯ ಹಾಗೆ ಎಂದು ಗೌರವಿಸುವ ಪರಂಪರೆಯ ಹಿಂದೆ, ಮಾನವನ ಚಿಂತನದ ವಿಕಾಸದ ಅಪ್ರತಿಮ ಸಾಧನೆಗಳಿವೆ. ಆಯಾ ಕಾಲಕ್ಕೆ ವಿಚಲನೆ ಹೊಂದಿದ ಸಂಸ್ಕೃತಿಯ ಪ್ರವಾಹವು ಬತ್ತದ ಹಾಗೆ, ಸಮೃದ್ಧಗೊಂಡ ಭುವಿಯೊಡಲ ಸಾರವನ್ನು ಹೀರಿಕೊಳ್ಳಲಿದ್ದ ಬೇರುಗಳನ್ನು ಕತ್ತರಿಸಿ ಬೊನ್ಸಾಯಿ ಮಾದರಿಯ ಸಂಸ್ಕೃತಿಯನ್ನೂ, ಅಷ್ಟೇ ಸೀಮಿತ ಗಡಿಯನ್ನೂ ಮೀರಿ ಮತ್ತೆ ವಿಶ್ವದ ವ್ಯಾಪಕತ್ವದೆಡೆಗೆ ರೂಪಿಸಬೇಕಾಗಿದೆ.

ಇದು ರಾಷ್ಟ್ರವನ್ನು (ದೇಶವನ್ನು) ನಮ್ಮ ಮಾತೆ ಎಂದು ಪ್ರೀತಿಸಿದಾಗ – 'ವಂದೇ ಮಾತರಂ' ಎಂದು ಆರಾಧಿಸಿದಾಗ ಮಾತ್ರ ಸಾಧ್ಯವಾಗುವ ಸಂಗತಿ. ಎಷ್ಟೇ ಆಘಾತಗೊಂಡರೂ ಶ್ರೀಮಾತೆಯ (ರಾಷ್ಟ್ರದ) ಆತ್ಮಶಕ್ತಿ ಕುಂಠಿತಗೊಂಡಿರುವದಿಲ್ಲ; ಆದರೆ ಅದಕ್ಕೊಂದು ಅವಕುಂಠನವನ್ನು ತೊಡಿಸಲಾಗಿರುತ್ತದೆ. ಆ ಕವಚವನ್ನು ತೆರೆಯುವ ಸಲುವಾಗಿ, ಇಡೀ ರಾಷ್ಟ್ರಾದ್ಯಂತ ಜಾಗ್ರತಿಯ ಸಂಕೇತಗಳಾಗಿ ಹಲವಾರು "ಆತ್ಮಗಳು" ಕಳೆದ ಶತಮಾನದಲ್ಲಿ ಪಥಗಳನ್ನು ನಿರ್ಮಿಸಿವೆ. ಆಧ್ಯಾತ್ಮಿಕ ವಲಯದಲ್ಲಿ, ಸಾಮಾಜಿಕ ವಲಯದಲ್ಲಿ, ಸಾಂಸ್ಕೃತಿಕ ವಲಯದಲ್ಲಿ ಹಾಗೂ ಅನಿವಾರ್ಯವೇ ಆಗಿರುವ ರಾಜಕೀಯ ವಲಯದಲ್ಲಿಯೂ ಸಹಿತ ಹಲವು ಚೇತನಗಳು ನಮಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿವೆ. ಅವೆಲ್ಲ ಸೂತ್ರಗಳನ್ನೂ 'ಆಧ್ಯಾತ್ಮಿಕ ಚಿಂತನ'ಗಳನ್ನಾಗಿಸಿಕೊಂಡು, ಬದುಕು ರೂಪಿಸಿಕೊಳ್ಳುವ ಹಾಗೂ ಅದರ ಮೂಲಕ 'ರಾಷ್ಟ್ರದ ಉಜ್ವಲತೆಗೂ' ಕೊಡುಗೆಯಾಗಬಲ್ಲ ಆದರ್ಶದ ಸೂತ್ರಗಳನ್ನು ಶ್ರೀ ಅರವಿಂದರು ನೀಡಿದ್ದಾರೆ.

ಪೃಥ್ವೀ ತತ್ವದಿಂದ ಜನಿಸಿದ ಈ ದೇಹವು ಸಹಜವಾಗಿಯೇ, ಆಯಾ ಭಾಗದ ಭೂ–ತತ್ವಗಳನ್ನು ತನ್ನ ದೇಹದಲ್ಲಿ ಹೊಂದಿರುತ್ತದೆ. ಅದರ ಆಂತರ್ಯ ಎಂದಿಗೂ ಬದಲಾಗದು. ಅವಕಾಶದಲ್ಲಿರುವ ಉಳಿದ ನಾಲ್ಕು ಅಂಶಗಳು (ಜಲ–ಮುಗಿಲು–ಅಗ್ನಿ–ಆಕಾಶ) ಈ ಭೂ–ತತ್ವದ ಮೂಲಕವೇ ಸಾಕಾರಗೊಳ್ಳಬೇಕಾಗುತ್ತದೆ. ಹೀಗಾಗಿ

ಆಯಾ ರಾಷ್ಟ್ರದ ಪರಿಕಲ್ಪನೆಗೆ ಗಡಿಗಳ ಸೀಮಿತತನವಿರಬಾರದು ಎನ್ನುವದು ವಿಶ್ವ ಸತ್ಯ. ಅದನ್ನು ಸಾಧಿಸುವ ಹಿನ್ನಲೆಯಲ್ಲಿ 'ವಿಶ್ವ ಸಂಸ್ಥೆ', 'ವಿಶ್ವ–ಗ್ರಾಮ', 'ವಿಶ್ವ–ಮಾರುಕಟ್ಟೆ'–ಗಳಂತಹ ಘಟನೆಗಳು ರೂಪುಗೊಂಡು, ಮಾನವನ ಬದುಕು ನಿಧಾನವಾಗಿಯಾದರೂ 'ವೈಶ್ವಿಕ ಆಯಾಮ'ವಾಗುವತ್ತ ವಾಸ್ತವದ ಘಟನೆಗಳು ಘಟಿಸುತ್ತಲಿವೆ.

'ಭವಾನಿ ಭಾರತೀ' ಈ ಹಿನ್ನೆಲೆಯಲ್ಲಿ ರಚಿತಗೊಂಡಿರುವ ಶ್ರೀ ಅರವಿಂದರ ಸಂಸ್ಕೃತ ಕೃತಿಯಲ್ಲಿ, ಪಥ ವಿಚಲನೆಗೊಂಡ ರಾಷ್ಟ್ರದ ಸ್ಥಿತಿಯನ್ನು ಕಂಡ ಮಾತೆ, ಕುದಿದು ಕ್ರೋಧಾನ್ವಿತೆಯಾಗಿ "ಕಾಳಿ"ಯಂತೆ ಹೂಂಕಾರ ಮಾಡುವದರ ಮೂಲಕ ಜನತೆಯನ್ನು ಎಚ್ಚರಿಸುವ ಹಂತ ಬಂದಿರುವದನ್ನು, ಹಾಗೂ ಈಗಾಗಲೇ ಘಟಿಸಿ ಹೋದ ಘಟನೆಯ ಆಘಾತದಿಂದ ಹೊರಬರುವ ಎಲ್ಲ ಮಾರ್ಗಗಳನ್ನೂ ಕೊಟ್ಟಿದ್ದಾರೆ. ಅದೇ ಸಮಯಕ್ಕೆ ಆಧುನಿಕ ಕಾಲದ ಮಂತ್ರ 'ವಂದೇ ಮಾತರಂ' ಗೀತೆಯ ಅಂತರಾರ್ಥವನ್ನೂ ಸಹಿತ ವಿಷದಪಡಿಸಿದ್ದಾರೆ. ಸುಭಾಷಚಂದ್ರ ಬೋಸ್ ಅವರ ಧೀರೋದ್ಧಾತ ಹೋರಾಟ, ಬಂಕಿಮಚಂದ್ರ ಚಟರ್ಜಿಯವರ ಮಾಂತ್ರಿಕ ಗೀತೆ 'ವಂದೇ ಮಾತರಂ', ಸ್ವಾಮಿ ವಿವೇಕಾನಂದರ 'ಆಧ್ಯಾತ್ಮಿಕ ಸ್ವರೂಪದ ಉತ್ಕ್ರಾಂತಿ', ಲೋಕಮಾನ್ಯ ತಿಲಕರ 'ಸ್ವರಾಜ್ಯವೇ ನಮ್ಮ ಹಕ್ಕು' ಎನ್ನುವ ಆತ್ಮವಿಶ್ವಾಸದ ಸರ್ವ ಸಮನ್ವಯವನ್ನು ಶ್ರೀ ಅರವಿಂದರು 'ಸಮತೆಯ' ಸ್ವರೂಪದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವದಕ್ಕೆ ಸೂಕ್ತ ಪಥವನ್ನು ನಿರ್ಮಿಸಿ, ನವೀನ ಯುಗವೊಂದಕ್ಕೆ ನಾಂದಿ ಹಾಡಿದ್ದಾರೆ.

ಭಾರತವಷ್ಟೇ ಅಲ್ಲ ಇಡೀ ಜಗತ್ತೇ ಈ ವಿಷಯದ ಬಗೆಗೆ ಇಂದು ತುಡಿಯುತ್ತಿದೆ. ಆಧುನಿಕ ವೈಜ್ಞಾನಿಕ ಸಂಶೋಧನೆಗಳು, ತಂತ್ರಜ್ಞಾನದ ನೂತನ ಆವಿಷ್ಕಾರಗಳು, ಗ್ರಹಾಂತರ ಪ್ರಯಾಣದ ಕುರಿತು ಸಂಶೋಧನೆಗಳು ಮತ್ತು ಅದಕ್ಕೆ ಅನುಕೂಲಕರ–ವಾಗಿರುವ ನವ ನವೀನ ಉಪಕರಣಗಳು, ಅದರಲ್ಲೂ ಅಂತರ್ಜಾಲದ ವ್ಯವಸ್ಥೆ ನಮ್ಮನ್ನು ಊರ್ಧ್ವಮುಖಿಯನ್ನಾಗಿಸಿ ಸೀಮಾತೀತರನ್ನಾಗಿಸುತ್ತಿವೆ. ಆದರೆ ಇದು ಕೇವಲ ತಾತ್ಕಾಲಿಕವಾಗಿ ಕಾಲ್ಪನಿಕವಾಗಿ ಇರದೇ, ಚಿಂತನಗಳಲ್ಲಿ ಹಾಗೂ ಅದಕ್ಕಿಂತ ಮುಖ್ಯವಾಗಿ ಅನುಷ್ಠಾನಕ್ಕೆ ತಂದುಕೊಳ್ಳಬೇಕಾಗಿದೆ. ಧರ್ಮದ ಆಂತರ್ಯವನ್ನು ಮುಚ್ಚಿ ಮತದ ಹೊದಿಕೆಯಲ್ಲಿ ಬದುಕು ಮಾಡಲೇಬೇಕು ಎನ್ನುವ ಒತ್ತಡಕ್ಕೆ ಸಿಕ್ಕಾಗ, ಘಾಸಿಗೊಳ್ಳುವ ಆತ್ಮಶಕ್ತಿ 'ಕಾಳಿ'ಯಾಗಿಯೇ ಹೂಂಕರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಖಗೋಲೀಯ ಯುಗದಲ್ಲಿ 'ರಾಷ್ಟ್ರದ ನವೀನ ಆಯಾಮ'ದಲ್ಲಿ 'ವಂದೇ ಮಾತರಂ' ಬಗೆಗೆ ಶ್ರೀ ಅರವಿಂದರು ನೀಡಿರುವ ಸೂತ್ರಗಳಲ್ಲಿ ಕೆಲವನ್ನು ಇಲ್ಲಿ ಅನುಸ್ಪಂದನದ ಮೂಲಕ ಕನ್ನಡಕ್ಕೂ ತರಲು ಯತ್ನಿಸಲಾಗಿದೆ. (ಪಿಪಿಕೆ)

## ಭಾರತ ಮಾತೆ

**– ಅನು: ನಾಗಜ್ಯೋತಿ, ಮಾನ್ವಿ**



ಭಾರತದ ಆತ್ಮವು ಏಕ ಮತ್ತು ಅಖಂಡವಾಗಿದೆ. ಭಾರತವು ತನ್ನ ಗುರಿಯ ಬಗೆಗೆ ಪ್ರಜ್ಞಾಪೂರ್ಣವಾಗಿದೆ. ಭಾರತ ಮಾತೆಯು ಇದರ ಬಹಿರ್ಮುಖ ಅಭಿವ್ಯಕ್ತಿಯ ಸಾಧನಕ್ಕಾಗಿ ಕಾಯುತ್ತಿದ್ದಾಳೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/351** **– ಶ್ರೀಮಾತೆ**

## ಆವಾಹನೆ

## 15 ಅಗಸ್ಟ 1947

ಓ ನಮ್ಮೆಲ್ಲರ ಮಾತೆಯೇ, ಓ ಭಾರತದ ಆತ್ಮವೇ, ಖಿನ್ನತೆಯಲ್ಲಿ ಸಿಲುಕಿ ಕಗ್ಗತ್ತಲ್ಲಿನಲ್ಲಿರುವ ಮಕ್ಕಳನ್ನು ಎಂದಿಗೂ ಕೈಬಿಡದ ಕರುಣಾಮಯಿ ತಾಯಿಯೇ, ಇವರೆಲ್ಲರೂ ನಿನ್ನ ವಾಣಿಯನ್ನು ಆಲಿಸದೇ ದೂರವಾಗಿಯೇ ಉಳಿದರು. ಬೇರೆ ಒಡೆಯರ ಸೇವೆಯನ್ನು ಮಾಡಿದ್ದೂ ಅಲ್ಲದೇ ನಿನ್ನನ್ನೇ ನಿರಾಕರಿಸಿದರು, ಈಗ

ಅವರು ಎಚ್ಚೆತ್ತುಕೊಳ್ಳುತ್ತಿದ್ದಾರೆ. ಸ್ವಾತಂತ್ರ್ಯದ ಉಷಾ ಮುಹೂರ್ತದಂದು ನಿನ್ನ ಮುಖದ ಮೇಲಿನ ಕಾಂತಿಯನ್ನು ನೋಡಿ, ಈ ಶ್ರೇಷ್ಠ ಘಳಿಗೆಯಲ್ಲಿ ನಾವಿದೋ ನಿನಗೆ ನಮಿಸುವೆವು. ನಮಗೆ ಮಾರ್ಗದರ್ಶನ ನೀಡು. ಆಗ ಸ್ವಾತಂತ್ರ್ಯದ ಈ ಹೊಸ ದಿಗಂತವು ನಮ್ಮ ಮುಂದೆ ಶ್ರೇಷ್ಠ ದಿಗಂತವಾಗಿ ರೂಪುಗೊಳ್ಳಲಿ. ದೇಶ ದೇಶಗಳ ಸಮೂಹದಲ್ಲಿಯೂ ನಿಜವಾದ ಜೀವನ ನಿನ್ನದೇ ಆಗಿರಲಿ. ನಮಗೆ ಮಾರ್ಗದರ್ಶನವನ್ನು ನೀಡು. ಆಗ ನಾವು ಯಾವಾಗಲೂ ಶ್ರೇಷ್ಠ ಆದರ್ಶಗಳ ಪರವಾಗಿಯೇ ಇರುವಂತೆ ಮಾಡು. ಅ ಸಮುದಾಯಕ್ಕೆ ನಿನ್ನ ನೈಜಸ್ವರೂಪವನ್ನು ತೋರಿಸು. ಸರ್ವ ಜನತೆಗೂ ರಕ್ಷೆ ಒದಗಿಸುತ್ತ, ಸಹಾಯಕಳಾಗಿ, ಗೆಳತಿಯಾಗಿ ಆತ್ಮಾಭಿಮಾನದ ಪಥದಲ್ಲಿ ನಾಯಕಿಯಾಗಿ ನಮ್ಮನ್ನು ಮುನ್ನಡೆಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/352**

**ಭವಾನಿ ಮಾತೆ**

*ಭವಾನಿ ಮಾತೆಯೆಂದರೆ ಯಾರು? ನಾವು ಆಕೆಯ ಸಲುವಾಗಿ ಏಕೆ ಗುಡಿಯನ್ನು ಕಟ್ಟಬೇಕು?*

ಕೊನೆಯೇ ಇಲ್ಲದ ಕ್ರಾಂತಿಗಳು ಜಗತ್ತಿನಲ್ಲಿ ಘಟಿಸುತ್ತಿರುವಾಗಲೇ, ಆ ಶಾಶ್ವತದ ಚಕ್ರವು ಶಕ್ತಿಶಾಲಿಯಾಗಿಯೇ ಉರುಳುತ್ತಿದೆ, ಅದರಿಂದಾಗಿ ಆ ಶಾಶ್ವತದ ನಿರಂತರ ಚಲನೆಯಿಂದಾಗಿ ಹೊಮ್ಮುತ್ತಿರುವ ಅನಂತ ಶಕ್ತಿಯು ಅದೇ ಚಕ್ರಗಳನ್ನು ಸದಾ ಕ್ರಿಯಾಶೀಲವಾಗಿರುವಂತೆ ಮಾಡುತ್ತಿದೆ. ಮಾನವನ ದೃಷ್ಟಿಗೆ ಅನೇಕ ನಾಮ ರೂಪಗಳಲ್ಲಿ ಪ್ರಕಟಗೊಳ್ಳುತ್ತಿದೆ. ಇದರ ಪ್ರತಿಯೊಂದು ರೂಪವೂ ಒಂದು ಯುಗವನ್ನು ಸೃಷ್ಟಿಸಿ ಗುರುತಿಸುತ್ತದೆ. ಕೆಲವೊಮ್ಮೆ ಆಕೆ 'ಪ್ರೀತಿ'ಯಾಗಿ, ಕೆಲವೊಮ್ಮೆ ಆಕೆ 'ಜ್ಞಾನ'ವಾಗಿ, ಕೆಲವೊಮ್ಮೆ ಆಕೆ 'ತ್ಯಾಗ'ವಾಗಿ ಮತ್ತೆ ಕೆಲವೊಮ್ಮೆ ಆಕೆ 'ಕರುಣೆ'ಯಾಗುತ್ತಾಳೆ. ಈ ಅನಂತ ಶಕ್ತಿಯೇ ಭವಾನೀ ಆಗಿದ್ದಾಳೆ. ಅವಳೇ ದುರ್ಗೆ, ಅವಳೇ ಕಾಳಿ, ಅವಳೇ ಪ್ರಿಯಕರನ ರಾಧೆ ಮತ್ತು ಅವಳೇ ಲಕ್ಷ್ಮಿಯೂ ಆಗಿದ್ದಾಳೆ. ಆಕೆ ನಮ್ಮ ಮಾತೆಯಾಗಿದ್ದು ನಮ್ಮೆಲ್ಲರ ಸೃಷ್ಟಿಕರ್ತೆಯಾಗಿದ್ದಾಳೆ.

ಈ ಪ್ರಚಲಿತ ಯುಗದಲ್ಲಿ ಅವಳು ಸಾಮರ್ಥ್ಯದ ಮಾತೆಯಾಗಿ ಪ್ರಕಟಗೊಂಡಿದ್ದಾಳೆ. ಆಕೆಯು ಪರಿಶುದ್ಧ 'ಶಕ್ತಿ'ಯೂ ಆಗಿದ್ದಾಳೆ.

*

**ಶಕ್ತಿಮಾತೆಯಾಗಿ**

ಆದರೆ ಭಾರತದಲ್ಲಿ ದೈವಿಕ ಸ್ಫೂರ್ತಿಯು ನಿಧಾನವಾಗಿ ವ್ಯಾಪ್ತಗೊಳ್ಳುತ್ತಿದೆ. ಭಾರತ, ಸನಾತನ ಶ್ರೀಮಾತೆಯಾಗಿ ಮತ್ತೆ ತನ್ನನ್ನು ನವ ಸ್ವರೂಪದಲ್ಲಿ ಪ್ರಕಟಗೊಳಿಸಿ–ಕೊಳ್ಳಲು ಶ್ರಮಿಸುತ್ತಿದ್ದಾಳೆ. ಆದರೆ ಅವಳ ಈ ಶ್ರಮವು ವ್ಯರ್ಥವಾಗುತ್ತಿದೆಯೇ? ಅವಳು ಸರ್ವವ್ಯಾಪಿಯಾಗಿದ್ದರೂ ಮತ್ತು ಸಾಮರ್ಥ್ಯಶಾಲಿಯಾಗಿದ್ದಾಗಲೂ ಯಾವ ರೀತಿಯ ತೊಂದರೆ ಇವಳನ್ನು ಕಾಡುತ್ತಿದೆ? ಇಲ್ಲಿ ಖಚಿತವಾಗಿಯೂ ಅಪರಿಚಿತವಿರುವ ನ್ಯೂನ್ಯತೆ ಇದೆ. ನಮ್ಮಲ್ಲಿ ಒಂದು 'ಪ್ರಾಣಶಕ್ತಿ'ಯು ಬೇಕಾಗಿದೆ. ಅಥವಾ ಈ ತೊಂದರೆ ಎಲ್ಲಿ ಅಡಗಿದೆ ಎಂದು ನಮಗೇ ಗುರುತಿಸಲಾಗುತ್ತಿಲ್ಲವೇ? ನಮ್ಮಲ್ಲಿ ಬೇರೆಲ್ಲವೂ ಇದೆ. ಆದರೆ ಮುಖ್ಯವಾಗಿ ಇರಲೇಬೇಕಾದ ಸಾಮರ್ಥ್ಯ ಮಾತ್ರ ಬರಿದಾಗಿದೆ, ಶಕ್ತಿಯು ಕುಂಠಿತಗೊಂಡಿದೆ. ನಾವು ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಹೀಗಾಗಿಯೇ ಶಕ್ತಿಯೂ ನಮ್ಮನ್ನು ತ್ಯಜಿಸದೆ. ಶ್ರೀಮಾತೆಯು ಹೃದಯದಲ್ಲಾಗಲೀ, ಮೆದುಳಿನಲ್ಲಾಗಲಿ ಅಥವಾ ನಮ್ಮ ಬಾಹುಗಳಲ್ಲಾಗಲಿ ಇಲ್ಲ.

ಪುನರುತ್ಥಾನದ ಬಯಕೆಯು ನಮ್ಮಲ್ಲಿ ಹೇರಳವಾಗಿದೆ. ಅಲ್ಲಿ ಮಾತ್ರ ಯಾವ ಕೊರತೆಯೂ ಇಲ್ಲ. ಧರ್ಮದಲ್ಲಿ, ಸಮಾಜದಲ್ಲಿ, ರಾಜಕೀಯದಲ್ಲಿ ಅದೆಷ್ಟು ಬಾರಿ ಪ್ರಯತ್ನ ಮಾಡಿದ್ದೇವೆ, ಎಷ್ಟೊಂದು ಚಳವಳಿಗಳನ್ನು ಪ್ರಾರಂಭಿಸದ್ದೇವೆ! ಆದರೆ, ಆದರೆ ಅದೇ ವಿಧಿಯು ನಮ್ಮನ್ನು ಹಿಂದೆ ಉಳಿಸಿದೆ ಅಥವಾ ಎಲ್ಲವನ್ನೂ ಹಿಂದೆ ತಳ್ಳಲೇ ಸಿದ್ಧವಾಗುತ್ತಿದೆ. ಆದರೆ ಬಯಕೆಯು ಒಂದು ಕ್ಷಣದಲ್ಲಿ ಅರಳುತ್ತದೆ ಆದರೆ ತುಡಿತಗಳು ಮಾತ್ರ ಕ್ಷೀಣಿಸುತ್ತ ಹೋಗುತ್ತವೆ. ಅಲ್ಲಿ ಅಗ್ನಿಯೂ ನಂದಿ ಹೋಗುತ್ತದೆ. ಒಂದು ವೇಳೆ ಅವರು ಸಹಿಸಿಕೊಂಡರೂ ಖಾಲಿ ಖಾಲಿ ಸಿಂಪಿನಂತೆ ಆಗುತ್ತಾರೆ. ಬ್ರಹ್ಮತ್ವವೇ ಇಲ್ಲದ ರೂಪಗಳಾಗಿ ತಮಸ್ಸು ಮತ್ತು ಜಡದಿಂದ ಆವರಿಸಲ್ಪಟ್ಟಿರುತ್ತಾರೆ. ನಮ್ಮ ಪ್ರಾರಂಭಗಳು ಮಾತ್ರ ಶಕ್ತಿಯುತವಾಗಿಯೇ ಇರುತ್ತವೆ, ಆದರೆ ಅವು ಅದೇ ಗತಿಯಲ್ಲಿ ಮುಂದುವರೆಯುವದಿಲ್ಲ. ಫಲವನ್ನೂ ನೀಡುವದಿಲ್ಲ...

ನಾವು ಗಂಭೀರವಾಗಿ ಗಮನಿಸದರೆ ಯಾವ ವಸ್ತು ನಮ್ಮಲ್ಲಿ ಇಲ್ಲ ಎನ್ನುವದು ಮನವರಿಕೆಯಾಗುತ್ತದೆ. ನಾವು ಅದನ್ನು ಗಳಿಸಿಕೊಳ್ಳಲು ಶ್ರಮ ಪಡಬೇಕಾಗಿರುವ ಸಂಗತಿ ಎಂದರೆ ಸಾಮರ್ಥ್ಯ–ದೈಹಿಕ ಸಾಮರ್ಥ್ಯ, ಮಾನಸಿಕ ಸಾಮರ್ಥ್ಯ. ನೈತಿಕ ಸಾಮರ್ಥ್ಯಗಳಿಗಾಗಿ ಶ್ರಮಿಸಬೇಕಾಗಿದೆ. ಇವೆಲ್ಲವುಗಳಿಗಿಂತಲೂ ಮುಖ್ಯವಾಗಿ ಎಂದೆದಿಂಗೂ ಕ್ಷಯವಾಗದ, ನಾಶವಾಗದ ಮತ್ತು ಎಂದೆಂದಿಗೂ ಸರ್ವಸ್ವಕ್ಕೂ

ಆಧಾರವಾಗಿರುವ ಆಧ್ಯಾತ್ಮಿಕ ಸಾಮರ್ಥ್ಯವನ್ನು ಪಡೆದುಕೊಳ್ಳುವದಾಗಿದೆ. ಆಗ ಉಳಿದುದೆಲ್ಲವೂ ಸಹಜವಾಗಿ ನಮ್ಮಲ್ಲಿ ಅಳವಟ್ಟುಕೊಳ್ಳಬಹುದು. ಇಂತಹ ಸಾಮರ್ಥ್ಯವಿಲ್ಲದಿದ್ದರೆ ನಮಗೆ ಕೈಯಿದ್ದರೂ ಬೀಸದ ಸ್ಥಿತಿಯಲ್ಲಿರುತ್ತೇವೆ. ಕಾಲಿದ್ದರೂ ಚಲಿಸಲಾಗದೇ ಉಳಿದು ಕೇವಲ ಕನಸಿನಲ್ಲಿ ಬದುಕುವ ಜನರಂತೆ ಆಗುತ್ತೇವೆ.

**ಕೋಟ್ಯಾಂತರ ಜನರ ಶಕ್ತಿ**

ರಾಷ್ಟ್ರ ಎಂದರೇನು? ಮಾತೃಭೂಮಿ ಎಂದರೇನು? ಅದು ಕೇವಲ ಭೂಮಿಯ ಒಂದು ತುಂಡು ಅಥವಾ ತುಣುಕು ಅಲ್ಲವೇ ಅಲ್ಲ. ಅಲಂಕಾರಿಕವಾಗಿರುವ ಪದವೂ ಅಲ್ಲ. ಮನಸ್ಸಿನ ಕಲ್ಪನೆಯಂತೋ ಅಲ್ಲವೇ ಅಲ್ಲ. ಅದು ‘ಬಲಾಢ್ಯ ಶಕ್ತಿ’! ಕೋಟಿ ಕೋಟಿ ಘಟಕಗಳಿಂದ ಸಂಯೋಜಿತಗೊಂಡು ‘ರಾಷ್ಟ್ರ’ವಾಗಿರುತ್ತದೆ. ಭವಾನಿಯ ಮಹಿಷಮರ್ದಿನಿಯ ಸ್ವರೂಪದಲ್ಲಿ ಕೋಟ್ಯಾನುಕೋಟಿ ದೇವತೆಗಳ ‘ಶಕ್ತಿ’ಯು ಸತ್ತೆಯಾಗಿ ಸಂಯೋಜನೆಗೊಂಡು, ಒಂದು ಶಕ್ತಿಯ ಸಮೂಹವೇ ಆಗಿ, ಸಮ್ಮಿಲನಗೊಂಡು ಜೊತೆಗೆ ಏಕತೆಯಲ್ಲಿ ಬೆಸೆದಂತೆ ಆ ಸ್ವರೂಪವಿರುತ್ತದೆ. ಈ ಶಕ್ತಿಯನ್ನೇ ನಾವು ‘ಭವಾನಿ ಭಾರತೀ’ ಎಂದು ಕರೆಯುತ್ತೇವೆ. ಭವಾನಿ ಭಾರತಿಯು ಕೋಟಿ ಕೋಟಿ ಜನರ ‘ಶಕ್ತಿ’ಯಾಗಿದ್ದಾಳೆ. ಆ ‘ಶಕ್ತಿ’ಯ ಜೀವಂತ ಸ್ವರೂಪವೇ ಏಕತೆಯಾಗಿದೆ; ಆದರೆ ಇದೀಗ ಅವಳು ನಿಷ್ಕ್ರಿಯಳಾಗಿದ್ದಾಳೆ. ತಮಸ್ಸಿನ ಮಾಯಾ–ಜಾಲದೊಳಗೆ ಬಂಧಿಯಾಗಿದ್ದಾಳೆ, ಆಕೆಯ ಮಕ್ಕಳು ಅಜ್ಞಾನ ಮತ್ತು ತಮಸ್ಸಿನ ಭೋಗದಲ್ಲಿ ಮುಳುಗಿದ್ದಾರೆ. ಈ ರೀತಿಯಲ್ಲಿ ಆವರಣಗೊಂಡಿರುವ ತಮಸ್ಸನ್ನು ತೊಲಗಿಸಬೇಕಾದರೆ ನಮ್ಮೊಳಗಿರುವ ಬ್ರಹ್ಮತ್ವವನ್ನು ಜಾಗ್ರತಗೊಳಿಸಿಕೊಳ್ಳಬೇಕಿದೆ.

*

ಭಾರತವು ಎಂದಿಗೂ ನಾಶವಾಗುವದಿಲ್ಲ. ನಮ್ಮ ಜನಾಂಗವೂ ವಿನಾಶಕ್ಕೆ ಸಿಲುಕಲಾರದು. ಏಕೆಂದರೆ ಮನುಕುಲದ ಎಲ್ಲಾ ವಿಭಾಗಗಳ ಮಧ್ಯದಲ್ಲಿಯೂ, ಭಾರತಕ್ಕೆ ಅತ್ಯುನ್ನತವಾದ ಮತ್ತು ಅತ್ಯಂತ ಭವ್ಯವಾದ ವಿಧಿ ಲಿಖಿತವನ್ನು ಮತ್ತು ಭವಿಷ್ಯತ್ತಿನ ಮಾನವ ಜನಾಂಗಕ್ಕೆ ಅತ್ಯವಶ್ಯವಾದುದನ್ನು ಭಾರತಕ್ಕಾಗಿಯೇ ಕಾಯ್ದಿರಿಸಲಾಗಿದೆ. ಇಡೀ ಜಗತ್ತಿನ ಮುಂದಿನ ಧರ್ಮಕ್ಕಾಗಿ “ಶಾಶ್ವತ”ವಾಗಿರುವ ಧರ್ಮವೆಂದೇ ಇರುವ ಧರ್ಮವಾಗಿ, ವಿಜ್ಞಾನವಾಗಿ ಮತ್ತು ತತ್ತ್ವಶಾಸ್ತ್ರಗಳನ್ನೂ ಸಮನ್ವಯಗೊಳಿಸಿಕೊಂಡು ಮನುಕುಲವನ್ನು ಒಂದು ಆತ್ಮಸ್ವರೂಪವಾಗಿ–

ಸುವದಕ್ಕಾಗಿ, ತನ್ನನ್ನು ತಾನೇ ಮುಂದೆ ಕಳಿಸುತ್ತಿರುವವಳು "ಈಕೆಯೇ" ಆಗಿದ್ದಾಳೆ. ನೈತಿಕತೆಯ ಕ್ಷೇತ್ರದಲ್ಲಿ ಜೊತೆಗೆ ಮಾನವೀಯತೆಯಿಂದ ಅನಾಗರಿಕತೆಯನ್ನು ನಿವಾರಿಸಿಕೊಂಡು ಶುದ್ಧೀಕರಿಸುವದರ ಸಲುವಾಗಿ ಮತ್ತು ಜಗತ್ತನ್ನು ಆರ್ಯರನ್ನಾಗಿಸುವದೇ ಅವಳ ಉದ್ದೇಶವಾಗಿದೆ. ಇದನ್ನು ರೂಪಿಸಲು ಅವಳು ತನ್ನನ್ನು ತಾನೇ ಮರಳಿ ಆರ್ಯಳನ್ನಾಗಿಸಿಕೊಳ್ಳುವ ಕ್ರಿಯೆ ಈಡೇರಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/79–84**

**ಶ್ರೀಮಾತೆಯವರ ಸಂದೇಶ**

ಯಾವಾಗ ನೀನು ಶ್ರೀಮಾತೆಯವರನ್ನು 'ಭವಾನಿ' ಎಂದರೆ ಯಾರು ಎಂದು ಕೇಳಿದೆಯೋ, ಆಗ ಆಕೆಯೇ ನಿನಗೆ 'ನಾನು ಈ ಜಗತ್ತಿನ ಮತ್ತು ನಿಮ್ಮಲ್ಲಿರುವ ಆ ಶಾಶ್ವತದಿಂದ ಪ್ರವಹಿಸಿ ಬರುವ "ಅನಂತ" ಶಕ್ತಿಯ ಝರಿಯೇ ನಾನು' ಎಂದು 'ವಿಶ್ವ ಮಾತೆ ನಾನು, ಜಗತ್ತುಗಳ ಮಾತೆ ನಾನು ಎಂದು ಉತ್ತರಿಸಿದ್ದಾಳೆ. ಈ ಪವಿತ್ರ ಭೂಮಿಯ, ಅವಳ ಮಣ್ಣಿನಿಂದಾದ ಮತ್ತು ಅವಳ ಗಾಳಿ, ಬೆಳಕಿನಿಂದ ರೂಪಿತಗೊಂಡ ಜೊತೆಗೆ ಈ ಆರ್ಯ ಭೂಮಿಯ ಮಕ್ಕಳಿಗೆ, ನಾನು ಭವಾನಿ ಭಾರತಿಯಾಗಿದ್ದೇನೆ ಮತ್ತು ಭಾರತ ಮಾತೆಯಾಗಿದ್ದೇನೆ' ಎಂದು ಉತ್ತರಿಸಿದ್ದಾಳೆ.

ಆಗ ನೀವು, 'ನಾವೇಕೆ ಭವಾನಿ ಮಾತೆಗೆ ಗುಡಿಯನ್ನು ಕಟ್ಟಬೇಕು' ಎಂದು ಕೇಳಿದರೆ, ಅದಕ್ಕೂ ಆಕೆಯೇ ಕೊಟ್ಟ ಉತ್ತರ, 'ಏಕೆಂದರೆ ಅದಕ್ಕೇ ನಾನೇ ಆದೇಶ ಮಾಡಿದ್ದೇನೆ ಮತ್ತು ಅಲ್ಲಿ ಭವಿಷ್ಯದ ಧರ್ಮದ ಕೇಂದ್ರವನ್ನು ನಿರ್ಮಿಸಿ ಶಾಶ್ವತದ ಸಂಕಲ್ಪವನ್ನು ಮುಂದುವರೆಸಬೇಕಾಗಿದೆ. ಜೊತೆಗೆ ಅರ್ಹತೆಯನ್ನು ಸಂಪಾದಿಸಿ–ಕೊಳ್ಳುವ ಈ ಜನ್ಮದಲ್ಲಿಯೂ ಮತ್ತೆ ಮುಂದಿನ ಜನ್ಮಗಳಲ್ಲಿಯೂ ಶಕ್ತಿಶಾಲಿಯಾಗಿ ಶ್ರೇಷ್ಠತೆಯನ್ನು ಪಡೆಯುವ ಸಲುವಾಗಿ' ಎಂದೇ ಅಲ್ಲವೇ ಅವಳು ಹೇಳುತ್ತಿರುವದು. ಒಂದು ರಾಷ್ಟ್ರವನ್ನು ಕಟ್ಟಲು ನೀವು ಸಹಾಯ ಮಾಡುತ್ತಿರಬಹುದು, ಯುಗವನ್ನು ಕ್ರೋಢೀಕರಿಸಿ ಜಗತ್ತನ್ನೂ ಆರ್ಯರನ್ನಾಗಿಸಬಹುದು. ಆಗ ಈ ರಾಷ್ಟ್ರವು ನಿನ್ನದೇ ಆಗಿರುತ್ತದೆ. ಆ ಯುಗವು ನಿನ್ನ ಮತ್ತು ನಿನ್ನ ಸಂತತಿಯ ಯುಗವಾಗಿರುತ್ತದೆ. ಈ ಜಗತ್ತು ಕೇವಲ ಸಮುದ್ರ ಮತ್ತು ಪರ್ವತಗಳಿಂದ ಸುತ್ತುವರೆದ ಭೂಮಿಯ ತುಣುಕು ಅಲ್ಲ, ಅದು ಆಕೆಯ ಕೋಟ್ಯಾನುಕೋಟಿ ಜನರಿಂದ ತುಂಬಿ ತುಳುಕುವ ಪೃಥ್ವಿಯೇ ಆಗಿರುತ್ತದೆ.

ಬನ್ನಿ, ಬನ್ನಿ, ಶ್ರೀಮಾತೆಯ ಕರೆಗೆ ಕಿವಿಗೊಡಿ. ಆಕೆ ನಿಮ್ಮ ಹೃದಯದಲ್ಲಿ 'ತನ್ನಷ್ಟಕ್ಕೆ ತಾನೇ' ಪ್ರಕಟಗೊಳ್ಳಲು ಮತ್ತು ಆರಾಧಿಸಲ್ಪಡಲು ಈಗಲೂ ಕಾಯುತ್ತಿದ್ದಾಳೆ. ಆದರೆ ಈಗ ಅವಳು ನಿಷ್ಕ್ರಿಯಳಾಗಿದ್ದಂತೆ ಕಾಣುತ್ತಿದೆ. ಏಕೆಂದರೆ ನಮ್ಮಲ್ಲಿರುವ ದೇವತೆಯನ್ನು ತಮಸ್ಸಿನಿಂದ ಮರೆಮಾಚಲಾಗಿದೆ. ಅವಳು ದುಃಖಿತಳಾಗಿದ್ದಾಳೆ. ಏಕೆಂದರೆ ಅವಳ ಮಕ್ಕಳೇ ಅವಳನ್ನು ಸಹಾಯಕ್ಕಾಗಿ ಕರೆಯುತ್ತಿಲ್ಲ. ನಿಮ್ಮ ಅಂತರಂಗದಲ್ಲಿ ಅವಳ ಸ್ಫೂರ್ತಿಯನ್ನು ಅನುಭವಿಸಿದಾಗ, ಸ್ವಾರ್ಥದ ಕಪ್ಪು ಮೇಲ್ಪದರನ್ನು ಕಿತ್ತೆಸೆಯಲಾಗುತ್ತದೆ. ಸೋಮಾರಿತನದ ಗೋಡೆಗಳ ಬಂಧನವನ್ನು ಒಡೆಯಲಾಗುತ್ತದೆ. ಪ್ರತಿಯೊಬ್ಬರೂ ತಮಗನಿಸದಂತೆಯೆ ಪ್ರಚೋದನೆಗೊಂಡು ಆಕೆಗೆ ಸಹಾಯ ಮಾಡುತ್ತಾರೆ. ಅವರವರ ಶರೀರ ಸಾಮರ್ಥ್ಯಕ್ಕೆ ಅನುಗುಣವಾಗಿ, ಬುದ್ಧಿಯೊಂದಿಗೆ, ಮತ್ತು ಮಾತು ಅಥವಾ ಸಂಪತ್ತಿನೊಡನೆ ಅಥವಾ ಪ್ರಾರ್ಥನೆಯ ಮೂಲಕ ಆರಾಧನೆಯೊಂದಿಗೆ ತೊಡಗಿಕೊಳ್ಳುತ್ತಾರೆ. ಅವಳ ಕರೆಯನ್ನು ಕೇಳಿಯೂ ಯಾರು ಹಿಂದೆ ಸರಿಯುತ್ತಾರೆಯೋ, ಕೇಳಿಸಿಕೊಳ್ಳದಂತೆ ನಡೆದುಕೊಳ್ಳುತ್ತಾರೆಯೋ, ಅಂಥವರ ವಿರುದ್ಧ ಹಿಂಜರಿಯಬೇಡಿ. ಒಂದು ದಿನ ಅವಳೇ ಬಂದಾಗ, ಆ ರೀತಿಯಲ್ಲಿ ಕೇಳಿಸಿಕೊಳ್ಳದವರ ಮೇಲೆ ಕ್ರೋಧಿತಗೊಳ್ಳುತ್ತಾಳೆ. ಆದರೆ, ಯಾರು ಆಕೆಯ ಆಗಮನದಲ್ಲಿ ಸ್ವಲ್ಪವೇ ಸಹಕಾರಿಯಾಗಿದ್ದರೂ, ಅವರಿಗೆ 'ಶ್ರೀಮಾತೆ'ಯ ವದನವು ಸೌಂದರ್ಯದಿಂದ ತುಂಬಿ ತೇಜೋಮಯವಾಗಿ ಮತ್ತು ಕರುಣಾಮಯದಿಂದಲೇ ಕಾಣಿಸಿಕೊಳ್ಳುತ್ತಾಳೆ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6/89**

ಭಾರತದ ಭವಿಷ್ಯವು ಬಹಳ ಸ್ಪಷ್ಟವಾಗಿದೆ. ಭಾರತವು 'ಗುರು'ವಾಗಿದೆ. ಜಗತ್ತಿನ ಭವಿಷ್ಯದ ರೂಪುರೇಷೆಯು ಭಾರತವನ್ನೇ ಅವಲಂಬಿಸಿದೆ. ಭಾರತವು ನಿತ್ಯ ಸ್ಪಂದನ ಆತ್ಮವಾಗಿದೆ. ಭಾರತವು ಜಗತ್ತಿನಲ್ಲಿ ಆಧ್ಯಾತ್ಮಿಕ ಜ್ಞಾನದ ಸಾಕಾರ ರೂಪವಾಗಿದೆ. ಭಾರತದ ಸರಕಾರವು ಈ ಕ್ಷೇತ್ರದಲ್ಲಿ ಭಾರತದ ಮಹತ್ವವೇನು ಎನ್ನುವದನ್ನು ಗುರುತಿಸಲೇಬೇಕು ಹಾಗೂ ಅದಕ್ಕೆ ಅನುಗುಣವಾಗಿಯೇ ಕ್ರಿಯೆಗಳನ್ನೂ ಯೋಜಿಸಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/353 – ಶ್ರೀಮಾತೆ**

## ಜಾಗ್ರತ ಭಾರತ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**



ಇದು ಇಡೀ ಜಗತ್ತಿಗೆ ಸಂಬಂಧಿಸಿದಂತೆ, ಭಾರತಕ್ಕೆ, ಅದರ ಭವಿಷ್ಯದ ನಿಯತಿಯನ್ನು ಮತ್ತು ಮುಂದಿನ ಶತಮಾನದ ಕಡೆಗಿನ ನಡೆಯನ್ನು ಪ್ರಭಾವಿಯಾಗಿ ನಿರ್ಧರಿಸುವ ಸಮಯವಾಗಿದೆ. ಆ ಶತಮಾನ ಸಾಮಾನ್ಯವಾದ ಶತಮಾನವಲ್ಲ, ಒಂದು ಮಹೋನ್ನತ ಪರಿವರ್ತನೆಯ ಶತಮಾನ, ಮಾನವ ಕುಲದ ಆಂತರಿಕ ಮತ್ತು ಬಾಹ್ಯ ಇತಿಹಾಸದಲ್ಲಿ ಒಂದು ಅಗಾಧವಾದ ಹಸ್ತಾಂತರದ ಶತಮಾನ. ನಾವು ಈಗ ಕಾರ್ಯಪ್ರವೃತ್ತರಾದರೆ ನಮ್ಮ ಕರ್ಮದ ಪ್ರತಿಫಲವು ನಮಗೆ ದೊರೆಯುತ್ತದೆ ಮತ್ತು ಈ ಸಮಯದಲ್ಲಿ ಈ ರೀತಿಯ ಪ್ರತಿಯೊಂದು ಕರೆಯೂ ಒಂದು ಅವಕಾಶವಾಗಿದೆ, ಒಂದು ಆಯ್ಕೆಯಾಗಿದೆ ನಮ್ಮ ಜನರ ಆತ್ಮಕ್ಕೆ ಕೊಡಮಾಡಿದ ಒಂದು ಪರೀಕ್ಷೆಯಾಗಿದೆ. ಪ್ರತಿಯೊಂದರಲ್ಲೂ ಅದು ತನ್ನ ಅಸ್ತಿತ್ವದ ಪೂರ್ಣ ಎತ್ತರಕ್ಕೆ ಏರಿದೆ ಮತ್ತು ಅದರ ಪರ ನಿಯತಿಯ ಒಡೆಯನ ಪ್ರತ್ಯಕ್ಷ ಮಧ್ಯಸ್ಥಿಕೆಗೆ ಅರ್ಹವಾಗಿದೆ ಎಂದು ಹೇಳಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/413 – ಶ್ರೀ ಅರವಿಂದರು**

## ನಿಜವಾದ ತೊಂದರೆ

ನಿಜವಾದ ಕಷ್ಟ ನಮ್ಮ ಸುತ್ತಮುತ್ತ ಇರದೆ, ಯಾವಾಗಲೂ ನಮ್ಮಲ್ಲಿಯೇ ಇದೆ. ಇಚ್ಛೆ, ನಿರಾಸಕ್ತಿ ಮತ್ತು ನಂಬಿಕೆ, ಈ ಮೂರು ಸಂಗತಿಗಳು ಮನುಷ್ಯರನ್ನು ಅಜೇಯರನ್ನಾಗಿ ಮಾಡಲು ಅವಶ್ಯಕವಾಗಿವೆ. ನಮ್ಮನ್ನು ನಾವು ಮುಕ್ತಗೊಳಿಸಿ–ಕೊಳ್ಳುವ ಇಚ್ಛೆಯು ನಮ್ಮಲ್ಲಿರಬಹುದು, ಆದರೆ ಅದಕ್ಕೆ ಬೇಕಾಗಿರುವಷ್ಟು ನಂಬಿಕೆಯ ಅಭಾವವಿರಬಹುದು. ನಮ್ಮ ಅಂತಿಮ ವಿಮೋಚನೆಯಲ್ಲಿ ನಮಗೆ ನಂಬಿಕೆ ಇರಬಹುದು, ಆದರೆ ಅಗತ್ಯವಾದ ಸಾಧನಗಳನ್ನು ಬಳಸುವ ಇಚ್ಛೆಯ ಅಭಾವ–ವಿರಬಹುದು. ಒಂದು ವೇಳೆ ಇಚ್ಛೆ ಮತ್ತು ನಂಬಿಕೆಗಳೆರಡೂ ಇದ್ದರೂ ಸಹ, ನಮ್ಮ ಕಾರ್ಯದ ಫಲಪ್ರಾಪ್ತಿಗಾಗಿ ಹಿಂಸಾತ್ಮಕ ಲಗತ್ತಿನಿಂದ ಅಥವಾ ಕೆಟ್ಟ ಪ್ರತಿಕ್ರಿಯೆಗಳನ್ನು ಉಂಟುಮಾಡುವ ದ್ವೇಷದ ಭಾವೋದ್ರೇಕಗಳಿಂದ, ಕುರುಡು ಪ್ರಚೋದನೆಯಿಂದ ಅಥವಾ ಆತುರದ ಬಲವಂತದಿಂದ ನಾವು ಅವುಗಳನ್ನು ಬಳಸಬಹುದು. ಈ ಕಾರಣಕ್ಕಾಗಿ, ಅಂತಹ ದೊಡ್ಡ ಪ್ರಮಾಣದ ಕಾರ್ಯದಲ್ಲಿ, ಹಿಂದೆಂದೂ ಕಂಡಿರದ ಅಡೆತಡೆಗಳನ್ನು ಜಯಿಸಲು ಮನಸ್ಸು ಮತ್ತು ದೇಹದ ಶಕ್ತಿಗಿಂತ ಹೆಚ್ಚಿನ ಶಕ್ತಿಯ ಮೊರೆಹೋಗವುದು ಅವಶ್ಯಕ. ಇದು ಸಾಧನೆಯ ಅವಶ್ಯಕತೆಯಾಗಿದೆ.

ಸರ್ವಶಕ್ತನಾದ, ಸರ್ವವ್ಯಾಪಿಯಾದ, ಸರ್ವಜ್ಞನಾದ ದೇವರು ನಮ್ಮೊಳಗಿದ್ದಾನೆ; ನಾವು ಮತ್ತು ಅವನು (ದೇವರು) ಒಂದೇ ಸ್ವರೂಪದವರಾಗಿದ್ದೇವೆ, ಒಂದು ವೇಳೆ ನಾವು ಆ ಭಗಂವತನ ಸಂಪರ್ಕಕ್ಕೆ ಬಂದರೆ ಮತ್ತು ನಮ್ಮನ್ನು ನಾವು ಅವನಿಗೆ ಸಮರ್ಪಿಸಿಕೊಂಡರೆ ಅವನು ನಮ್ಮಲ್ಲಿ ತನ್ನ ಶಕ್ತಿಯನ್ನು ಸುರಿಸುತ್ತಾನೆ, ಆಗ ನಾವೂ ಸಹ ದೈವತ್ವದ ಪಾಲನ್ನು, ಸತ್ವಶಕ್ತತೆಯ, ಸರ್ವವ್ಯಾಪಕತ್ವದ, ಸರ್ವಜ್ಞತ್ವದ ನಮ್ಮ ಅಂಶವನ್ನು ಹೊಂದಿರುವ ಅರಿವು ನಮಗಾಗುತ್ತದೆ. ಕ್ರಮಿಸಬೇಕಾದ ಮಾರ್ಗವು ದೀರ್ಘವಾಗಿದೆ, ಆದರೆ ಸ್ವಯಂ ಶರಣಾಗತಿಯು ಅದನ್ನು ಕಿರಿದಾಗಿಸುತ್ತದೆ; ಪಥವು ಕ್ಲಿಷ್ಟಕರವಾಗಿದೆ, ಆದರೆ ಪರಿಪೂರ್ಣ ನಂಬಿಕೆ ಅದನ್ನು ಸುಲಭಗೊಳಿಸುತ್ತದೆ.

ಸಂಕಲ್ಪವು ಸರ್ವಶಕ್ತವಾಗಿದೆ, ಆದರೆ ಅದು ನಿಸ್ವಾರ್ಥವಾದ, ಶಾಂತವಾದ, ಫಲಿತಾಂಶಗಳ ಬಗ್ಗೆ ನಿಶ್ಚಿಂತವಾದ ದೈವೀ ಸಂಕಲ್ಪವಾಗಿರಬೇಕು. "ಒಂದು ಸಾಸಿವೆ ಕಾಳಿನಷ್ಟಾದರೂ ನಂಬಿಕೆಯನ್ನು ನೀವು ಹೊಂದಿದ್ದರೆ" ಏಸುವು ಹೇಳಿದ, "ಈ ಬೆಟ್ಟಕ್ಕೆ ಬಾ ಎಂದು ನೀವು ಹೇಳಿದರೆ, ಅದು ನಿಮ್ಮಲ್ಲಿಗೆ ಬರುತ್ತದೆ." ಇಲ್ಲಿ ನಂಬಿಕೆ ಎಂಬ ಪದದ ಅರ್ಥವೇನಾಗಿತ್ತೆಂದರೆ, ನಂಬಿಕೆಯು ನಿಜವಾಗಿಯೂ ಪರಿಪೂರ್ಣ ಶ್ರದ್ಧೆಯೊಂದಿಗೆ ಜೊತೆಗೂಡಿತ್ತೆಂದು ಅರ್ಥ. ಶ್ರದ್ಧೆಯು ತರ್ಕಿಸುವುದಿಲ್ಲ, ಅದು

ತಿಳಿದುಕೊಂಡಿದೆ; ಅದು (ಶ್ರದ್ಧೆ) ನೋಟವನ್ನು ಸಮಾದೇಶಿಸುವುದರಿಂದ ಮತ್ತು ದೇವರ ಸಂಕಲ್ಪಗಳನ್ನು ನೋಡುವುದರಿಂದ ಮತ್ತು ದೇವರ ಸಂಕಲ್ಪವೇನೆಂದು ಅದು ತಿಳಿದುಕೊಂಡಿರುವುದರಿಂದ, ಅದು ಸಂಭವಿಸಲೇಬೇಕು. ಶ್ರದ್ಧೇಯು ಕುರುಡಲ್ಲ, ಆದರೆ ಆಧ್ಯಾತ್ಮಿಕತೆಯ ದೃಷ್ಟಿಯನ್ನು ಬಳಸುವುದರಿಂದ ಸರ್ವಜ್ಞನಾಗಬಹುದು.

ಸಂಕಲ್ಪವೂ ಕೂಡ ಸರ್ವವ್ಯಾಪಿ. ಅದು ತನ್ನ ಸಂಪರ್ಕಕ್ಕೆ ಬರುವ ಎಲ್ಲರಲ್ಲಿಯೂ ತನ್ನನ್ನು ತಾನು ಹರಡಿಕೊಳ್ಳಬಹುದು ಮತ್ತು ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ತನ್ನ ಶಕ್ತಿ, ಆಲೋಚನೆ, ಮತ್ತು ಉತ್ಸಾಹಗಳ ಅಂಶವನ್ನು ಅವರಿಗೆ ನೀಡಬಹುದು. ನಿಸ್ವಾರ್ಥ ಮತ್ತು ನಿಸ್ಸಂದೇಹವಾದ ಸಂಕಲ್ಪದ ಚಲಾವಣೆಯ ಮೂಲಕ ಒಬ್ಬಂಟಿ ಮನುಷ್ಯನ ಚಿಂತನೆಯು ರಾಷ್ಟ್ರದ ಚಿಂತನೆಯಾಗಬಹುದು. ಒಬ್ಬನೇ ಒಬ್ಬ ನಾಯಕನ ಸಂಕಲ್ಪವು ಮಿಲಿಯನ್‌ಗಟ್ಟಲೇ (ಲಕ್ಷಾಂತರದಲ್ಲಿ) ಹೇಡಿಗಳ ಹೃದಯದಲ್ಲಿ ಧೈರ್ಯವನ್ನು ತುಂಬಬಹುದು.

ಇದು ನಾವು ಪೂರ್ಣಗೊಳಸಬೇಕಾದ ಸಾಧನೆಯಾಗಿದೆ. ಇದು ನಮ್ಮ ವಿಮೋಚನೆಯ ಬೇಡಿಕೆಯಾಗಿದೆ. ನಾವು ಅಪೂರ್ಣವಾದ ಸಂಕಲ್ಪವನ್ನು ಅಪೂರ್ಣ ನಂಬಿಕೆ ಮತ್ತು ಅಪೂರ್ಣ ನಿರಾಸಕ್ತಿಯೊಂದಿಗೆ ಬಳಸುತ್ತಿದ್ದೇವೆ. ಆದರೂ ನಮ್ಮ ಮುಂದಿರುವ ಕಾರ್ಯವು ಪರ್ವತವನ್ನು ಚಲಿಸುವುದಕ್ಕಿಂತ ಕಡಿಮೆ ಕಷ್ಟಕರವೇನಲ್ಲ.

ಅದನ್ನು ಮಾಡಬಲ್ಲಂಥ ಶಕ್ತಿ ಅಸ್ತಿತ್ವದಲ್ಲಿದೆ. ಆದರೆ ಅದು ನಮ್ಮೊಳಗಿನ ರಹಸ್ಯ ಕೋಣೆಯಲ್ಲಿ ಅಡಗಿದೆ ಮತ್ತು ಆ ಕೋಣೆಯ ಕೀಲಿಯು ದೇವರ ಕೈಯಲ್ಲಿದೆ. ನಾವು ಅವನನ್ನು ಹುಡುಕೋಣ ಮತ್ತು ಅದನ್ನು ಪಡೆದುಕೊಳ್ಳೋಣ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/536–37**

## ಗತ ಪ್ರಾತಃಕಾಲಗಳು ಮತ್ತು ಭವಿಷ್ಯತ್ಕಾಲದ ಅಪರಾಹ್ನಗಳು

ಈ ಮಹಾನ್ ಮತ್ತು ಪುರಾತನ ರಾಷ್ಟ್ರದ ಗತ ವೈಭವಗಳ ಬಗ್ಗೆ ವಿಷಾದಿಸುವವರು ಅನೇಕರಿದ್ದಾರೆ, ಪತಿತ ಜನರ ನಡುವೆ ಮತ್ತು ನಮ್ಮ ಸಂಕಷ್ಟದ ವರ್ತಮಾನದಲ್ಲಿ ಪುನರಾವರ್ತನೆಗೊಳ್ಳದ ಪ್ರಾಚೀನ ಕಾಲದ ಋಷಿಗಳು, ಚಿಂತನೆಯ ಹಾಗೂ ನಾಗರೀಕತೆಯ ಪ್ರೇರಿತ ಸೃಷ್ಟಿಕರ್ತರು, ನಮ್ಮ ವೀರೋಚಿತ ಕಾಲದ ಪವಾಡವಾಗಿದ್ದರು ಎನ್ನುವಂತೆ ಮಾತನಾಡುವವರು ಅನೇಕರಿದ್ದಾರೆ. ಇದೊಂದು ದೋಷ ಮತ್ತು ಮೂರು ಬಾರಿ ದೋಷ. ನಮ್ಮದು ಸನಾತನ ಭೂಮಿ,

ಸನಾತನ ಜನರ, ಸನಾತನ ಧರ್ಮದ, ಶಕ್ತಿ, ಹಿರಿಮೆ, ಪಾವಿತ್ರ್ಯವು ಮೋಡ ಮುಸುಕಿದಂತೆ ಕಾಣಬಹುದು ಆದರೆ ಹಾಗಾಗಲಿಲ್ಲ, ಒಂದು ಕ್ಷಣವೂ ಸಂಪೂರ್ಣವಾಗಿ ನಿಲ್ಲಲಿಲ್ಲ. ವೀರರು, ಋಷಿಗಳು, ಸಂತರು, ನಮ್ಮ ಭಾರತೀಯ ಮಣ್ಣಿನ ನೈಸರ್ಗಿಕ ಫಲಗಳು; ಮತ್ತು ಅವರು ಜನ್ಮ ತಾಳದ ಕಾಲವೇ ಇರಲಿಲ್ಲ. ನಂತರದ ಯುಗದ ಋಷಿಗಳ ಪಟ್ಟಿಯಲ್ಲಿ, ನವ ಭಾರತವನ್ನು ಸೃಷ್ಟಿಸುವ ಪುನರುಜ್ಜೀವನಗೊಳಿಸುವ ಒಂದೇ ಮಾತರಂ ಎಂಬ ಮಂತ್ರವನ್ನು ನೀಡಿದ ವ್ಯಕ್ತಿಯ ಹೆಸರನ್ನು ಸೇರಿಸಲೇಬೇಕೆಂಬುದನ್ನು ಕೊನೆಗೂ ನಾವು ಮನಗಂಡೆವು.

ಋಷಿಯು ಸಂತನಿಗಿಂತ ಭಿನ್ನ. ಆತನ ಜೀವನವು ಶ್ರೇಷ್ಠವಾದ ಪಾವಿತ್ರ್ಯತೆಯಿಂದ ಅಥವಾ ಆತನ ಚಾರಿತ್ರ್ಯವು ಪರಿಪೂರ್ಣ ಸೌಂದರ್ಯದಿಂದ ಪ್ರಧಾನವಾಗಿ ಇರದೇ ಇರಬಹುದು. ಅವನು ಸ್ವತಃ ಏನಾಗಿದ್ದನೋ ಅದರಿಂದ ಅವನು ಶ್ರೇಷ್ಠನಲ್ಲ, ಆದರೆ ಅವನು ಏನನ್ನು ವ್ಯಕ್ತಪಡಿಸಿದನೊ ಅದರಿಂದ ಶ್ರೇಷ್ಠನಾಗಿದ್ದಾನೆ. ಒಂದು ಶ್ರೇಷ್ಠ ಮತ್ತು ಚೈತನ್ಯಗೊಳಿಸುವ ಸಂದೇಶವನ್ನು ರಾಷ್ಟ್ರಕ್ಕೆ ಅಥವಾ ಮಾನವ ಕುಲಕ್ಕೆ ನೀಡಬೇಕಾಗಿದೆ; ಅದಕ್ಕಾಗಿ, ಸಂದೇಶದ ಪದಗಳನ್ನು ರೂಪಿಸಲು ದೇವರು ಈ ಋಷಿಯ (ಮುಖವನ್ನು) ಆರಿಸಿಕೊಂಡಿದ್ದಾನೆ. ಒಂದು ಮಹತ್ವದ ದೂರದೃಷ್ಟಿಯನ್ನು ಅನಾವರಣಗೊಳಿಸ–ಬೇಕಾಗಿದೆ; ಹಾಗಾಗಿ ದೇವರು ಅವನ (ಋಷಿಯ) ಕಣ್ಣುಗಳನ್ನು ಮೊದಲು ತೆರೆಯುತ್ತಾನೆ. ಅವನು ಪಡೆದ ಸಂದೇಶವನ್ನು, ಅವನಿಗೆ ದಯಪಾಲಿಸಲಾದ ದೂರದೃಷ್ಟಿಯನ್ನು ತನ್ನಲ್ಲಿರುವ ಎಲ್ಲ ಬಲದಿಂದ ಜಗತ್ತಿಗೆ ಸಾರುತ್ತಾನೆ, ಮತ್ತು ಪ್ರೇರಣೆಯ ಒಂದು ಶ್ರೇಷ್ಠ ಕ್ಷಣದಲ್ಲಿ ಅದನ್ನು ಮನುಷ್ಯರ ಆಂತರಿಕ ಗುಣಗಳನ್ನು ಪ್ರಚೋದಿಸಲು, ಅವರ ಮನಸ್ಸುಗಳನ್ನು ಸ್ಪಷ್ಟಗೊಳಿಸಲು, ಅವರ ಹೃದಯಗಳನ್ನು ವಶಪಡಿಸಿಕೊಳ್ಳಲು ಹಾಗೂ ಅವರ ಸಾಮಾನ್ಯ ಕ್ಷಣಗಳಲ್ಲಿ ಸಾಧ್ಯವಾಗದ ಸಂಗತಿಗಳಿಗೆ ಪ್ರಚೋದಿಸಲು ಉಚ್ಚರಿಸಿದಂಥ ಶಬ್ದಗಳಲ್ಲಿ ವ್ಯಕ್ತಪಡಿಸುತ್ತಾನೆ. ಆ ಪದಗಳು ಮಂತ್ರಗಳು, ಅವುಗಳನ್ನು ಬಹಿರಂಗಪಡಿಸಲು ಜನ್ಮತಾಳಿದವನು ಅವನು, ಮತ್ತು ಅವನು ಆ ಮಂತ್ರದ ಋಷಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/637**

## ತ್ಯಾಗದ ಅವಶ್ಯಕತೆ

ಭಾರತವನ್ನು ರಾಷ್ಟ್ರವಾದಿ ನಂಬಿಕೆಯಿಂದ ತುಂಬಲು ಬಯಸುವವನು ಮೊದಲು ತ್ಯಾಗದ ಈ ಮಹೋನ್ನತವಾದ ಅಗತ್ಯತೆಯನ್ನು ಗುರುತಿಸಬೇಕು.

ಅವನು ಮನಸ್ಸಿನಲ್ಲಿ ನೆಲೆಗೊಳಿಸಬೇಕೆಂದಿರುವ ಸತ್ಯವು ಪ್ರಪಂಚದ ಎಲ್ಲಾ ದೇಶಗಳಲ್ಲಿ ತನ್ನ ಹುತಾತ್ಮರನ್ನು ಹೊಂದಿದೆ ಮತ್ತು ಅದು ಭಾರತದಲ್ಲಿ ಸಾಧ್ಯವಿಲ್ಲ. ಈ ದೇಶದಿಂದ ಆತನು ಕೇಳಿಕೊಳ್ಳುವ ಪ್ರತಿಯೊಂದು ವಿಷಯಕ್ಕೂ ತ್ಯಾಗವು ಬೇಕಾಗುತ್ತದೆ, ಮತ್ತು ಶತಮಾನಗಳಿಂದಲೂ ಅಧೀನದಲ್ಲಿರುವ ದೇಶವು, ಆತನ ಆಲೋಚನೆಯ ಸತ್ಯತೆಗೆ, ಆತನ ನಂಬಿಕೆಯ ಮಹತ್ತುಗಳಿಗೆ ಎಚ್ಚೆತ್ತುಕೊಳ್ಳಬೇಕಾದರೆ, ಅದಕ್ಕೆ ಆತನೇ ಮೊದಲ ಮಾದರಿಯಾಗಬೇಕು....

ರಾಷ್ಟ್ರದಲ್ಲಿ ಆ ದೈವೀ ಐಕ್ಯತೆಯ ಸಾಕ್ಷಾತ್ಕಾರಕ್ಕಾಗಿ ಉತ್ಕಟವಾಗಿ ಹಂಬಲಿಸುವುದು ಮಾತ್ರ ರಾಷ್ಟ್ರೀಯತೆಯಾಗಿದೆ, ಇದರಲ್ಲಿ ಎಲ್ಲ ಪ್ರತ್ಯೇಕ ಘಟಕಗಳು ಬಗೆಬಗೆಯಾಗಿದ್ದಾಗ್ಯೂ, ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ಅಂಶಗಳಾಗಿ ಅವುಗಳ ಪಾತ್ರಗಳು ಎಷ್ಟೇ ಅಸಮವಾಗಿದ್ದರೂ ಅವುಗಳು ಮೂಲಭೂತವಾಗಿ ಏಕವಾಗಿವೆ ಮತ್ತು ಸಮನಾಗಿವೆ. ಭಾರತವು ವಿಶ್ವದೆದುರು ಸ್ಥಾಪಿಸಬೇಕೆಂದಿರುವ ರಾಷ್ಟ್ರೀಯತೆಯ ಆದರ್ಶದಲ್ಲಿ, ಮನುಷ್ಯ–ಮನುಷ್ಯರ ನಡುವೆ, ಜಾತಿ–ಜಾತಿಗಳ ನಡುವೆ, ವರ್ಗ–ವರ್ಗಗಳ ನಡುವೆ ಪ್ರಮುಖವಾದ ಸಮಾನತೆಯೊಂದು ಅಲ್ಲಿರಬೇಕು, ಶ್ರೀ ತಿಲಕ್ ಅವರು ಗುರುತಿಸಿದಂತೆ, ಎಲ್ಲ ಜೀವಿಗಳು ವಿಭಿನ್ನ, ಆದರೆ ದೇಶದಲ್ಲಿ ಅರಿತುಕೊಂಡಂತೆ, ಅವುಗಳು ವಿರಾಟ ಪುರುಷನ ಸಮಾನವಾದ ಹಾಗೂ ಒಗ್ಗೂಡಿದ ಭಾಗಗಳಾಗಿವೆ. ನಮ್ಮ ಧರ್ಮದ ಪುನರಾವರ್ತಿತ ಬೋಧನೆ ಮತ್ತು ಭಾರತೀಯ ರಾಷ್ಟ್ರೀಯತಾವಾದಿಯ ಕೆಲಸವು, ದೇಶದ ಪ್ರತಿಯೊಬ್ಬರಿಗೂ, ಅವರ ದೇಶದ ಧರ್ಮ ಮತ್ತು ತತ್ವಶಾಸ್ತ್ರಗಳ ಆದರ್ಶವನ್ನು ಮನೆ–ಮನೆಗೂ ತಲುಪಿಸುವುದಾಗಿದೆ. ನಾವು ನಿರಂಕುಶ ಪ್ರಭುತ್ವದ ಅಸಹಿಷ್ಣುಗಳಾಗಿದ್ದೇವೆ, ಯಾಕೆಂದರೆ ಈ ಮೂಲಭೂತ ಸಮಾನತೆಯ ರಾಜಕೀಯದಲ್ಲಿ ಅದು ನಿರಾಕರಣೆಯಾಗಿದೆ, ಜಾತಿ ವ್ಯವಸ್ಥೆಯ ಆಧುನಿಕ ವಿರೂಪತೆಗೆ ನಮ್ಮ ವಿರೋಧವಿದೆ, ಯಾಕೆಂದರೆ ಅದು ಸಮಾಜದಲ್ಲಿ ಅದೇ ಮೂಲಭೂತ ಸಮಾನತೆಯ ನಿರಾಕರಣೇಯಾಗಿದೆ. ನಾವು ರಾಜಕೀಯವಾಗಿ ಪ್ರಜಾ ಸತ್ತಾತ್ಮಕ ಏಕತೆಗೆ ರಾಷ್ಟ್ರವನ್ನು ಮರುಸಂಘಟಿಸಲು ಆಗ್ರಹಿಸುತ್ತಿರುವಾಗ, ಮರುಸಂಘಟನೆಯ ಅದೇ ತತ್ವವು ಸಾಮಾಜಿಕವಾಗಿ ತನ್ನನ್ನು ತಾನು ಪ್ರತಿಪಾದಿಸಬೇಕು ಮತ್ತು ಅನಿವಾರ್ಯವಾಗಿ ಪ್ರತಿಪಾದಿಸುತ್ತದೆ ಎನ್ನುವುದನ್ನು ನಾವು ಅಂಗೀಕರಿಸುತ್ತೇವೆ; ನಮ್ಮ ವಿರೋಧಿಗಳು ಊಹಿಸಿದಂತೆ, ನಾವು ರಾಜಕೀಯಕ್ಕೆ ಅದರ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಲು ಬಯಸಿದರೂ

ಸಹ, ನಮ್ಮ ಪ್ರಯತ್ನಗಳು ನಿಷ್ಪ್ರಯೋಜಕವಾಗುತ್ತವೆ, ಏಕೆಂದರೆ ರಾಜಕೀಯದಲ್ಲಿ ಒಮ್ಮೆ ಅರಿತುಕೊಂಡ ತತ್ವವು ಅನಿವಾರ್ಯವಾಗಿ ಸಮಾಜದಲ್ಲಿ ತನ್ನನ್ನು ತಾನು ಪ್ರತಿಪಾದಿಸಬೇಕು. ಯಾವುದೇ ಜನಾಂಗೀಯ ಅಥವಾ ಆನುವಂಶಿಕ ಏಕಸ್ವಾಮ್ಯವು ಭವಿಷ್ಯದ ರಾಷ್ಟ್ರೀಯತಾವಾದಿಯ ಯೋಜನೆಯ, ಮತ್ತು ಯಾವುದರ ಆಗಮನದ ದಿನಕ್ಕಾಗಿ ಅವರು ಶ್ರಮಿಸುತ್ತಿದ್ದಾರೋ, ಆ ಕನಸಿನ ಭಾಗವಾಗಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/677–80**

### ಹಿಂದುತ್ವ ಮತ್ತು ಮಾನವ ನಾಗರಿಕತೆ

ಹಿಂದುತ್ವದ ಈಡೆರಿಕೆಯು ಮಾನವ ನಾಗರಿಕತೆಯ ಅತ್ಯುನ್ನತ ಪ್ರವೃತ್ತಿಗಳ ಈಡೇರಿಕೆಯಾಗಿದೆ ಮತ್ತು ಅದು ಆಧುನಿಕ ಜೀವನದ ಅತ್ಯಂತ ಪ್ರಮುಖವಾದ ಪ್ರೇರಣೆಗಳನ್ನು ಅದರ ವ್ಯಾಪ್ತಿಯಲ್ಲಿ ಒಳಗೊಂಡಿರಲೇಬೇಕು. ಅದು ಪ್ರಜಾ ಪ್ರಭುತ್ವ ಮತ್ತು ಸಮಾಜ ವಾದವನ್ನು ಸಹ ಒಳಗೊಂಡಿರುತ್ತದೆ, ಅವುಗಳನ್ನು ಶುದ್ಧಗೊಳಿಸುವ, ಆರ್ಥಿಕ ಹೊಂದಾಣಿಕೆಗಳ ಮೇಲೆ ಅವುಗಳನ್ನು ಹೆಚ್ಚಿನ ಪ್ರಾಧಾನ್ಯತೆಗೆ ಏರಿಸುವ (ಸಾಧನಗಳಾಗಿವೆ) ಮತ್ತು ಮಾನವಕುಲದ ನೈತಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಯ ಮೇಲೆ ನಿರಂತರವಾಗಿ ಮತ್ತು ಸ್ಪಷ್ಟವಾಗಿ ಅವರ ಕಣ್ಣುಗಳನ್ನು ಇರಿಸಲು ಅವರಿಗೆ ಕಲಿಸುವುದಾಗಿದೆ (ಮುಕ್ತಾಯದ ಹಂತ).

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/685**

### ನಂಬಿಕೆ ಮತ್ತು ನಿಸ್ವಾರ್ಥತೆಯ ಅವಶ್ಯಕತೆ

ದೇವರು ಎಲ್ಲವನ್ನೂ ಮಾಡುತ್ತಿದ್ದಾನೆ. ನಾವೇನೂ ಮಾಡುತ್ತಿಲ್ಲ. ಅವನು ನಮಗೆ ಏನು ನೋವು ಕೊಡುತ್ತಾನೊ ಅದನ್ನು ನಾವು ಅನುಭವಿಸುತ್ತೇವೆ, ಏಕೆಂದರೆ ಇತರರಿಗೆ ಬಲವನ್ನು ನೀಡಲು ನೋವು ಅವಶ್ಯಕವಾಗಿದೆ. ನಾವು ಅವನಿಗೆ ಇನ್ನು ಮುಂದೆ ಬೇಕಾಗಿಲ್ಲ ಎಂದಾಗ ಅವನು ನಮ್ಮನ್ನು ದೂರ ಎಸೆಯುತ್ತಾನೆ. ಪರಿಸ್ಥಿತಿ ಹದಗೆಟ್ಟರೆ, ನಾವು ಜೈಲಿಗೆ ಹೋಗುವುದು ಮಾತ್ರವಲ್ಲ, ನಮ್ಮ ಪ್ರಾಣವನ್ನೂ ತ್ಯಜಿಸಬೇಕಾಗುತ್ತದೆ, ಮತ್ತು ಮುಂದೆ ನಿಂತಂತೆ ಅಥವಾ ಸಂಪೂರ್ಣವಾಗಿ ಅನಿವಾರ್ಯವೆಂದು ತೋರಿದವರನ್ನು, ಅವರ ದೇಹಗಳನ್ನು ದೂರ ಎಸೆಯಲು ಕರೆಯಲ್ಪಟ್ಟಾಗ, ಅದು ಕೂಡ ಬೇಕಾಗಿತ್ತೆಂದು, ದೇವರು ನಮಗೆ ಮಾಡಲು

ಹೇಳಿದ ಕಾರ್ಯವಿದೆಂದು, ಮತ್ತು ದೂರ ಎಸೆಯಲ್ಪಟ್ಟ ಜನರ ಸ್ಥಾನದಲ್ಲಿ ದೇವರು ಇನ್ನೂ ಹೆಚ್ಚಿನ ಜನರನ್ನು ತರುವನೆಂಬುದು ನಮಗೆ ತಿಳಿದು ಬರುತ್ತದೆ. ದೇವರು ನಮ್ಮ ಬೆನ್ನಿಗಿದ್ದಾನೆ. ಅವನೇ ಕಾರ್ಯಕರ್ತ ಮತ್ತು ಅವನೇ ಕಾರ್ಯ. ತನ್ನ ಜನರ ಹೃದಯದಲ್ಲಿ ಅವನು ಅಜರಾಮರ... ಅನೇಕರು ತಮ್ಮ ದೇಶವಾಸಿಗಳಿಗಾಗಿ ಬದುಕುವ, ತಮ್ಮ ದೇಶವಾಸಿಗಳಿಗಾಗಿ ಕಷ್ಟಪಡುವ ಹಂಬಲದಿಂದ ಈ ನಂಬಿಕೆಗೆ ಬಂದಿದ್ದಾರೆ, ಏಕೆಂದರೆ ದೇವರು ನನ್ನಲ್ಲಿ ಮಾತ್ರವಲ್ಲ, ಅವನು ನಿಮ್ಮೆಲ್ಲರೊಳಗೂ ಇದ್ದಾನೆ; ನಾನು ಪ್ರೀತಿಸುವುದು ದೇವರನ್ನು, ನಾನು ದೇವರಿಗಾಗಿ ಕಷ್ಟಗಳನ್ನು ಅನುಭವಿಸಲು ಬಯಸುತ್ತೇನೆ. ಆ ರೀತಿಯಲ್ಲಿ ಅನೇಕರು ದೇವರು ತಮಗೆ ಹೇಳಿದ್ದನ್ನು ಮಾಡಲು ಬಂದಿದ್ದಾರೆ ಮತ್ತು ಮನುಷ್ಯನನ್ನು ಯಾವ ರೀತಿಯಲ್ಲಿ ಮನ್ನಡೆಸಬೇಕೆಂದು ಆತನಿಗೆ ತಿಳಿದಿದೆ. ಅದು ಆತನ ಇಚ್ಛೆಯಾಗಿದ್ದಾಗ, ಆತನು ಅವನನ್ನು ಸರಿಯಾಗಿ ಮುನ್ನಡೆಸುತ್ತಾನೆ.

ಇನ್ನೊಂದು ವಿಷಯ, ಅದೇನೆಂದರೆ, ನಂಬಿಕೆಗೆ ಮತ್ತೊಂದು ಏಕಮಾತ್ರ ಹೆಸರು ನಿಸ್ವಾರ್ಥತೆ... ನಾವು ಬದುಕಲು ಪ್ರಯತ್ನಿಸುತ್ತಿರುವುದು ಧರ್ಮವೊಂದನ್ನು ಆಧರಿಸಿಕೊಂಡು, ಇದು ನಾವು ರಾಷ್ಟ್ರದಲ್ಲಿ, ನಮ್ಮ ದೇಶವಾಸಿಗಳಲ್ಲಿ ದೇವರನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿರುವ ಧರ್ಮವಾಗಿದೆ. ನಮ್ಮ ಮೂವತ್ತು ಕೋಟಿ ಜನರಲ್ಲಿ ನಾವು ಅವನನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ನಮ್ಮಲ್ಲಿ ಕೆಲವರು ಪ್ರಜ್ಞಾಪೂರ್ವಕವಾಗಿ, ಕೆಲವರು ಅರಿವಿಲ್ಲದೆ ಪ್ರಯತ್ನಿಸುತ್ತಿದ್ದೇವೆ, ನಾವು ನಮ್ಮ ಸ್ವ–ಹಿತಾಸಕ್ತಿಗಳಿಗಾಗಿ ಬದುಕಲು ಪ್ರಯತ್ನಿಸುತ್ತಿಲ್ಲ, ಆದರೆ ಇತರರಿಗಾಗಿ ಕೆಲಸ ಮಾಡಲು ಮತ್ತು ಸಾಯಲು ಪ್ರಯತ್ನಿಸುತ್ತಿದ್ದೇವೆ. ಬಂಗಾಳದಲ್ಲಿ ಒಬ್ಬ ಯುವ ಕಾರ್ಮಿಕನು ಜೈಲಿಗೆ ಹೋಗಬೇಕಾದಾಗ, ಅವನನ್ನು ಈ ಸಂಕಟವನ್ನು ಅನುಭವಿಸು ಎಂದು ಹೇಳಿದಾಗ, ಅವನು ಆ ಕಡುಯಾತನೆಯಲ್ಲಿ ಯಾವುದೇ ನೋವು ಅವನ ಅನುಭವಕ್ಕೆ ಬರುವುದಿಲ್ಲ, ಅವನು ದುಃಖಕ್ಕೆ ಹೆದರುವುದಿಲ್ಲ. ಅವನು ಸಂತೋಷದಿಂದ ಮುಂದೆ ಹೋಗುತ್ತಾನೆ. ಅವನು ಹೇಳುತ್ತಾನೆ, "ನನ್ನ ಮುಡಿಪಿನ ಸಮಯ ಬಂದಿದೆ, ಈಗ ನನ್ನನ್ನು ನಾನು ಪೂಜಾ ವೇದಿಕೆಗೆ (ಬಲಿ ಪೀಠಕ್ಕೆ) ಒಡ್ಡಿಕೊಳ್ಳುವ ಸಮಯ ಬಂದಿರುವುದರಿಂದ ಮತ್ತು ನನ್ನ ದೇಶವಾಸಿಗಳ ಒಳಿತಿಗಾಗಿ ಆ ದೇವರು ನನ್ನನು ನೋವು ಅನುಭವಿಸಲು ಆಯ್ಕೆ ಮಾಡಿದ್ದರಿಂದ ನಾನು ದೇವರಿಗೆ ಧನ್ಯವಾದಗಳನ್ನು ಸಲ್ಲಿಸಬೇಕು. ಇದು ನನ್ನ ಅತ್ಯಂತ ಸಂತೋಷದ ಮತ್ತು ನನ್ನ ಜೀವನದ ಸಫಲತೆಯ ಸಮಯವಾಗಿದೆ." ಇದು ನಮ್ಮ ಧರ್ಮದ

ಎರಡನೆಯ ಅಂಶವಾಗಿದೆ ಮತ್ತು ನಮ್ಮ ಪ್ರತ್ಯೇಕ ವ್ಯಕ್ತಿತ್ವದ ಕಲ್ಪನೆಯ ಮತ್ತು ನಮ್ಮ ಉನ್ನತ ನಿತ್ಯಾತ್ಮನನ್ನು ಮೂವತ್ತು ಕೋಟಿ ಜನರಲ್ಲಿ ನೆಲೆಸಿರುವಂಥ ದೇವರನ್ನು ಕಂಡುಕೊಳ್ಳುವುದರ ಸಂಪೂರ್ಣ ನಿರಾಕರಣೆಯಾಗಿದೆ.

ನಂಬಿಕೆ ಮತ್ತು ನಿಸ್ವಾರ್ಥತೆಗೆ ಮತ್ತೊಂದು ಹೆಸರಾಗಿರುವ ಮೂರನೆಯ ವಿಷಯವೆಂದರೆ ಧೈರ್ಯ. ದೇವರನ್ನು ನೀವು ನಂಬಿದಾಗ, ದೇವರು ನಿಮಗೆ ಮಾರ್ಗದರ್ಶನ ನೀಡುತ್ತಿದ್ದಾನೆಂದು ನೀವು ನಂಬಿದಾಗ, ದೇವರು ಎಲ್ಲವನ್ನೂ ಮಾಡುತ್ತಿದ್ದಾನೆ ಮತ್ತು ನೀವು ಏನನ್ನೂ ಮಾಡುತ್ತಿಲ್ಲ ಎಂದು ನಂಬಿದಾಗ, ಭಯಪಡುವಂಥದ್ದು ಅಲ್ಲೇನಿದೆ? ಅದು ನಿಮ್ಮ ಪಂಥವಿದ್ದಾಗ, ಅದು ನಿಮ್ಮ ಧರ್ಮವಿದ್ದಾಗ, ನಿಮ್ಮನ್ನು ನೀವು ದೂರ ಎಸೆದುಕೊಳ್ಳಲು, ನಿಮ್ಮ ಹಣ, ನಿಮ್ಮ ದೇಹ, ನಿಮ್ಮ ಜೀವನ ಮತ್ತು ನಿಮ್ಮಲ್ಲಿರುವ ಎಲ್ಲವನ್ನೂ ಇತರರಿಗಾಗಿ ಎಸೆಯಲು ನೀವು ಹೇಗೆ ಭಯಪಡುವುದು? ಏತಕ್ಕಾಗಿ ನೀವು ಭಯಪಡಬೇಕು? ಭಯಪಡುವಂಥದ್ದು ಅಲ್ಲೇನಿಲ್ಲ. ಈ ಪ್ರಪಂಚದ ನ್ಯಾಯಾಧಿಕರಣಗಳ ಮುಂದೆ ನಿಮ್ಮನ್ನು ಕರೆದಾಗಲೂ ಕೂಡ, ನೀವು ಅವುಗಳನ್ನು ಧೈರ್ಯದಿಂದ ಎದುರಿಸಬಹುದು. ಏಕೆಂದರೆ ನಿಮ್ಮ ನಿಜವಾದ ಧರ್ಮವೇ ನಿಮ್ಮಲ್ಲಿಯ ಧೈರ್ಯವೆಂದು ಅರ್ಥ. ಏಕೆಂದರೆ ಅದು ನೀನಲ್ಲ, ಅದು ನಿನ್ನೊಳಗಿರುವ ಸಂಗತಿ. ನಿಮ್ಮೊಳಗಡೆ ಇರುವಂಥ ಆ ಅವಿನಾಶಿಯಾದುದಕ್ಕೆ, ಹುಟ್ಟು ಸಾವಿಲ್ಲದ್ದಕ್ಕೆ, ಖಡ್ಗವು ತಿವಿಯದ್ದಕ್ಕೆ, ಬೆಂಕಿಯು ಸುಡದ್ದಕ್ಕೆ, ನೀರು ಮುಳುಗಿಸದ್ದಕ್ಕೆ ಈ ಎಲ್ಲ ನ್ಯಾಯ ಮಂಡಳಿಗಳು, ಜಗತ್ತಿನ ಎಲ್ಲ ಪ್ರಭಾವಗಳು ಏನು ಮಾಡಬಲ್ಲವು? ಆತನನ್ನು ಬಂದಿಖಾನೆಯು ಕೂಡಿಡಲು ಸಾಧ್ಯವಿಲ್ಲ ಮತ್ತು ನೇಣು ಆತನನ್ನು ಕೊನೆಗೊಳಿಸಲು ಸಾಧ್ಯವಿಲ್ಲ. ನಿಮ್ಮೊಳಗಿರುವ ಆತನ ಅರಿವು ನಿಮಗಿರುವಾಗ ನೀವು ಭಯಪಡವಂಥದ್ದೇನಿದೆ? ಆಗ ಧೈರ್ಯವೊಂದು ಅವಶ್ಯಕತೆ, ಧೈರ್ಯವು ಸಹಜ ಮತ್ತು ಧೈರ್ಯವು ಅನಿವಾರ್ಯ... ನಂಬಿಕೆಯ ಮತ್ತು ನಿಸ್ವಾರ್ಥತೆಯ ದೈವೀ ಶಕ್ತಿಯನ್ನು ನೀವು ಹೊಂದಿಲ್ಲದಿದ್ದರೆ, ಬೇರೆ ಬಂಧನಗಳಿಂದ ನಿವು ಪಾರಾಗಲು ಸಾಧ್ಯವಿಲ್ಲ, ನೀವು ಲಾಭ ಹೊಂದಲಾರದ, ಕೇವಲ ಒಂದು ಬದಲಾವಣೆಯ ಸಲುವಾಗಿ ಸಂಕಟವನ್ನು ಹೊಂದಲು ಇಷ್ಟಪಡುವುದಿಲ್ಲ. ಅಂತಹ ಮೂಲದಿಂದ ಧೈರ್ಯವು ಹೇಗೆ ಬರುತ್ತದೆ? ಆದರೆ, ನಿಮ್ಮಲ್ಲೊಂದು ಉನ್ನತವಾದ ಉದ್ದೇಶವಿದ್ದಾಗ, ನಿಮ್ಮ ಹತ್ತಿರ ಏನೂ ಇಲ್ಲವೆನ್ನುವ, ನೀವು ಏನೂ ಅಲ್ಲವೆನ್ನುವ ಮತ್ತು ದೇಶದಲ್ಲಿ ಈ ದೇಶದ ಮೂವತ್ತು ಕೋಟಿ ಜನರು ದೇವರಾಗಿದ್ದಾರೆ ಎನ್ನುವ, ಬಹಳಷ್ಟು ಭೂಮಿಯಿಂದ, ಬಹಳಷ್ಟು

ಹಣದಿಂದ ಅಥವಾ ಹಲವು ಜೀವಗಳಿಂದ ಅಳತೆ ಮಾಡಲಿಕ್ಕೆ ಬಾರದ ಸಂಗತಿ ಏನೋ ಇದೆ ಎನ್ನುವ ಅರಿವನ್ನು ನೀವು ಹೊಂದಿದಾಗ, ಅದು ಅವಿನಾಶಿಯಾಗಿದೆ, ನೀವು ಯಾವುದಕ್ಕಾಗಿ ಕಾರ್ಯ ಮಾಡಿತ್ತಿದ್ದೀರೊ ಆ ಉದ್ದೇಶವು ಅವಿನಾಶಿಯಾಗಿದೆ ಮತ್ತು ಆ ಅವಿನಾಶಿ ಪ್ರಭಾವವು ನಿಮ್ಮಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎನ್ನುವ ಅರಿವು ನಿಮಗಾಗುತ್ತದೆ. ಇತರ ಎಲ್ಲಾ ಬಾಂಧವ್ಯಗಳು ನಗಣ್ಯ. ಪ್ರತಿಯೊಂದು ಪರಿಗಣನೆಯು ನಿಮ್ಮ ಮನಸ್ಸಿನಿಂದ ಕಣ್ಮರೆಯಾಗುತ್ತದೆ ಮತ್ತು ನಾನು ಹೇಳಿದಂತೆ ಧೈರ್ಯವನ್ನು ಬೆಳೆಸುವ ಅಗತ್ಯವಿಲ್ಲ. ನೀವು ಆ ಶಕ್ತಿಯಿಂದ ಮುನ್ನಡೆಸಲ್ಪಟ್ಟಿದ್ದೀರಿ. ದೀರ್ಘಕಾಲ ಬದುಕಿದವರಿಂದ ನೀವು ಜೀವನ ಮತ್ತು ಸಾವಿನ ಮೂಲಕ ರಕ್ಷಿಸಲ್ಪಟ್ಟಿದ್ದೀರಿ. ಸಾವಿನ ಘಳಿಗೆಯಲ್ಲಿ, ನಿಮ್ಮ ಅಮರತ್ವವನ್ನು ನೀವು ಅನುಭವಿಸುತ್ತೀರಿ. ನಿಮ್ಮ ಕೆಟ್ಟ ಯಾತನೆಗಳ ಸಮಯದಲ್ಲಿ, ನೀವು ಅಜೇಯರಾಗಿದ್ದೀರಿ ಎಂದು ಭಾವಿಸುತ್ತೀರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/827–30**

**ಭಯಪಡುವುದು ಬೇಡ**

ರಾಷ್ಟ್ರೀಯ ಆತ್ಮಗೌರವವು ನಮ್ಮ ಧರ್ಮವಾಗಿದೆ, ಆತ್ಮಾಹುತಿ ಮಾತ್ರವೇ ನಮ್ಮ ಕ್ರಿಯೆ ಅಥವಾ ಕರ್ತವ್ಯ. ನಮ್ಮಲ್ಲಿರುವ ದೈವೀ ಗುಣಗಳು ಪ್ರಕಾಶಿಸಲು, ನಾವು ಅವುಗಳಿಗೆ ಯೋಗ್ಯವಾದ ಅವಕಾಶವನ್ನು ಕೊಡಲೇಬೇಕು. ಕೆಲಸಕ್ಕೆ ಬಾರದ ಭಾವಗಳನ್ನು ಬಿಡಲೇಬೇಕು. ನೀನು ಸಾಯಬೇಕಾಗಿ ಬಂದಾಗಲೂ ಹೆದರಬೇಡ. ಹಿಮ್ಮೆಟ್ಟಬೇಡ; ದೇಶಕ್ಕಾಗಿ ನೋವನ್ನು ಸಹಿಸಿಕೊ. ದೇವರು ನಿನ್ನ ಆಸರೆಯಾಗಿದ್ದಾನೆ. ಇದನ್ನು ನೀನು ಮಾಡಿದ್ದೇಯಾದರೆ, ಭಾರತ ದೇಶವು ತನ್ನ ಮೊದಲಿನ ವೈಭವವನ್ನು ಮತ್ತು ಘನತೆಯನ್ನು ಕ್ಷಣದಲ್ಲಿಯೆ ಮರಳಿ ಪಡೆದುಕೊಳ್ಳುವುದು. ಅದು ಪ್ರಪಂಚದ ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳುತ್ತದೆ; ಅದು ಇತರ ರಾಷ್ಟ್ರಗಳನ್ನು ನಾಗರೀಕ/ಶಿಕ್ಷಿತ ರಾಷ್ಟ್ರಗಳನ್ನಾಗಿಸುತ್ತದೆ; ಅದು ಸತ್ಯ ಜ್ಞಾನದ ಹೊಳಪನ್ನು ಪಸರಿಸುತ್ತದೆ, ಮತ್ತು ಅದು ವೇದಾಂತದ ತತ್ವಗಳನ್ನು ಬೋಧಿಸುತ್ತದೆ. ನಮ್ಮ ದೇಶವು, ಮಾನವ ಕುಲವನ್ನು ಹಾಗೂ ಇಡೀ ಪ್ರಪಂಚವನ್ನು ಕಲ್ಯಾಣ ಮಾಡಲು ಮುಂದೆ ಬರುತ್ತದೆ. ಭಾರತ ದೇಶದೆದುರು ಇಡೀ ಜಗತ್ತು ಕಂಪಿಸುತ್ತದೆ! ಆದರೆ ಯಾವಾಗ? ನಾವೆಲ್ಲರೂ ನಮ್ಮ ಋಣವನ್ನು ರಾಷ್ಟ್ರಕ್ಕೆ **ಮರುಪಾವತಿಸಲು ಸಿದ್ಧರಾದಾಗ ಮಾತ್ರ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/860**

## ಕ್ರಾಂತಿಗಳು

ಕ್ರಾಂತಿಗಳು ಅವುಗಳ ನಡೆಗಳಲ್ಲಿ ಅಗಣಿತವಾಗಿವೆ ಮತ್ತು ಸಂಪೂರ್ಣವಾಗಿ ಅನಿಯಂತ್ರಿತವಾಗಿವೆ. ಸಮುದ್ರವು ಹರಿಯುತ್ತದೆ, ಅದು ಹೇಗೆ ಹರಿಯಬೇಕೆಂದು ಅದಕ್ಕೆ ಯಾರು ಹೇಳಬೇಕು? ಗಾಳಿ ಬೀಸುತ್ತದೆ ಮತ್ತು ಮಾನವನ ಯಾವ ಬುದ್ಧಿವಂತಿಕೆಯು ಅದರ ಚಲನೆಗಳನ್ನು ನಿಯಂತ್ರಿಸುತ್ತದೆ? ಕ್ರಾಂತಿಗಳ ಏಕೈಕ ನಿಯಮವು ದೈವೀ ಜ್ಞಾನದ ಇಚ್ಛೆಯಾಗಿದೆ ಮತ್ತು ನಮ್ಮನ್ನು ನಾವು ಆ ಜ್ಞಾನದಿಂದ ಆರಿಸಲ್ಪಟ್ಟ ಕೇವಲ ಪ್ರತಿನಿಧಿಗಳಲ್ಲದೆ ಬೇರೆನನ್ನು ಪರಿಗಣಿಸುವ ಹಕ್ಕನ್ನು ಹೊಂದಿಲ್ಲ. ನಮ್ಮ ಕಾರ್ಯವು ಪೂರ್ಣಗೊಂಡಾಗ, ನಾವು ಅದನ್ನು ಅರಿತುಕೊಳ್ಳಬೇಕು ಮತ್ತು ಅಷ್ಟೊಂದು ಕಾರ್ಯವನ್ನು ಮಾಡಲು ನಮಗೆ ಅನುಮತಿ ನೀಡಲಾಗಿತ್ತೆಂದು ಸಂತೋಷಪಡಬೇಕು. ತಮ್ಮ ಕಾರ್ಯದಿಂದ ಅಥವಾ ತಮ್ಮ ಮಾತಿನಿಂದ ಅಥವಾ ಅದಕ್ಕಿಂತ ಉತ್ತಮವಾದುದರಿಂದ, ತಮ್ಮ ನೋವುಗಳ ಮೂಕ ಸೇವೆಯಿಂದ ಶ್ರೇಷ್ಠ ಮತ್ತು ಮುಕ್ತವಾಗಬಹುದಾದ ಭಾರತವನ್ನು ಸಿದ್ಧಪಡಿಸಲು ಸಹಾಯ ಮಾಡಿದವರ ಸಾಲಿನಲ್ಲಿ ನಮ್ಮ ಹೆಸರುಗಳು ಇತಿಹಾಸದಲ್ಲಿ ದಾಖಲಾಗಿದ್ದರೆ, ಇದು ನಾವು ಮಾಡಬಹುದಾದ ಶ್ರೇಷ್ಠ ಸೇವೆಗಳಿಗಾಗಿ ಅಗತ್ಯವಾದ ಪ್ರತಿಫಲವಲ್ಲವೆ? ಇಲ್ಲ, ದೇವರ ಪುಸ್ತಕಗಳಲ್ಲಿ ಹೊರತುಪಡಿಸಿ ಬೇರೆಲ್ಲೂ ಹೆಸರಿಸದಿದ್ದರೆ ಅಥವಾ ದಾಖಲಿಸದಿದ್ದರೆ, ನಮ್ಮ ಬೆರಳೂ ಸಹ ಆ ದೊಡ್ಡ ವಾಹನದ (ಕ್ರಾಂತಿಯ ವಾಹನ) ಮೇಲೆ ಇರಿಸಿತ್ತು ಎಂಬ ಪ್ರಜ್ಞೆಯೊಂದಿಗೆ ನಾವು ವಿಷಮ ಸ್ಥಿತಿಗೆ ಇಳಿದರೆ ಮತ್ತು ಎಷ್ಟೇ ಅಗೋಚರ–ವಾಗಿಯಾದರೂ ಅದನ್ನು ಮುಂದೆ ನೂಕಲು ಸಹಾಯ ಮಾಡಿದ್ದರೆ ಸಾಕಾಗುವುದಿಲ್ಲವೆ? ಏನೇ ಆದರೂ, ಸೇವೆಗಳ ಈ ಚರ್ಚೆಯು ಒಂದು ಕಳಪೆ ಸಂಗತಿಯಾಗಿದೆ. ನಾವು ಶ್ರೀಮಾತೆಯವರ ಸೇವೆಯನ್ನು ಪ್ರತಿಫಲಕ್ಕಾಗಿ ಮಾಡುತ್ತೇವೆಯೇ ಅಥವಾ ದೇವರ ಕೆಲಸವನ್ನು ಕೂಲಿಗಾಗಿ ಮಾಡುತ್ತೇವೆಯೇ? ದೇಶಭಕ್ತನು ತನ್ನ ದೇಶಕ್ಕಾಗಿ ಬದುಕುತ್ತಾನೆ, ಏಕೆಂದರೆ ಅವನು ಹಾಗೆ ಮಾಡಲೇಬೇಕು; ಅವನು ಅವಳಿಗಾಗಿ (ದೇಶಕ್ಕಾಗಿ) ಸಾಯುತ್ತಾನೆ ಏಕೆಂದರೆ ಅವಳು ಅದನ್ನು ಅಪೇಕ್ಷಿಸುತ್ತಾಳೆ. ಅಷ್ಟೇ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/869–70**

## ಸಂಜೀವಿನಿ ಮಂತ್ರ

ಯಾವಾಗ ಶ್ರೇಷ್ಠ ಪುರುಷರು ಅತ್ಯಂತ ಕೆಳ ಮಟ್ಟದಿಂದ ಮೇಲೇಳುತ್ತಾರೊ, ಯಾವ ಮಂತ್ರವು ಸಂಜೀವಿನಿ ಮಂತ್ರವಾಗಿದೆ, ಅಥವಾ ಅದರ ಪುನರುಜ್ಜೀವನ–

ವಾಗುವಿಕೆಯ ಸಚೇತನಗೊಳಿಸುವ ಪ್ರಭಾವ ಯಾವುದಾಗಿದೆ? ಭಾರತದಲ್ಲಿ ಎರಡು ಮಹಾನ್ ಮಂತ್ರಗಳಿವೆ, ಮೊದನೆಯದು – ಸಾರ್ವಜನಿಕ ಮತ್ತು ಸಾರ್ವತ್ರಿಕ ಮಾತೃಭೂಮಿಯ ಪ್ರೇಮದ ಕೂಗಾದ "ಒಂದೇ ಮಾತರಂ" ಎಂಬ ಮಂತ್ರವು, ಮತ್ತು ಎರಡನೆಯದು ಇನ್ನೂ ಬಹಿರಂಗಪಡಿಸದ ರಹಸ್ಯ ಮತ್ತು ಆಧ್ಯಾತ್ಮಿಕವಾದ ಮಂತ್ರವಾಗಿದೆ. "ಒಂದೇ ಮಾತರಂ" ಮಂತ್ರವು ವಿಂಧ್ಯ ಬೆಟ್ಟಗಳ ಸನ್ಯಾಸಿಗಳು ಜಗತ್ತಿಗೆ ಮೊದಲೊಮ್ಮೆ ನೀಡಿದ ಮಂತ್ರವಾಗಿದೆ. ನಮ್ಮದೇ ದೇಶವಾಸಿಗಳ ವಿಶ್ವಾಸಘಾತುಕ ತನದಿಂದ ಅದು ಕಳೆದುಹೋಯಿತು, ಏಕೆಂದರೆ ರಾಷ್ಟ್ರವು ಅಗಿನ್ನೂ ಪುನರುತ್ಥಾನಕ್ಕೆ ಪಕ್ವವಾಗಿರಲಿಲ್ಲ ಮತ್ತು ಅಕಾಲಿಕ ಜಾಗೃತಿಯು ತ್ವರಿತ ಅವನತಿಗೆ ತಂದೊಡ್ಡಬಹುದಾಗಿತ್ತು. ಆದರೆ 1897 ರ ಮಹಾ ಭೂಕಂಪದಲ್ಲಿ ಸನ್ಯಾಸಿಗಳಿಂದ ಧ್ವನಿಯೊಂದು ಕೇಳಲ್ಪಟ್ಟಾಗ, ಭಾರತವು ಮತ್ತೆ ಉದಯಿಸಬೇಕೆಂಬ ದೇವರ ಆಜ್ಞೆಯ ಬಗ್ಗೆ ಅವರು ಜಾಗೃತರಾದಾಗ, "ವಂದೇ ಮಾತರಂ" ಮಂತ್ರವು ಮತ್ತೆ ಜಗತ್ತಿಗೆ ಬಹಿರಂಗವಾಯಿತು. ಅದು ಜನರ ಹೃದಯದಲ್ಲಿ ಪ್ರತಿಧ್ವನಿಸಿತು, ಕೆಲವು ಮಹಾನ್ ಹೃದಯಗಳಲ್ಲಿ ಕೂಗು ಮೌನದಲ್ಲಿ ಮಾಗಿದಾಗ, ಇಡೀ ರಾಷ್ಟ್ರವು ದಿವ್ಯ ಜ್ಞಾನದ ಬಗ್ಗೆ ಜಾಗೃತವಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/877**

**ಭಾರತದ ಧ್ಯೇಯೋದ್ದೇಶ**

ಪ್ರಪಂಚದ ಭವಿಷ್ಯವು ಭಾರತದ ಭವಿಷ್ಯದ ಮೇಲೆ ಅವಲಂಬಿಸಿದೆ. ಭಾರತ ಮಾತೆಯು ತನ್ನ ನಿದ್ರೆಯಿಂದ ಎಚ್ಚರಗೊಂಡಾಗಲೆಲ್ಲ, ಅವಳು ಜಗತ್ತಿಗೆ ಅದ್ಭುತವಾದ ಹೊಳೆಯುವ ಬೆಳಕಿನ ಕಿರಣವನ್ನು ನೀಡುತ್ತಾಳೆ (ಬೆಳಕನ್ನು ನೀಡುತ್ತಾಳೆ), ಅದು ರಾಷ್ಟ್ರಗಳನ್ನು ಬೆಳಗಿಸಲು ಸಾಕು. ಅವಳಿಗೆ ಒಂದು ಕ್ಷಣದ ಸಂಕಲ್ಪವೇನಾಗಿದೆಯೊ, ಅದರ ಮೇಲೆ ಉಳಿದವರು ಶತಮಾನಗಳ ಕಾಲ ಬಾಳುತ್ತಾರೆ. ದೇವರು ಅವಳಿಗೆ ಪುರಾತನ ಜ್ಞಾನದ ಪುಸ್ತಕವನ್ನು ಕೊಟ್ಟು, ಅದನ್ನು ತೆರೆಯುವ ಸಮಯ ಬರುವವರೆಗೆ ಅದನ್ನು ಅವಳ ಹೃದಯದಲ್ಲಿ ಮುಚ್ಚಿಡುವಂತೆ ಹೇಳಿದನು. ಕೆಲವೊಮ್ಮೆ ಒಂದು ಪುಟ ಅಥವಾ ಒಂದು ಅಧ್ಯಾಯವನ್ನು ಬಹಿರಂಗಪಡಿಸಲಾಗುತ್ತದೆ, ಕೆಲವೊಮ್ಮೆ ಒಂದೇ ವಾಕ್ಯವನ್ನು ಮಾತ್ರ. ಅಂತಹ ವಾಕ್ಯಗಳು ಯುಗಗಳ ಸ್ಫೂರ್ತಿಯಾಗಿವೆ ಮತ್ತು ನೂರಾರು ವರ್ಷಗಳಿಂದ ಮಾನವೀಯತೆಯನ್ನು ಪೋಷಿಸಿವೆ. ಹಾಗೆಯೇ ಭಾರತವು ನಿದ್ರೆಗೆ ಜಾರಿದಾಗ, ಪ್ರಾಪಂಚಿಕತೆಯು ಶೀಘ್ರವಾಗಿ ಬೆಳೆಯುತ್ತದೆ ಮತ್ತು

ಕತ್ತಲೆಯಲ್ಲಿ ಬೆಳಕು ಮರೆಯಾಗಿಬಿಡುತ್ತದೆ. ಆದರೆ ಪ್ರಾಪಂಚಿಕತೆಯು ತನ್ನನ್ನು ತಾನು ಗೆಲ್ಲುವ ಬಗ್ಗೆ ಯೋಚಿಸಿದಾಗ, ಪೂರ್ವದಿಂದ ಬೆಳಕೊಂದು ಹೊರ ಹೊಮ್ಮುತ್ತದೆ, ಆಗ ಪ್ರಾಪಂಚಿಕತೆ ಎಲ್ಲಿ? ಆಶ್ಚರ್ಯ! ತನ್ನ ಪ್ರಕೃತಿಸಿದ್ಧ ಇರುಳಿಗೆ ಮರಳಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/890**

ಭಾರತವು ಆಧುನಿಕ ಮಾನವ ಕುಲದ ಎಲ್ಲ ತೊಂದರೆಗಳ ಸಾಂಕೇತಿಕ ಪ್ರಾತಿನಿಧ್ಯವಾಗಿದೆ.

ಭಾರತವು ಅದರ ಪುನರುತ್ಥಾನದ ಭೂಮಿಯಾಗುವುದು – ಉನ್ನತ ಮತ್ತು ನಿಜವಾದ ಜೀವನಕ್ಕೆ ಪುನರುತ್ಥಾನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/368 – ಶ್ರೀಮಾತೆ**

### ಸತ್ಯವು ಸುಭದ್ರವಾಗಿದೆ

ನಾವು ಒಂದು ವಿಷಯದ ಬಗ್ಗೆ ಮಾತನಾಡುವಾಗ, ಸ್ಪಷ್ಟವಾಗಿರೋಣ. ಸತ್ಯವು ಜಗತ್ತನ್ನು ನಿರ್ಮಿಸಿದ ಬಂಡೆಯಾಗಿದೆ (ಅಂದರೆ, ಸತ್ಯವು ಗಟ್ಟಿಯಾಗಿದೆ). ಸತ್ಯೇನ ತಿಷ್ಠತೆ ಜಗತ್. ಮಿಥ್ಯೆಯು ಎಂದಿಗೂ ಬಲದ (ಶಕ್ತಿಯ) ಸತ್ಯವಾದ ಮೂಲವಾಗಲಾರದು. ಒಂದು ಕಾರ್ಯದ ಮೂಲದಲ್ಲಿ ಮಿಥ್ಯೆ ಇದ್ದಾಗ, ಆ ಕಾರ್ಯವು ವಿಫಲವಾಗುವುದು. ಕಾರ್ಯವೊಂದು ಸತ್ಯದ ಮೇಲೆ ಸಾಗಿದರೆ ಮಾತ್ರ ಕಾರ್ಯದಕ್ಷತೆಯು ಅದಕ್ಕೆ ಸಹಾಯ ಮಾಡುತ್ತದೆ. ಕಾರ್ಯದಕ್ಷತೆಯನ್ನು ಮೂಲ ತತ್ವವನ್ನಾಗಿ ಮಾಡುವುದು ಅಸ್ತಿತ್ವದ ನಿಯಮಗಳನ್ನು ಉಲ್ಲಂಘಿಸುವುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/882**

### ಮನುಷ್ಯನಲ್ಲಿ ದೇವರ ಮಹಿಮೆ

ಇನ್ನೂ ಬೌದ್ಧಿಕ ಪ್ರತಿಷ್ಠೆಯ ಪ್ರಭಾವದಲ್ಲಿರುವ ಯಾರೇ ಆಗಲಿ, ಜನರು ವಿವೇಚನಾ ಶಕ್ತಿಯನ್ನು ಸರ್ವೋಚ್ಚ ಮಾರ್ಗದರ್ಶಕನಾಗಿ ಒಪ್ಪದಾದಾಗ ಆಘಾತಕ್ಕೊಳಗಾಗುತ್ತಾರೆ. ಅವನು ಕೇಳುತ್ತಾನೆ, ಒಬ್ಬ ಸುಸಂಸ್ಕೃತ ಮನುಷ್ಯನಿಗೆ, ಕಾರಣವನ್ನು (ವಿವೇಕವನ್ನು) ಒಪ್ಪದಿರಲು ಮತ್ತು ಜನರು ದೇವರೆಂದು ಕರೆಯುವ ಬಾಹ್ಯ ಪ್ರಭಾವವನ್ನು ಆ ರೀತಿಯಾಗಿ ಹೊಗಳುವುದು ಹೇಗೆ ಸಾಧ್ಯ? ಆದರೆ ಈ

ಸಂದೇಹವಾದಿಗಳು, ಮನುಷ್ಯನನ್ನು ಅವನ ಭೌತಿಕ ಅಂಶಕ್ಕೆ ಸೀಮಿತಗೊಳಿಸಲು ಪ್ರಯತ್ನಿಸುವ ಮತ್ತು ದೈವೀ ಮೂಲ ಹಾಗೂ ದೈವೀ ನಿಯತಿಯ ಸಾಧ್ಯತೆಯನ್ನು ನಿರಾಕರಿಸುವ ಯುರೋಪಿಯನ್ ಭೌತಿಕವಾದದ ಪ್ರಭಾವಕ್ಕೆ ಒಳಗಾಗಿದ್ದಾರೆ. ಯಾವಾಗ ಕ್ರಿಶ್ಚಿಯನ್ ಧರ್ಮವನ್ನು ಸನ್ಯಾಸಿಗಳಿಗೆ ಮತ್ತು ತಪಸ್ವಿಗಳಿಗೆ ಯುರೋಪು ಬಿಟ್ಟುಕೊಟ್ಟಿತೊ ಮತ್ತು ಗೆಲಿಲಿಯನ್ ಬೋಧನೆಗಳನ್ನು ಮರೆಯಿತೊ, ಆಗ ಅವಳನ್ನು ಮೀರಿಸುವ ಭಯಾನಕ ವಿಧಿಗೆ ತನ್ನನ್ನು ತಾನು ಒಡ್ಡಿಕೊಂಡಳು. ಮನುಷ್ಯನಲ್ಲಿರುವ ದೇವರು ಸಂಪೂರ್ಣ ದಿವ್ಯ ಜ್ಞಾನವಾಗಿದ್ದಾನೆ ಮತ್ತು ಸಂಪೂರ್ಣ ಧರ್ಮವಾಗಿದ್ದಾನೆ. ಕ್ರಿಶ್ಚಿಯನ್ ಧರ್ಮವು ಏನನ್ನು ಅಸ್ಪಷ್ಟವಾಗಿ ಕಲಿಸಿತ್ತೋ ಅದನ್ನು ಹಿಂದೂ ಧರ್ಮವು ವೇದಾಂತದಲ್ಲಿ ಬುದ್ಧಿಜೀವಿಗೆ ಸ್ಪಷ್ಟಪಡಿಸಿತು. ಭಾರತವು ಶಂಕರಾಚಾರ್ಯ, ರಾಮಾನುಜ ಮತ್ತು ಮಧ್ವರಿಂದ ಪಡೆದ ಉಪದೇಶವನ್ನು ನೆನಪಿಸಿಕೊಂಡಾಗ, ಶ್ರೀ ರಾಮಕೃಷ್ಣರು ಪಡೆದುಕೊಂಡ ದರ್ಶನವನ್ನು ಅರಿತುಕೊಂಡಾಗ, ಅವಳು ಉನ್ನತ ಸ್ಥಾನಕ್ಕೇರುತ್ತಾಳೆ. ಅವಳ ಜೀವನವೇ ವೇದಾಂತವಾಗಿದೆ.

**ಯಾರು ಹಿಂದೂ**

ನಾವು ಕೇವಲ ಬುದ್ಧಿಜೀವಿಗಳೆಂದು ಯಾರಾದರೂ ಯೋಚಿಸಿದರೆ, ಅವನು ಹಿಂದೂ ಅಲ್ಲ. ಹಿಂದುತ್ವವು, ದೇವರನ್ನು ಎಂದೂ ಕಾಣದವರಿಗೆ ಮೇಧಾವಿ–ತನವನ್ನು ಬಿಟ್ಟು ಹೋಗುತ್ತದೆ. ಆತನ ಹಿರಿಮೆ ಮತ್ತು ಮಹಿಮೆಯ ಬಗ್ಗೆ ಮಾತ್ರ ಮಾತನಾಡಲು ಅವನಿಂದ ನಿಯೋಜನೆಗೊಂಡಿದ್ದಾಳೆ, ಅಂತೆಯೆ ಅವಳು ಸಾವಿರಾರು ವರ್ಷಗಳಿಂದ ಹಾಗೆ ಮಾತನಾಡಿದ್ದಾಳೆ. ಮೊದಲಿಗೆ, ನಾವು ಯುರೋಪಿಯನ್ ಶಿಕ್ಷಣವನ್ನು ಪಡೆದುಕೊಂಡಾಗ, ನಾವು ವಿಜ್ಞಾನದ ಬೆಳಕಿನಿಂದ ನಮ್ಮನ್ನು ನಾವು ದಾರಿ ತಪ್ಪುವಂತೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟೆವು. ವಿಜ್ಞಾನವು ಚಿಕ್ಕ ಕೋಣೆಯೊಳಗಿನ ಬೆಳಕಿದ್ದಂತೆ, ಆದರೆ ಜಗತ್ತನ್ನು ಬೆಳಗಿಸುವ ಸೂರ್ಯನಲ್ಲ. ಅಪರಾ ವಿದ್ಯೆಯು ವಿಜ್ಞಾನದ ಸಾರಾಂಶವಾಗಿದೆ, ಆದರೆ ಅದಕ್ಕಿಂತ ಉನ್ನತವಾದ ವಿದ್ಯೆ ಮತ್ತು ಪ್ರಬಲವಾದ ಜ್ಞಾನವಿದೆ. ನಾವು ಕೆಳಮಟ್ಟದ ಜ್ಞಾನದ ಪ್ರಭಾವದಲ್ಲಿರುವಾಗ, ನಾವು ಎಲ್ಲವನ್ನೂ ಮಾಡುತ್ತಿದ್ದೇವೆ ಎಂದು ಊಹಿಸಿಕೊಳ್ಳುತ್ತೇವೆ ಮತ್ತು ನಮ್ಮ ಬುದ್ಧಿಮತ್ತೆಯು ಸರ್ವೋತ್ತಮ ಮತ್ತು ಸರ್ವಶಕ್ತ ಎಂಬಂತೆ, ನಾವಿರುವ ಪರಿಸ್ಥಿತಿಯನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತೇವೆ. ಆದರಿದು ಭ್ರಮೆ ಮತ್ತು ಮಾಯೆಯ ವರ್ತನೆ. ತನ್ನೊಳಗಿನ ಭಗವಂತನ ಮಹಿಮೆಯನ್ನು ಒಮ್ಮೆ

ಅನುಭವಿಸಿದವರು ಯಾರೇ ಅಗಿರಲಿ, ಅವನು ಮತ್ತೆಂದೂ ಬುದ್ಧಿಯೇ ಶ್ರೇಷ್ಠವೆಂದು ನಂಬಲಾರನು. ಉನ್ನತ ಧ್ವನಿಯೊಂದು ಅಲ್ಲಿದೆ, ಎಂದಿಗೂ ವಿಫಲವಾಗದ ದೇವವಾಣಿ ಒಂದಿದೆ. ದೇವರು ನೆಲೆಸಿರುವುದು ಹೃದಯದಲ್ಲಿ. ಅವನ ಸಾಧನಗಳಲ್ಲಿ ಒಂದಾದ ಮೆದುಳಿನ ಮೂಲಕ ಕಾರ್ಯ ನಿರ್ವಹಿಸುತ್ತಾನೆ. ಮೆದುಳು ಏನೇ ಯೋಜನೆಯನ್ನು ಮಾಡಿದರೂ, ಅದು ಮೊದಲು ತಿಳಿಯುವುದು ಹೃದಯಕ್ಕೆ ಮತ್ತು ಯಾರೇ ಆಗಲಿ ಮೆದುಳನ್ನು ಮೀರಿ ಹೃದಯಕ್ಕೆ ಹೋಗಬಹುದಾದರೆ, ಅವರು ತ್ರಿಕಾಲಭಾದಿತ ಧ್ವನಿಯನ್ನು ಕೇಳುತ್ತಾರೆ.

**ಜೀವನದ ಶ್ರೇಷ್ಠ ನಿಯಮ**

ಈ ಕ್ರಿಯೆಯ ಹಿಂದೆ ದೇವರಿದ್ದಾನೆ ಮತ್ತು ಅದನ್ನು ಹೇಗೆ ಯಶಸ್ಸಿಗೆ ತರಬೇಕೆಂದು ಅವನಿಗೆ ಯಾರೂ ಹೇಳುವ ಅಗತ್ಯವಿಲ್ಲ. ಅದನ್ನು ಅವನೇ ನೋಡಿಕೊಳ್ಳುತ್ತಾನೆ. ನಾವು ಯಾವುದೇ ಯೋಜನೆಗಳನ್ನು ರೂಪಿಸಬಹುದಾದರೂ, ಕಾರ್ಯಪ್ರವೃತ್ತರಾಗುವ ಸಮಯ ಬಂದಾಗ ನಾವು ಸಾಕಷ್ಟು ನಿಷ್ಪ್ರಯೋಜಕ–ರಾಗುತ್ತೇವೆ. ಕ್ರಾಂತಿಗಳು ಯಾವಾಗಲೂ ಆಶ್ಚರ್ಯಗಳಿಂದ ತುಂಬಿರುತ್ತವೆ ಮತ್ತು ಕ್ರಾಂತಿಯೊಂದಿಗೆ ಚದುರಂಗವನ್ನು ಆಡಬಹುದೆಂದು ಭಾವಿಸುವ ಯಾರೇ ಇರಲಿ, ದೇವರ ಗ್ರಹಿಕೆ ಎಷ್ಟು ಭಯಾನಕವಾಗಿದೆ ಮತ್ತು ಅವನ ಉಸಿರಿನ ಸುಳಿಗಾಳಿಯ ಎದುರು ಮಾನವನ ವಿವೇಕವು ಎಷ್ಟು ಅತ್ಯಲ್ಪವಾಗಿದೆ ಎಂಬುದನ್ನು ಅವರು ಶೀಘ್ರದಲ್ಲೇ ಕಂಡುಕೊಳ್ಳುತ್ತಾರೆ. ಆ ಮನುಷ್ಯನು ಕ್ರಾಂತಿಯ ಅವಕಾಶಗಳ ಮೇಲೆ ಪ್ರಾಬಲ್ಯ ಸಾಧಿಸುವ ಸಾಧ್ಯತೆಯಿದೆ, ಅವನು ಯಾವುದೇ ಯೋಜನೆಗಳನ್ನು ಮಾಡುವುದಿಲ್ಲ. ಆದರೆ ಅದು ತಾನೇ ಘೋಷಿಸಿಕೊಳ್ಳಲು ದೇವರ ಸಂಕಲ್ಪಕ್ಕಾಗಿ ತನ್ನ ಹೃದಯವನ್ನು ಶುದ್ಧವಾಗಿ ಕಾಪಾಡಿಕೊಳ್ಳುತ್ತಾನೆ. ಯಾವುದೇ ಯೋಜನೆಗಳನ್ನು ಹೊಂದದೆ ಇರುವುದು, ಆದರೆ ಒಂದು ಬದಲಾಯಿಸಲಾಗದ ಉದ್ದೇಶವನ್ನು ಹೊಂದಿರುವುದು ಜೀವನದ ಶ್ರೇಷ್ಠ ನಿಯಮವಾಗಿದೆ. ಬಯಕೆಯನ್ನು ಉದ್ದೇಶದ ಮೇಲೆ ಸ್ಥಿರಗೊಳಿಸಿದರೆ ಅದನ್ನು ಪೂರ್ಣಗೊಳಿಸಲು ಅದು ತನ್ನಷ್ಟಕ್ಕೆ ತಾನು ವ್ಯವಸ್ಥೆ ಮಾಡಿಕೊಳ್ಳುತ್ತದೆ, ಆಗ ಸಂದರ್ಭಗಳು ಸರಿಯಾದ ಮಾರ್ಗವನ್ನು ಸೂಚಿಸುತ್ತವೆ; ಆದರೆ ಯೋಜಕನು ಅನಿರೀಕ್ಷಿತವಾದ ಸಂಗತಿಗಳಿಂದ ಯಾವಾಗಲೂ ಮುಗ್ಗರಿಸುವುದನ್ನು ತನ್ನಷ್ಟಕ್ಕೆ ತಾನು ಕಂಡುಕೊಳ್ಳುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/890–93**

## ರಾಷ್ಟ್ರಗಳ ಗುರು ಭಾರತ (ವಿಶ್ವಗುರು ಭಾರತ)

ಒಂದು ಸಂಗತಿಯ ಬಗ್ಗೆ ಮಾತ್ರ ನಾವು ಖಚಿತವಾಗಿದ್ದೇವೆ, ಭೂಮಿಯ ಮೇಲೆ ಬರುತ್ತಿರುವ ಅವ್ಯವಸ್ಥೆಯ ಅಲೆಗಳ ಮೇಲೆ ತೇಲಿಸುವಂಥ ಜೀವ–ರಕ್ಷಣಾ ಪಟ್ಟಿಯನ್ನಾಗಿ ಧರಿಸಿರುವ ಒಂದು ಸಂಗತಿ. ಇದು ಭಾರತವನ್ನು ಶೂನ್ಯದಿಂದ ಮತ್ತೊಮ್ಮೆ ಮೇಲಕ್ಕೇರಿಸುವಂಥ ಪ್ರಮುಖವಾದ ಉದ್ದೇಶದಲ್ಲಿನ ಸ್ಥಿರವಾದ ಮತ್ತು ಬದಲಾಯಿಸಲಾಗದ ನಂಬಿಕೆಯಾಗಿದೆ, ತನ್ನ ಪ್ರಾಚೀನ ಜೀವನ ಮತ್ತು ವೈಭವದ ನವೀಕರಣಕ್ಕಾಗಿ ಹೋರಾಡುವ ಸ್ಥಿರವಾದ ಮತ್ತು ಬದಲಾಯಿಸಲಾಗದ ನಂಬಿಕೆಯಾಗಿದೆ. ಸ್ವರಾಜ್ ಜೀವ–ರಕ್ಷಕ ಪಟ್ಟಿಯಾಗಿದೆ, ಸ್ವರಾಜ್ ಚಾಲಕ, ಸ್ವರಾಜ್ ಮಾರ್ಗದರ್ಶನದ ನಕ್ಷತ್ರವಾಗಿದೆ. ಒಂದು ವೇಳೆ, ಒಂದು ದೊಡ್ಡ ಸಾಮಾಜಿಕ ಕ್ರಾಂತಿಯ ಅವಶ್ಯಕತೆ ಇದ್ದರೆ, ಅದಕ್ಕೆ ಕಾರಣ, ಸ್ವರಾಜ್ಯದ ಆದರ್ಶವು ಭಾರತದ ಪ್ರಾಚೀನ ಮತ್ತು ಬದಲಾಗದ ಆತ್ಮವನ್ನು ಎಂದೂ ವ್ಯಕ್ತಪಡಿಸದ ರೂಪಗಳಿಗೆ ಬದ್ಧವಾಗಿರುವ ರಾಷ್ಟ್ರದಿಂದ ಸಾಧಿಸಲಾಗುವುದಿಲ್ಲವಾದ್ದರಿಂದ. ಅವಳು (ಭಾರತ ಮಾತೆ) ತನ್ನ ಸೌಂದರ್ಯವನ್ನು ಮತ್ತೆ ಕಂಗೊಳಿಸುವಂತೆ ಮಾಡಲು ಹಿಂದಿನ ಬಡತನದಿಂದ ಹೊರಬರಲೇಬೇಕು. ಅವಳ ಆತ್ಮವನ್ನು ಹೊಸದಾಗಿ ವ್ಯಕ್ತವಾಗುವಂತೆ ಮಾಡಲು ತನ್ನ ಭೌತಿಕ ರೂಪವನ್ನು ಬದಲಾಯಿಸಿಕೊಳ್ಳಲೇಬೇಕು. ಯಾವುದೇ ಬದಲಾವಣೆಯು ಅವಳನ್ನು ಹಳೆಯದಾದ (ಸೆಕೆಂಡ್ ಹ್ಯಾಂಡ್) ಯುರೋಪ್ ಆಗಿ ಪರಿವರ್ತಿಸುತ್ತದೆ ಎಂದು ನಾವು ಭಯಪಡಬೇಕಾಗಿಲ್ಲ. ಅಂತಹ ಅವನತಿಗೆ ಅವಳ ವ್ಯಕ್ತಿತ್ವವು ತುಂಬಾ ಪ್ರಬಲವಾಗಿದೆ, ಅಂತಹ ಶರಣಾಗತಿಗೆ ಅವಳ ಆತ್ಮವು ತುಂಬಾ ಶಾಂತವಾಗಿದೆ ಮತ್ತು ಸ್ವ–ಪರ್ಯಾಪ್ತವಾಗಿದೆ. ಒಂದು ವೇಳೆ ಮತ್ತೊಮ್ಮೆ ಆರ್ಥಿಕ ಕ್ರಾಂತಿಯು ಅನಿವಾರ್ಯವಾದರೆ, ಆಕೆಯ ಹಳೆಯ ಔದ್ಯೋಗಿಕ ಜೀವನದ ಉತ್ತಮ ಆದರೆ ಇಕ್ಕಟಾದ ಸೌಧವು ವಾಣಿಜ್ಯ ಮತ್ತು ಉದ್ಯಮದಲ್ಲಿ ಸ್ವರಾಜ್ಯವನ್ನು ಅನುಮತಿಸುವುದಿಲ್ಲ. ಮುಕ್ತ ಮತ್ತು ಪರಿಪೂರ್ಣ ರಾಷ್ಟ್ರೀಯ ಜೀವನದ ಕೈಗಾರಿಕಾ ಶಕ್ತಿಗಳು ಪ್ರಬಲವಾದ ವ್ಯಾಪ್ತಿಯನ್ನು ಮತ್ತು ವಿಶಾಲವಾದ ಮಾರ್ಗಗಳನ್ನು ಬಯಸುತ್ತವೆ. ಆರ್ಥಿಕ ಕ್ರಾಂತಿಯು ಈಗ ಯುರೋಪ್‌ನಲ್ಲಿನ ಮಾನವೀಯತೆಯ ಉದಾತ್ತ ಭಾವನೆಗಳನ್ನು ಘಾಸಿಗೊಳಿಸುವ ಅದೇ ರೋಗಗ್ರಸ್ತ ಮತ್ತು ಅಸ್ತವ್ಯಸ್ತವಾಗಿರುವ ಸಮಾಜದ ಸ್ಥಿತಿಯಲ್ಲಿ ನಮ್ಮನ್ನು ನೆಲಕಚ್ಚಿಸುತ್ತದೆ ಎಂದು ನಾವು ಭಯಪಡಬೇಕಾಗಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗಾರಿಕೆ ಎಂಬ ಹೆಸರಿನಿಂದ ಪ್ರತಿಷ್ಠಿತವಾಗಿರುವ ಸಂಘಟಿತ ಸ್ವಾರ್ಥ, ಕ್ರೌರ್ಯ ಮತ್ತು ದುರಾಸೆಯ ಪ್ರತಿರೂಪವಾಗಲು ಅವಳ ಜೀವನ ಮತ್ತು ಅಮರತ್ವದ ರಹಸ್ಯವಾದ

ಬೋಧನೆಯನ್ನು ಭಾರತವು ಎಂದಿಗೂ ಮರೆಯಲು ಸಾಧ್ಯವಿಲ್ಲ. ಅವಳು ತನ್ನದೇ ಆದ ಪರಿಸ್ಥಿತಿಗಳನ್ನು ನಿರ್ಮಿಸಿಕೊಳ್ಳುತ್ತಾಳೆ, ಜಗತ್ತು ಮತ್ತು ಆತ್ಮವನ್ನು ಹೇಗೆ ಸಮನ್ವಯಗೊಳಿಸಬೇಕೆನ್ನುವುದನ್ನು ಈ ಭೂಮಿಯ ಜನರಿಗೆ ಮತ್ತೊಮ್ಮೆ ಕಂಡು ಹಿಡಿಯಲು ಮತ್ತು ಕಲಿಸಲು ಸಮಾಜ ವಾದವು ವ್ಯರ್ಥವಾಗಿ ಹೋರಾಡುವ ಕ್ರಮದ ರಹಸ್ಯವನ್ನು ಅವಳು ಕಂಡುಕೊಳ್ಳುತ್ತಾಳೆ.

ಈ ಸತ್ಯವನ್ನು ನಾವು ಅರಿತುಕೊಂಡಾಗ, ನಮಗಾಗಿ ಮಾತ್ರವಲ್ಲದೆ ಇಡೀ ಜಗತ್ತಿಗಾಗಿ ಸಂಭವಿಸುತ್ತಿರುವ ಎಲ್ಲದರಲ್ಲೂ ಅವಶ್ಯಕವಾದ ಒಂದು ಶ್ರೇಷ್ಠ ಹಾಗೂ ಮಹತ್ವಪೂರ್ಣವಾದ ಪರಿವರ್ತನೆಯನ್ನು ಗ್ರಹಿಸಿದಾಗ, ಆಗ ನಮ್ಮ ಮೇಲಿರುವಂಥ ಸಂದರ್ಭಗಳಲ್ಲಿ ಯಾವುದೇ ಭಯ ಅಥವಾ ಅನುಮಾನವಿಲ್ಲದೆ ನಮ್ಮನ್ನು ನಾವು ಎರಕಗೊಳಿಸಿಕೊಳ್ಳುತ್ತೇವೆ. ಭಾರತವು ರಾಷ್ಟ್ರಗಳ ಗುರುವಾಗಿದೆ, ಭಾರತವು ಮಾತ್ರ, ಅದರ ಆಳವಾದ ವ್ಯಾಧಿಗಳಿಗೆ ಮಾನವನ ರೂಪದಲ್ಲಿ ಆತ್ಮದ ವೈದ್ಯನಾಗಿದೆ; ಅವಳು ಮತ್ತೊಮ್ಮೆ ಪ್ರಪಂಚದ ಜೀವನವನ್ನು ಹೊಸದಾಗಿ ರೂಪಿಸಲು ಮತ್ತು ಮಾನವ ಆತ್ಮದ ಶಾಂತಿಯನ್ನು ಪುನಃಸ್ಥಾಪಿಸಲು ಉದ್ದೇಶಿಸಿದ್ದಾಳೆ. ಆದರೆ ಸ್ವರಾಜ್ಯವು ಅವಳ ಕೆಲಸದ ಅಗತ್ಯ ಷರತ್ತಾಗಿದೆ ಮತ್ತು ಅವಳು ತನ್ನ ಕಾರ್ಯನ್ನು ಮಾಡುವ ಮೊದಲು, ಅವಳು ಷರತ್ತುಗಳನ್ನು ಪೂರೈಸಲೇಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/905–06**

## ಭಾರತದ ದೈವನಿಯಮಿತ ಕರ್ತವ್ಯ

**– ಅನು: ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ನೈಜ ಮಾನವ ಸಹೋದರತ್ವ, ಮಾನವ ಸಮಾನತೆ, ಮಾನವ ಸ್ವಾತಂತ್ರ್ಯಗಳ ಕಡೆಗೆ ಮಾನವ ಕುಲವನ್ನು ತಿರುಗಿಸುವುದೇ ಆಕೆಯ ದೈವನಿಯಮಿತ ಕರ್ತವ್ಯವಾಗಿದೆ. ಚೇತನದಲ್ಲಿ ಮಾನವನು ಸ್ವತಂತ್ರವಾಗಿ ಇದ್ದರೆ ಉಳಿದ ಎಲ್ಲಾ ಸ್ವಾತಂತ್ರ್ಯಗಳು ಆತನ ಅಧೀನದಲ್ಲಿ ಇರುವವು. ಏಕೆಂದರೆ ಸ್ವತಂತ್ರನಾದ ಭಗವಂತನನ್ನು ಪರಿಮಿತಗೊಳಿಸಲು ಸಾಧ್ಯವಿಲ್ಲ. ಆತನು ಈ ಭ್ರಮೆಯಿಂದ ಮುಕ್ತನಾದಾಗ ಪ್ರಪಂಚದ ದೈವೀ ಸಮತ್ವವನ್ನು ದರ್ಶಿಸುವನು. ಈ ಸಮತ್ವವು ಪ್ರೇಮ ಮತ್ತು ನ್ಯಾಯದ ಮೂಲಕ ತನ್ನನ್ನು ಪರಿಪೂರ್ಣಗೊಳಿಸಿಕೊಳ್ಳುವದು. ಸಮಾಜ ಮತ್ತು ಸರ್ಕಾರದ ಕಾನೂನುಗಳಿಗೆ ಈ ದರ್ಶನವು ವ್ಯಾಪಿಸತೊಡಗುವುದು. ಈ ದೈವೀ ಸಮತ್ವವನ್ನು ಆತನು ಗ್ರಹಿಸಿದ ಮೇಲೆ ಆತನು ಇಡೀ ಪ್ರಪಂಚದ ಸಹೋದರನಾಗುವನು. ನಿಷ್ಪಕ್ಷಪಾತತೆ ಮತ್ತು ಪ್ರೇಮದ

ನ್ಯಾಯ ಶಾಸನಗಳ ಮೂಲಕ ತನ್ನ ಸಹೋದರರೆಂಬಂತೆ ಎಲ್ಲಾ ಜನರನ್ನು ಭಾವಿಸಿ ಅವರ ಸೇವೆ ಮಾಡುವನು. ಆತನನ್ನು ಯಾವ ಸ್ಥಾನದಲ್ಲಿ ಕುಳ್ಳಿರಿಸಿದರೂ ಇದೇ ರೀತಿಯಲ್ಲಿ ಕಾರ್ಯಗೈಯುವನು. ಮತೀಯತೆ, ತತ್ತ್ವಶಾಸ್ತ್ರ ಮತ್ತು ಸಾಮಾಜಿಕ ಚಿಂತನೆ ಮತ್ತು ರಾಜಕೀಯ ಅಭೀಪ್ಸೆಗಳ ಬುನಾದಿಯು ಈ ಗ್ರಹಿಸುವಿಕೆಯಾಗಬೇಕು. ಆಗ ಸಮಾಜದ ರಚನೆಯಲ್ಲಿ ಸ್ವಾತಂತ್ರ್ಯ, ಸಮತ್ವ ಮತ್ತು ಭ್ರಾತೃತ್ವವು ತಮ್ಮ ಸ್ಥಾನವನ್ನು ಅಲಂಕರಿಸುವವು ಮತ್ತು ಸತ್ಯ ಯುಗವು ಪುನರಾಗಮಿಸುವದು. ಭಾರತವು ತಾನೇ ಸ್ವತಃ ಈ ಪ್ರಜಾ ಪ್ರಭುತ್ವದ ಏಶಿಯಾ ಅಧ್ಯಯನವನ್ನು ಪುನರ್ ಆವಿಷ್ಕರಿಸಿ–ಕೊಳ್ಳಬೇಕು. ನಂತರ ಅದನ್ನು ಇಡೀ ಪ್ರಪಂಚಕ್ಕೆ ನೀಡಬಹುದು. ಆತ್ಮದಲ್ಲಿ ಸ್ವತಂತ್ರವಾಗಿರಬೇಕಾದುದು ಪ್ರತಿಯೊಬ್ಬ ಮಾನವನ ಧರ್ಮ. ಪ್ರೇಮದ ಮೂಲಕ ಆತನು ಸೇವೆ ಮಾಡಬೇಕು, ಒತ್ತಾಯದಿಂದ ಅಲ್ಲ. ಆತ್ಮದಲ್ಲಿ ಸಮತ್ವವನ್ನು ಹೊಂದಿರಬೇಕು ಸಮಾಜದ ಸೇವೆ ಮಾಡಲು ಆತನ ಸಾಮರ್ಥ್ಯಕ್ಕೆ ಅನುಗುಣವಾಗಿ ತನ್ನ ಸ್ಥಾನವನ್ನು ಆತನು ಸಮಾಜದಲ್ಲಿ ವಿಂಗಡಿಸಿಕೊಳ್ಳಬೇಕು. ಇತರರ ಸ್ವಾರ್ಥತೆಯನ್ನು ಪ್ರೋತ್ಸಾಹಿಸಲಲ್ಲ. ಆದರೆ ಪರಸ್ಪರ ಪ್ರೇಮ ಮತ್ತು ಸೇವೆಗಳಿಂದ ಬೆಸೆದಿರುವ ತನ್ನ ಸಹೋದರರೊಂದಿಗೆ ಸಾಮರಸ್ಯಭರಿತ ಸಂಬಂಧದಿಂದ ಜೀವಿಸಲು ಇದು ಪರಾಧೀನತೆಯ ಸಂಕೋಲೆಯ ಮೂಲಕ ಆಗಬಾರದು. ಅಥವಾ ನಾಶಪಡಿಸುವವನು ಮತ್ತು ನಾಶವಾಗುವ ವಸ್ತುವಿನ ನಡುವಿನ ಸಂಬಂಧದಂತೆ ಇರಬಾರದು; ಅಂದರೆ ತಿನ್ನಲ್ಪಡುವ ವಸ್ತು ಮತ್ತು ತಿನ್ನುವವನಂತೆ ಆಗಬಾರದು. ಮಾನವನ ಹಕ್ಕುಗಳನ್ನು ಆಧರಿಸಿದೆ ಪ್ರಜಾ ಪ್ರಭುತ್ವ ಎಂದು ಹೇಳಲಾಗುವದು. ಆದರೆ ಇದಕ್ಕೆ ಮಾನವನ ಕರ್ತವ್ಯಗಳನ್ನು ಅದು ಅವಲಂಬಿಸಿದೆ ಎಂದು ಉತ್ತರಿಸಲಾಗುವದು. ಆದರೆ ಕರ್ತವ್ಯ ಮತ್ತು ಹಕ್ಕುಗಳು ಯೂರೋಪಿಯನ್ನರ ಚಿಂತನೆಗಳಾಗಿವೆ. ಆದರೆ ಭಾರತೀಯ ಕಲ್ಪನೆ ಧರ್ಮವಾಗಿದೆ. ಕಾರ್ಯದ ಮೂಲ ಸ್ವಾರ್ಥತೆ ಎಂಬ ಪ್ರಪಂಚದತ್ತಲಿನ ದೃಷ್ಟಿಕೋನದಿಂದ ಕೃತ ವೈಷಮ್ಯವು ನಿರ್ಮಿತವಾಗುವದು. ಧರ್ಮದ ಕಲ್ಪನೆಯಲ್ಲಿ ಹಕ್ಕುಗಳು ಮತ್ತು ಕರ್ತವ್ಯಗಳು ಈ ಕೃತಕ ವೈರವನ್ನು ಕಳೆದುಕೊಳ್ಳುವವು ಮತ್ತು ಅವುಗಳ ಆಳವಾದ ಮತ್ತು ನಿರಂತರವಾದ ಏಕತೆಯನ್ನು ಪುನಃ ಪಡೆಯುವವು. ಏಶಿಯಾ ಖಂಡವೇ ಪ್ರಜಾಪ್ರಭುತ್ವದ ಬುನಾದಿ ಧರ್ಮ ಎಂಬುದನ್ನು ಗುರುತಿಸಬೇಕು. ಏಕೆಂದರೆ ಯೂರೋಪಿನ ಆತ್ಮ ಮತ್ತು ಏಶಿಯಾ ಆತ್ಮದ ನಡುವಿನ ವ್ಯತ್ಯಾಸವು ಇರುವುದೇ ಇದರಲ್ಲಿ. ಏಶಿಯಾದ ವಿಕಸನವು ಧರ್ಮದ ಮೂಲಕ ತನ್ನನ್ನು ತಾನು ತೃಪ್ತಿಗೊಳಿಸಿಕೊಳ್ಳುವದು; ಇದೇ ಆಕೆಯ ರಹಸ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/931–32**

## ಈ ಕ್ಷಣದ ಅವಶ್ಯಕತೆ

ಶ್ರದ್ಧೆಯಿಂದಲೇ ನಾವು ಮಾಡುವದೆಲ್ಲವೂ ಮತ್ತು ಮಾಡಲು ಪ್ರಯತ್ನಿಸುವದೆಲ್ಲವೂ ಮುಂದುವರೆಯುವುದು. ನಮ್ಮಲ್ಲಿ ನಂಬಿಕೆಯು ಕಡಿಮೆಯಾಗಿದ್ದರೆ ಏನನ್ನೂ ಸಾಧಿಸಲಾಗುವುದಿಲ್ಲ. ಶ್ರದ್ಧೆಯು ಅಪೂರ್ಣವಾಗಿದ್ದರೆ ನಮ್ಮ ಕಾರ್ಯದಲ್ಲಿ ನ್ಯೂನತೆಯು ಉಂಟಾಗಿ ಅನೇಕ ಸಲ ಅಪಜಯವನ್ನು ಹೊಂದಬೇಕಾಗುವುದು. ಈ ಮೂಲಭೂತ ಕಿಚ್ಚು ಇಲ್ಲದೆ ಯಾವ ಶ್ರೇಷ್ಠ ಕಾರ್ಯವನ್ನು ಇದುವರೆಗೆ ಸಾಧಿಸಲಾಗಿಲ್ಲ. ಅಹಂಕಾರದಿಂದ ತಪ್ಪು ಹಾದಿ ಹಿಡಿದು ಕೆಲಸಮಾಡುತ್ತಿರುವುದು ನಾವು ಎಂದು ನಂಬುತ್ತೇವೆ. ನಾವು ಏನು ಮಾಡುತ್ತಿರುವೆವೋ ಅದರ ಫಲ ನಮ್ಮ ಸೃಷ್ಠಿ ಎಂದು ಭಾವಿಸುವೆವು. ಏನಾದರೂ ಮಾಡಬೇಕಾಗಿದ್ದಾಗ ನಮಗೆ ಅವಶ್ಯಕವಾದ ಶಕ್ತಿ, ಸಾಧನ ಮತ್ತು ಗುಣಗಳು ಇದೆಯೇ ಎಂದು ನಮ್ಮನ್ನೇ ನಾವು ಕೇಳುವೆವು. ಆದರೆ ನಿಜವಾಗಲು ಭಗವಂತನ ಸಂಕಲ್ಪದಿಂದ ಎಲ್ಲಾ ಕಾರ್ಯಗಳು ನೆರವೇರುವವು. ನಮ್ಮ ಕಾರ್ಯಗಳ ಪ್ರಮುಖ ಕಾರಂಜಿಯು ಆತನಲ್ಲಿರುವ ನಮ್ಮ ಶ್ರದ್ಧೆಯಾಗಿದ್ದರೆ ಸಫಲತೆಯನ್ನು ತಡೆಯಲು ಸಾಧ್ಯವೇ ಇಲ್ಲ. ಕೆಲವೊಮ್ಮೆ ಬಹಳ ತೀವ್ರವಾಗಿ ನಾವು ಯಾವುದಾದರೂ ವಸ್ತುವನ್ನು ಅಪೇಕ್ಷಿಸುವೆವು. ಆ ಅಪೇಕ್ಷೆಯನ್ನು ಸಾಧಿಸಿರಲೂ–ಬಹುದು. ಆ ಅಪೇಕ್ಷೆಯು ನಿಜವಾಗಿಯೂ ಒಂದು ಪ್ರಾರ್ಥನೆಯೇ ಆಗಿದೆ. ಎಲ್ಲಾ ಪ್ರಾಮಾಣಿಕ ಪ್ರಾರ್ಥನೆಗಳಿಗೆ ಉತ್ತರವು ಖಂಡಿತವಾಗಿ ಲಭಿಸುವದು. ಪ್ರಜ್ಞಾಪೂರ್ವಕವಾಗಿ ಭಗವಂತನನ್ನು ಉದ್ದೇಶಿಸಿ ಹೇಳದಿರಬಹುದು. ಏಕೆಂದರೆ ಪ್ರಾರ್ಥನೆ ಎನ್ನುವದು ಕೇವಲ ಪದಗಳ ರಚನೆಯಾಗಿರಬೇಕಾಗಿಲ್ಲ, ಆದರೆ ಅದು ಒಂದು ಅಭೀಪ್ಸೆ. ಅಭೀಪ್ಸೆಯನ್ನು ಹೊಂದಿದ್ದರೆ ನಾವು ಪ್ರಾರ್ಥಿಸುತ್ತೇವೆ. ಆದರೆ ಸಂಪೂರ್ಣವಾಗಿ ಸ್ವಾರ್ಥರಹಿತವಾಗಿರಬೇಕು ಅಭೀಪ್ಸೆ. ಅದು ಫಲಪ್ರದವಾಗ–ಬೇಕಾದರೆ ಕೀಳುಮಟ್ಟದ ಉಪಯೋಗಗಳು ಮತ್ತು ಗುರಿಗಳ ಚಿಂತನೆಯೊಂದಿಗೆ ತಳಕುಹಾಕಿಕೊಂಡಿರಬಾರದು. ಅಭೀಪ್ಸೆಗಳೊಂದಿಗೆ ಸ್ವಾರ್ಥತೆಯನ್ನು ನಾವು ಸೇರಿಸಿದರೆ, ಪ್ರಾರ್ಥನೆಯ ಶಕ್ತಿಯು ಅಷ್ಟರಮಟ್ಟಿಗೆ ಕುಗ್ಗುವುದಲ್ಲದೆ ಸೂಕ್ತ ಪ್ರಮಾಣಾನುಗುಣವಾಗಿ ಸಫಲತೆಯೂ ಕಡಿಮೆಯಾಗುವುದು.

## ದೈವವೇ ನೈಜ ಆತ್ಮ

ದೈವದಲ್ಲಿ ಯಾರು ಶ್ರದ್ಧೆಯನ್ನು ಹೊಂದಿರುವರೋ ಅವರು ಕೆಳಮಟ್ಟದ ಸ್ವಾರ್ಥದಿಂದ ಮೇಲೇರುವರು. ಏಕೆಂದರೆ ವಿಶ್ವದ ನೈಜ ಆತ್ಮ ಭಗವಂತನೇ.

ವಿಶ್ವದಲ್ಲಿರುವ ಪ್ರತಿಯೊಂದರ ಆತ್ಮವೂ ಭಗವಂತನೇ. ಕೆಳಮಟ್ಟದ ಜೀವವನ್ನು ನಂಬಿದರೆ, ನಾವು ಆ ಸ್ವಾರ್ಥದ ಅಧೀನವಾಗುವೆವು. ನಮ್ಮ ಪೂರ್ವಜನ್ಮ ಮತ್ತು ಕ್ರಿಯೆಗಳನ್ನು ಆಧರಿಸಿದ ಬುದ್ಧಿ ಮತ್ತು ದೇಹಗಳ ಶಕ್ತಿಗೆ ಅನುಗುಣವಾಗಿ ಜಯ ಅಥವಾ ಅಪಜಯವನ್ನು ಹೊಂದುವೆವು. ಕೆಳಗಿನ ಆತ್ಮಕ್ಕೆ ಒಂದು ನ್ಯಾಯ ಸಂಹಿತೆ ಇರುವುದು ಮತ್ತು ಮೇಲಿನದಕ್ಕೆ ಮತ್ತೊಂದು. ಅದರ ಗತಕಾಲದಿಂದ ಕೆಳಗಿನ ಆತ್ಮವು ಬಂಧಿತವಾಗಿದೆ. ಮೇಲಿನದು ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ಕಾಲಗಳ ಅಧಿಪತಿ. ಅಹಂಕಾರದಿಂದ ಕೆಳಗಿನ ಆತ್ಮದ ಸಂಕಲ್ಪವು ಜನಿಸಿದೆ, ಮತ್ತು ಅಹಂಕಾರದಿಂದ ಪರಿಮಿತವಾಗಿದೆ. ಆದರೆ ಅಹಂಕಾರದ ಆಚೆಗಿದೆ ಉನ್ನತ ಆತ್ಮದ ಸಂಕಲ್ಪ ಮತ್ತು ಅಹಂಕಾರವು ಅದನ್ನು ಪರಿಮಿತಗೊಳಿಸಲಾರದು. ಅದು ಸರ್ವಶಕ್ತವಾಗಿದೆ. ಆದರೆ ಅದು ದೇಹದ ಮೂಲಕ ಕೆಲಸ ಮಾಡುವವರೆಗೂ, ಕಾಲ, ಪ್ರದೇಶ ಮತ್ತು ಸಕಾರಣಗಳ ಕಾನೂನಿಗೆ ಒಳಪಟ್ಟಿದೆ. ಕಾಲವು ಆಗಮಿಸಿ ಪರಿಸರವು ಸಿದ್ಧವಾಗಿ ತಕ್ಷಣದ ಕಾರ್ಯಕಾರಣ ಸಂಬಂಧವು ಉಂಟಾಗುವವರೆಗೂ ನಾವು ಕಾಯಬೇಕಾಗುವುದು. ಒಮ್ಮೆ ಸಂಕಲ್ಪವು ಕೆಲಸ ಮಾಡಲು ಪ್ರಾರಂಭಿಸಿತೆಂದರೆ ನಿಸ್ಸಂದೇಹವಾಗಿ ಅವಶ್ಯಕವಾದ ಪರಿಸ್ಥಿತಿಗಳನ್ನು ತರುವುದು. ಅದು ಕೆಲಸ ಮಾಡಲು ನಾವು ಅನುವು ಮಾಡಿಕೊಡಬೇಕು ಅಷ್ಟೇ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/937–38**

**ಭಾರತ – ಭೂತಕಾಲ ಮತ್ತು ಭವಿಷ್ಯತ್ಕಾಲ**

ಹಿಂದಿನ ಕಾಲದಲ್ಲಿ ಭಾರತವು ಪ್ರಪಂಚದಿಂದ ಬೇರೆಯಾದ ಒಂದು ವಿಧದ ಚಿಂತನೆ ಮತ್ತು ಶಾಂತಿಯ ವಾತಾವರಣವಿರುವ ಗೃಹವಾಗಿತ್ತು. ವಿಭಿನ್ನ ಭೌಗೋಳಿಕ ರಚನಾಕ್ರಮದ ಮೂಲಕ ಇತರ ಮಾನವ ಜನಾಂಗದಿಂದ ಭಾರತ ಮಾತೆಯು ಬೇರ್ಪಟ್ಟಿದ್ದಳು. ಒಂದು ಶಾಂತ ಆಶ್ರಮದಲ್ಲಿರುವಂತೆ ಅಸ್ತಿತ್ವದ ರಹಸ್ಯಗಳ ಬಗ್ಗೆ ಆಕೆಯು ಚಿಂತಿಸುತ್ತಿದ್ದಳು ಮತ್ತು ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದಳು. ಪ್ರಪಂಚದ ಶಬ್ದ ಮಾಲಿನ್ಯತೆಯು ಈ ಆಶ್ರಮದಿಂದ ಬಹು ದೂರದಲ್ಲಿತ್ತು.

**ಭಾರತವಾಗಿಯೇ ಉಳಿಯಬೇಕು ಭಾರತ**

ಯುರೋಪಿನ ಮಾರ್ಗವನ್ನು ಅನುಸರಿಸಿ ಭಾರತವು ಹೆಜ್ಜೆ ಹಾಕತೊಡಗಿದರೆ, ಆ ರಾಜಕೀಯ ಧ್ಯೇಯಗಳನ್ನು ಅಂಗೀಕರಿಸಿದರೆ, ಸಾಮಾಜಿಕ ವ್ಯವಸ್ಥೆ, ಅರ್ಥಿಕ

ತತ್ವಗಳನ್ನು ಪಾಲಿಸಿದರೆ ಯುರೋಪಿನ ತೊಂದರೆಗಳನ್ನೇ ಭಾರತವೂ ಅನುಭವಿಸಬೇಕಾಗುವುದು. ಯೂರೋಪಿಗಾಲಿ ಅಥವಾ ಭಾರತಕ್ಕಾಗಲಿ ಈ ಕಬಳಿಸುವಿಕೆಯು ಒಳಿತನ್ನು ಉಂಟು ಮಾಡುವುದಿಲ್ಲ. ಭಾರತವು ಯೂರೋಪಿನ ಬುದ್ಧಿಮತ್ತೆಯ ದೇಶವಾದರೆ, ಆಕೆಯ ಸಹಜ ಶ್ರೇಷ್ಠತೆಯನ್ನು ಭಾರತವು ತಲುಪಲಾಗುವುದಿಲ್ಲ. ಜೊತೆಗೆ ಆಕೆಯ ಆಂತರ್ಯದಲ್ಲಿರುವ ಸಾಧ್ಯತೆಗಳನ್ನು ಪೂರ್ಣಗೊಳಿಸಲಾಗುವುದಿಲ್ಲ. "ಪರಧರ್ಮ ಭಯಾವಹಃ" ಬೇರೆಯವರ ಧರ್ಮವನ್ನು ಅಂಗೀಕರಿಸುವುದು ಅಪಾಯಕಾರಿ ಇದರಿಂದ ಮಾನವ ಅಥವಾ ರಾಷ್ಟ್ರವು ತನ್ನ ಜೀವನ ಮತ್ತು ಸಾಮರ್ಥ್ಯಗಳ ರಹಸ್ಯದಿಂದ ವಂಚಿತವಾಗುವದು. ಪ್ರಕೃತಿಯ ಸ್ವತಂತ್ರ, ವಿಶಾಲ ಮತ್ತು ಸಾವಯವ ಅಭಿವೃದ್ಧಿಯ ಬದಲಾಗಿ ಅಸ್ವಾಭಾವಿಕ ಮತ್ತು ಕುಬ್ಜ ಬೆಳವಣಿಗೆಗಳು ಉಂಟಾಗುವವು.

ತನ್ನ ಅಸ್ತಿತ್ವದ ಗುರಿಯನ್ನು ಒಂದು ರಾಷ್ಟ್ರವು ತೊರೆದಾಗ ಅದರ ಬೆಳವಣಿಗೆ ಅಥವಾ ವೃದ್ಧಿಯು ಕ್ಷೀಣಿಸುವುದು. ಭಾರತವು ತನ್ನ ನಿಯತಿಯನ್ನು ಪೂರ್ಣಗೊಳಿಸಬೆಕಾದರೆ ಭಾರತವು ಭಾರತವಾಗಿಯೇ ಉಳಿಯಬೇಕು. ಭಾರತದ ಮೇಲೆ ಅನ್ಯ ನಾಗರೀಕತೆಯನ್ನು ಸಂಯೋಜಿಸುವುದರಿಂದ ಯುರೋಪಿಗೆ ಯಾವ ಲಾಭವೂ ಇಲ್ಲ. ಯೂರೋಪಿನ ರೋಗಗಳಿಗೂ ಪರಿಹಾರ ಒದಗಿಸುವ ವೈದ್ಯಳಾಗಿರುವ ಭಾರತವು ಸ್ವತಃ ರೋಗದ ಹಿಡಿತಕ್ಕೆ ಸಿಲುಕುವುದು. ರೋಗವು ವಾಸಿಯಾಗುವುದಿಲ್ಲ ಮತ್ತು ಉಪಶಮನವಾಗದಿರುವಂತಹ ಪರಿಸ್ಥಿತಿಯನ್ನು ತಲುಪುವುದು. ರೋಮಿನ ಅಂತ್ಯವು ಸಮೀಪಿಸಿದಾಗ ಯೂರೋಪಿನ ನಾಗರೀಕತೆಯು ನಾಶವಾಯಿತು. ಈಗಲೂ ಹಾಗೆಯೇ ಆಗುವ ಸಂಭವವಿದೆ. ಮೊದಲು ಅದರ ಆಂತರ್ಯದಲ್ಲೇ ಶುಷ್ಕವಾಗುವದರಿಂದ ಮತ್ತು ಕೊನೆಯದಾಗಿ ಹೊರಗಿನ ಆಕ್ರಮಣದಿಂದ ಕ್ಷತಿಗೊಳ್ಳುತ್ತದೆ. ಭಾರತಕ್ಕೆ ರಾಜಕೀಯ ಮತ್ತು ಆಧ್ಯಾತ್ಮಿಕ ಚಳವಳಿಗಳೆರಡೂ ಆಗಿ ರಾಷ್ಟ್ರೀಯ ಚಳುವಳಿಯ ಸಫಲತೆಯನ್ನು ಪಡೆಯುವುದು ಅವಶ್ಯಕವಾಗಿದೆ. ಯೂರೋಪಿಗೆ ಇದರ ಅವಶ್ಯಕತೆಯು ಇನ್ನೂ ಹೆಚ್ಚು ಅವಶ್ಯಕ. ಭಾರತವು ಸ್ವತಂತ್ರವಾಗುವುದನ್ನು ನೋಡಲು ಇಡೀ ಪ್ರಪಂಚವು ತವಕಿಸುತ್ತಿದೆ. ಏಕೆಂದರೆ ಇದರಿಂದ ಭಾರತ ಮಾತೆಯು ಆಕೆಯ ಅಸ್ಮಿತೆಯನ್ನು ಪಡೆಯುವಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/104**

# ರಾಷ್ಟ್ರ ಭಾರತ

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

## ಭಾರತದ ರಾಷ್ಟ್ರೀಯತೆಯ ಜನನ

ನಮ್ಮೊಳಗಿರುವ ಆತ್ಮವೇ ನಮ್ಮ ಇತಿಹಾಸವನ್ನು ಸೃಷ್ಟಿಸುತ್ತದೆ. ಅದುವೇ ನಮ್ಮ ಭವಿತವ್ಯದ ರೂಪುರೇಷೆಗಳನ್ನು ನಿರ್ಮಿಸುತ್ತದೆ. ಈ ಆತ್ಮದ ನಿರ್ಧಾರಿತ ಮಾರ್ಗದಲ್ಲೇ ಈ ಭೌತಿಕ ಜಗತ್ತು ಮತ್ತು ಭೌತಿಕ ಘಟನೆಗಳು ನಾವು ಜೀವಿಸುತ್ತಿರುವ ದೇಶ–ಕಾಲದ ಪರಿಧಿಯೊಳಗೆ ನಮ್ಮನ್ನು ನಮ್ಮ ಭವಿತವ್ಯದ ಜೀವನಕ್ಕೆಂದು ರೂಪಿಸುತ್ತಿರುತ್ತದೆ. ಆದರೆ ನಾವು ನಡೆಸಬೇಕಿರುವ ಬದುಕು ನಮ್ಮ ಆತ್ಮದ ಪೂರ್ವ ನಿರ್ಧಾರಿತ ಚಿತ್ರಣವೇ ಆಗಿರುತ್ತದೆ. ಭಾರತವು ಸ್ವಾತಂತ್ರ್ಯಗೊಂಡ ದಿನವು ಅದರ ಬಾಹ್ಯದ ಅಸ್ತಿತ್ವವನ್ನು ಪ್ರಪೂರ್ಣಗೊಳಿಸಿದ ಆಡಳಿತಾತ್ಮಕವಾದ ಅಂಗಗಳ ಹಸ್ತಾಂತರೀಕರಣದ ದಿನವಲ್ಲ. ಬದಲಾಗಿ ಅದು ಭಾರತದ ಬಹುಕಾಲದ ಆಂತರ್ಯದ ತುಡಿತ–ಮಿಡಿತಗಳು ಫಲಕಾರಿಯಾಗಿ, ಈ ವಿಶ್ವ ಭೂಪಟದಲ್ಲಿ ತನ್ನ ಸ್ವಾವಲಂಬನೆಯ ಪ್ರತ್ಯೇಕತೆಯನ್ನು ಅನುಭವಿಸಿದ, ಬೇರೊಂದು ರಾಷ್ಟ್ರದ ಹಿಡಿತದಿಂದ ಮುಕ್ತವಾಗಿ ಸ್ವತಂತ್ರಯುತವಾದ ಸಾಕ್ಷಾತ್ಕಾರವನ್ನು ಅನುಭವಿಸಿದ ಮಹಾದಿನವಾಗಿದೆ. ಹಾಗಾಗಿ ಭಾರತದ ಮಟ್ಟಿಗೆ ಆ ದಿನವು ಕೇವಲ ದೇಶದ ಬಾಹ್ಯ ರಚನೆಯ ದಿನವಲ್ಲ. ಬದಲಾಗಿ ಅದು ಭಾರತದ ಆಂತರ್ಯದಲ್ಲಿ ಇರುವ ಚಿರಂತನಾತ್ಮವು ಅಸುರೀ ಶಕ್ತಿಗಳ ಹಿಡಿತದಿಂದ ಬಂಧ ಮುಕ್ತತೆಯನ್ನು ಅನುಭವಿಸಿದ ದಿವ್ಯ ಕ್ಷಣದ ಪ್ರತೀಕವಾಗಿದೆ. ಏಕೆಂದರೆ, ಒಂದು ರಾಷ್ಟ್ರದ ಸ್ವಾವಲಂಬನೆಯ ಪ್ರತ್ಯೇಕತೆಯೇ ಅದರ ಸ್ವಾತಂತ್ರ್ಯದ ಸ್ವರೂಪವಾಗಿರುತ್ತದೆ. ಆಗಸ್ಟ್ ಏಳನೇ ತಾರೀಖು ಭಾರತೀಯ ರಾಷ್ಟ್ರೀಯತೆಯ ಜನ್ಮದಿನವಾಗಿದೆ. ಹಾಗೂ ನಾವು ತಿಳಿದ ಇನ್ನೊಂದು ದಿನವು ಸ್ವಾತಂತ್ರ್ಯದ ದಿನಾಚರಣೆಯಾಗಿದೆ. ಈ ಎರಡೂ ದಿನಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ನಾವು ಅರಿತುಕೊಳ್ಳುವ ವಿಷಯವೆಂದರೆ, ಆ ಎರಡು ದಿನಗಳಲ್ಲಿ ಒಂದು ದಿನವು ಸ್ವಾತಂತ್ರ್ಯವನ್ನು ಪಡೆಯಲಿರುವ ಸಂತಸದ ವಿಷಯಕ್ಕೆ ನಮ್ಮನ್ನು ನಾವು ಸ್ವ–ಅರ್ಪಣೆ, ಸಮರ್ಪಣೆಗಳನ್ನು ಮಾಡಿಕೊಂಡ ದಿನವಾದರೆ; ಇನ್ನೊಂದು ನಾವು ತೋರಿದ ಸಮರ್ಪಣಾ ಮನೋಭಾವನೆಗೆ ರಾಷ್ಟ್ರವು ಗಳಿಸಿದ ಸ್ವಾತಂತ್ರ್ಯದ ಉಡುಗೊರೆಯಾಗಿದೆ. ಭಾರತವನ್ನು ತನ್ನ ಹಿಡಿತದಲ್ಲಿ ಬಂಧಿಸಿದ ಅಸುರೀ ಶಕ್ತಿಗಳ ವಿರುದ್ಧ ದನಿಯೆತ್ತಿದ ನಮ್ಮ ಬಹಿಷ್ಕಾರದ

ಮೊಳಗುಗಳೇ ನಾವು ಪಡೆದ ಸ್ವಾತಂತ್ರ್ಯಕ್ಕೆ ತಳಹದಿಗಳಾಗಿವೆ. ಹಾಗಾಗಿ ಏಳನೇ ತಾರೀಖೀನಂದು ನಾವು ಘೋಷಿಸಿದ ಬಹಿಷ್ಕಾರದ ಕೂಗುಗಳು ಕೇವಲ ಆರ್ಥಿಕ ದಂಗೆಯಾಗಿರಲಿಲ್ಲ, ಸ್ವಾತಂತ್ರ್ಯಕ್ಕಾಗಿ ನಮ್ಮ ಹಪಹಪಿಯಾಗಿರಲಿಲ್ಲ; ಬದಲಾಗಿ ಭಾರತವು ತನ್ನದೇ ಆದ ರಾಜಕೀಯ–ಆರ್ಥಿಕ–ಸಾಮಾಜಿಕ ಪ್ರಭುತ್ವವನ್ನು ಆರಂಭಿಸಲು, ಆ ಮೂಲಕ ಸ್ವಾವಲಂಬನೆಯ ರಾಷ್ಟ್ರ ಪ್ರತೀಕವಾಗಲು ನಡೆಸಿದ ಬಂಡಾಯವಾಗಿತ್ತು. ಹಾಗೂ ಈ ಸ್ವಾವಲಂಬನೆಯನ್ನು ಪ್ರಪೂರ್ಣಗೊಳಿಸಲು ರಾಷ್ಟ್ರದ ಪ್ರತಿಯೊಂದು ಆಡಳಿತಾತ್ಮಕ ಕಾರ್ಯಗಳಲ್ಲಿ ಬಾಹ್ಯ ಸೌಲಭ್ಯಗಳಿಲ್ಲದೇ ನಮ್ಮದೇ ಮುಕ್ತ ನಿರ್ಣಯವನ್ನು ಕೈಗೊಂಡು, ಅದರ ಮೂಲಕವೇ ಸಾಧನೆಯನ್ನು ಗಳಿಸಬೇಕಿತ್ತು; ಏಕೆಂದರೆ ಈ ಆಡಳಿತಾತ್ಮಕವಾದ ಅಂಗಗಳೆಲ್ಲವೂ ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿದ್ದು. ಅದನ್ನು ಸೂಕ್ತ ರೀತಿಯಲ್ಲಿ ಪರಿಹರಿಸಬೇಕಿತ್ತು. ಯಾವಾಗ ಆಗಸ್ಟ್ ಏಳರಂದು ಭಾರತದ ರಾಷ್ಟ್ರೀಯತೆಯು ಜನ್ಮ ತಾಳೀತೋ, ಮತ್ತು ಯಾವಾಗ ಆಗಸ್ಟ್ ಹದಿನೈದರಂದು ಭಾರತವು ಸ್ವತಂತ್ರತೆಯನ್ನು ಗಳಿಸಿತೋ, ಆಗ ಅಲ್ಲಿಯವರೆಗೂ ಇಬ್ಬಗೆಯ ಮಾರ್ಗದಲ್ಲಿ ನಡೆಯುತ್ತಿದ್ದ ಭಾರತೀಯರಾದ ನಮ್ಮ ಹೆಜ್ಜೆಗಳು ಏಕತೆಯ ಏಕೈಕ ಮಾರ್ಗವನ್ನು ಹಿಡಿದು ಸಾಗತೊಡಗಿದವು. ಈ ಮೊದಲು ರಾಷ್ಟ್ರೀಯತೆಯನ್ನು ದಕ್ಕಿಸಿಕೊಳ್ಳುವ ಮತ್ತು ಅದನ್ನು ತನ್ನ ಸುಪರ್ದಿಯಲ್ಲಿಟ್ಟು–ಕೊಂಡ ಶಕ್ತಿಗಳ ದಮನ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಎರಡೆರಡು ಮನೋಭೂಮಿಕೆಗಳು ಒಮ್ಮೆಲೇ ತಮ್ಮ ಸಾಧನೆಯ ಗಿರಿ ಶಿಖರವನ್ನು ತಲುಪುತ್ತಲೇ ತಾವು ಗಳಿಸಿಕೊಂಡ ಸ್ವಾತಂತ್ರ್ಯತೆಯನ್ನು ಆತ್ಮಸಾಕ್ಷಾತ್ಕಾರದ ರೂಪದಲ್ಲಿ ಧರಿಸಿಕೊಳ್ಳುತ್ತಾ ಏಕಮೇವತೆಯ ಮಾರ್ಗದಲ್ಲಿ ನಡೆಯತೊಡಗಿದವು. ಅಂದಿನಿಂದ ನವ್ಯಭಾರತದ ನವ್ಯರಾಷ್ಟ್ರೀಯ ವಾದದ ನಿರ್ಮಾಣದಲ್ಲಿ ಮೊದಲ ಅಡಿಪಾಯವನ್ನು ಇಟ್ಟಂತಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/623**

### ಸ್ವಾತಂತ್ರ್ಯದ ಪ್ರಥಮ ವಾರ್ಷಿಕೋತ್ಸವ

'ವಂದೇ ಮಾತರಂ' ಎಂಬ ಉದ್ಘೋಷವೇ ಸ್ವಾತಂತ್ರ್ಯದ ಮೊದಲ ವರ್ಷವನ್ನು ಚೈತನ್ಯಯುತವಾಗಿರಿಸಿತ್ತು. ಸ್ವಾತಂತ್ರ್ಯಕ್ಕೂ ಪೂರ್ವದ ಒಂದು ವರ್ಷದ ಹಿಂದೆ ಆಗಸ್ಟ್ 16 ರಂದು ಆರಂಭಗೊಂಡ 'ವಂದೇ ಮಾತರಂ'ನ ಉದ್ಘೋಷವು ತನ್ನ ಮೊದಲ ವರ್ಷದ ವಾರ್ಷಿಕೋತ್ಸವವನ್ನು ಪೂರೈಸಿತ್ತು. ಆದರೆ ಭಾರತದ

ರಾಷ್ಟ್ರೀಯತೆಯ ಅಂಗವು ಅದರ ವಾರ್ಷಿಕೋತ್ಸವವನ್ನು ಆಚರಿಸುವ ಹಂತದಲ್ಲಿ ಆಗಸ್ಟ್ 7 ನೇ ತಾರೀಖನ್ನು ಆರಿಸಿಕೊಂಡಿತ್ತು. ಇಂತಹ ಐತಿಹಾಸಿಕವಾದ ದಿನಾಂಕವನ್ನು ಸ್ವಾಗತಿಸುವ ಸಂದರ್ಭದಲ್ಲಿ ಇಡೀ ದೇಶದಾದ್ಯಂತ ಮಾನ್ಯತೆ ಪಡೆದ ಪತ್ರಿಕೆಯನ್ನು ಅಸ್ತಿತ್ವಕ್ಕೆ ತಂದ ಬಂಗಾಳದ ರಾಷ್ಟ್ರೀಯವಾದಿಗಳಿಗೆ ಮತ್ತೊಂದು ಮಹತ್ವವಿದೆ. ಅದೇನೆಂದರೆ, ನಮ್ಮ ಈ ಪತ್ರಿಕೆಯು ರಾಷ್ಟ್ರೀಯವಾದಿಗಳಿಗೆ ಅತ್ಯಂತ ಅನುಕೂಲಕರವಾದ ಆಶ್ರಯದಲ್ಲಿಯೇ ನಡೆಯುತ್ತಿರುವುದನ್ನು ಗಮನಿಸಿದರೆ ನಾವು ಇಲ್ಲಿಯವರೆಗೂ ಸತ್ಯವನ್ನೇ ಪ್ರಚುರಪಡಿಸುತ್ತ ಬಂದಿರುವೆವು ಎಂಬುದು ಖಾತ್ರಿಯಾಗುತ್ತದೆ. ಆ ಸಂದರ್ಭದಲ್ಲಿ ರಾಷ್ಟ್ರದ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದ್ದ ಎಲ್ಲಾ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಕೊಡಲೆಂದೇ ಅನಿವಾರ್ಯವಾಗಿ ಈ ಪತ್ರಿಕೆಯು ಅಸ್ತಿತ್ವಕ್ಕೆ ಬಂದಿತ್ತೇ ಹೊರತು, ಯಾವುದೋ ಖಾಸಗಿ ಸಂಘಟನೆಗಳ ಮಹಾತ್ವಾಕಾಂಕ್ಷೆಯನ್ನು ಪೂರ್ಣಗೊಳಿಸುವ ಅಥವಾ ವೈಯಕ್ತಿಕವಾದ ಹುಚ್ಚಾಟಿಕೆಗಳನ್ನು ಪೂರೈಸಲು ಇದರ ರಚನೆಯಾಗಿರಲಿಲ್ಲ. ಇಡೀ ರಾಷ್ಟ್ರದ ಬೃಹತ್ ಮತ್ತು ನಿರ್ಣಾಯಕವಾದ ಘಳಿಗೆಯೊಂದರಲ್ಲಿ ಅಸ್ತಿತ್ವಕ್ಕೆ ಬಂದ ಈ ಪತ್ರಿಕೆಯು ರಾಷ್ಟ್ರದ ನಾಗರೀಕರಿಗೆ ಅತ್ಯಂತ ಮಹತ್ವವಾದ ಸಂದೇಶಗಳನ್ನು ನೀಡುವ ಮಹೋನ್ನತ ಕಾರ್ಯದಲ್ಲಿ ನಿರತವಾಗಿತ್ತು. ಆ ಸಂದರ್ಭದಲ್ಲಿ ಭೂಮಿಯ ಯಾವುದೇ ಶಕ್ತಿಗಳಿಗೂ ನಮ್ಮ ಸತ್ಯ ಪ್ರಕಟಣೆಯನ್ನು ತಡೆಯುವ ಸಾಮರ್ಥ್ಯವಿರಲಿಲ್ಲ. ಸತತ ಒಂದು ವರ್ಷದ ಅವಧಿಯಲ್ಲಿ ಜನದ ಮನದ ಮೂಲೆಯೊಳಗಿದ್ದ ಪರಾತಂತ್ರ್ಯದ ಮನೋಭಾವನೆಗಳನ್ನು ಕಿತ್ತೆಸೆದು, ಅವರಲ್ಲಿ ರಾಷ್ಟ್ರೀಯವಾದಿ ಮನೋಭಾವನೆಗಳನ್ನು ಬಿತ್ತುವ ಕಾರ್ಯದಲ್ಲಿ 'ವಂದೇ ಮಾತರಂ' ಘೋಷಣೆಯ ಪಾತ್ರ ಬಹು ಮುಖ್ಯವಾಗಿದೆ. ಬಹು ಕಾಲದಿಂದಲೂ ಜನರಲ್ಲಿ ಮನೆ ಮಾಡಿದ್ದ ಪೂರ್ವದ ಅಭಿವ್ಯಕ್ತಿಗಳನ್ನು ತುಂಡರಿಸಿ ಅವರಲ್ಲಿ ರಾಷ್ಟ್ರದ ಪರಿಕಲ್ಪನೆಯನ್ನು, ಆದರ್ಶಯುತವಾದ ಆಕಾಂಕ್ಷೆಗಳನ್ನು ರೂಪಿಸುವ ಮಹೋನ್ನತ ಕಾರ್ಯವನ್ನು ಗೈದ 'ವಂದೇ ಮಾತರಂ' ಘೋಷಣೆಗೆ, ಅದರ ಪ್ರಚೋದಿತ ಶಕ್ತಿಯ ಕಾರಣಕ್ಕಾಗಿಯೇ ಭಾರತದ ಬಹುತೇಕ ಎಲ್ಲಾ ಪ್ರಾಂತ್ಯಗಳಲ್ಲಿ ಅದಕ್ಕೆ ಭವ್ಯವಾದ ಸ್ವಾಗತವು ದೊರಕಿತ್ತು. 'ವಂದೇ ಮಾತರಂ' ಘೋಷಣೆಯ ಮೊದಲ ವರ್ಷದಲ್ಲಿ ಅದು ಜನ ಸಾಮಾನ್ಯರಿಂದ ಪಡೆದ ಬೆಂಬಲದ ಪ್ರಮಾಣವನ್ನು ಚಿತ್ರಿಸಿದ ಆಗಿನ ಪತ್ರಿಕೆಗಳಲ್ಲಿನ ಸುದ್ದಿಯು, ಅಲ್ಲಿಯವರೆಗಿನ ಭಾರತದ ಪತ್ರಿಕೋದ್ಯಮದ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿಸಿತ್ತು. 'ವಂದೇ ಮಾತರಂ'ನ ಒಂದು ಘೋಷಣೆಯಲ್ಲಿ

ಜನರ ರಾಜಕೀಯ ಆದರ್ಶಗಳು ಬದಲಾದವು, ಸ್ವಾತಂತ್ರ್ಯದ ಬಯಕೆಯು ಕುಡಿಯೊಡೆಯಿತು. ಯಾರಿಗಾದರೂ ಈ ವಿಷಯದಲ್ಲಿ ಸಂದೇಹವಿದ್ದರೆ 'ವಂದೇ ಮಾತರಂ'ನ ಯಶೋಮೂರ್ತಿಯೇ ಅವರನ್ನು ಶಾಂತಗೊಳಿಸಬೇಕು. ನಮ್ಮ ಪ್ರಜೆಗಳಿಗೆ ತಮ್ಮ ಸಾಧನೆಯ ಮಾರ್ಗದಲ್ಲಿರುವ ಅಡೆತಡೆಗಳ ಬಗೆಗಿನ ತಿಳುವಳಿಕೆಯಿದೆ. ಹಾಗೂ ನಾವು ನಮ್ಮ ಅಭೀಪ್ಸೆಯನ್ನು ಪೂರ್ಣಗೊಳಿಸುವ–ವರೆಗೂ ಅವರು ನಮ್ಮ ಜೊತೆಗಿರುವರೆಂಬ ಭರವಸೆಯು ನಮ್ಮಲ್ಲಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/629**

## ಚಾತುರ್ವರ್ಣ್ಯ ವ್ಯವಸ್ಥೆಯ ಉನ್ನತಿ–ಅವನತಿ

ಜಾತಿ ವ್ಯವಸ್ಥೆ ಎಂಬುದು ಸಮಾಜದಲ್ಲಿ ಕರ್ಮಾಧಾರಿತವಾದ ವಿಂಗಡಣೆಯ ಮೇಲೆ ನಿರ್ಧರಿತವಾಗಿರುತ್ತದೆ. ಯುರೋಪಿನ ಜಾತಿ ವ್ಯವಸ್ಥೆಯಲ್ಲಿಯೂ ಸಹ ಇದೇ ತೆರನಾದ ಜನಾಂಗೀಯ ವರ್ಗ ವಿಂಗಡಣೆಯ ವ್ಯವಸ್ಥೆಯಿದ್ದು, ಅವರ ವರ್ಗೀಕರಣದ ವ್ಯವಸ್ಥೆಯು ಕೇವಲ ಭೌತಿಕ ತತ್ವಗಳ ಮೇಲೆಯೇ ಆಧರಿತವಾಗಿದ್ದು, ಅದು ಸದಾ ಮರ್ತ್ಯದ ಜಡ ತತ್ವದ ಮೇಲೆಯೇ ಕೇಂದ್ರಿಕೃತವಾಗಿರುತ್ತದೆ; ಆದರೆ ಭಾರತೀಯ ವರ್ಣ ನೀತಿಯ ವ್ಯವಸ್ಥೆಯು ಹಾಗಲ್ಲ. ಅದು ಅಧ್ಯಾತ್ಮಿಕ ಮತ್ತು ನೈತಿಕ ತತ್ವದ ತಳಹದಿಯ ಮೇಲೆ ನಿರ್ಧರಿತವಾಗಿತ್ತದೆ. ಹಾಗಾಗಿ ನಮ್ಮ ಜನಾಂಗೀಯ ವರ್ಗೀಕರಣವು ಭುವಿಯ ಜಡ ಭೌತಿಕವಾದ ಸಿದ್ಧಾಂತಕ್ಕೂ ಮೀರಿದ ಆಧ್ಯಾತ್ಮಿಕ–ನೈತಿಕ ನಿಲುವನ್ನು ಹೊಂದಿದೆ. ಯುರೋಪಿನ ವರ್ಗ ವಿಂಗಡಣೆಯು ಅಧಿಕಾರ ಮತ್ತು ಹಕ್ಕುಗಳ ಮೂಲ ನೆಲೆಯಲ್ಲಿ ವಿಭಜನೆಯಾಗಿದ್ದು, ಅದು ಜನಾಂಗೀಯ ಹೋರಾಟ ಮತ್ತು ಸಂಘರ್ಷಗಳ ನಿಯಂತ್ರಕ್ಕಾಗಿ ಹಾಗೂ ಆ ಮೂಲಕ ಜನದ ಹಿತಾಸಕ್ತಿಯನ್ನು ಕಾಪಾಡಲೋಸುಗ ಅಭಿವೃದ್ಧಿಗೊಂಡುದಾಗಿದೆ. ಹಾಗೂ ಈ ಅಭಿವೃದ್ಧಿಯ ಕಾರ್ಯವು ಇನ್ನೂ ಅಪೂರ್ಣ ಸ್ಥಿತಿಯಲ್ಲಿಯೇ ಇದ್ದು, ಆ ಕಾರ್ಯವು ಇನ್ನೂ ಮುಂದುವರಿಯುತ್ತಲೇ ಇದೆ. ಅಲ್ಲದೆ ಅವರ ಈ ಸಿದ್ಧಾಂತವು ಕೇವಲ ರಾಷ್ಟ್ರದ ಆರ್ಥಿಕ ಅನುಕೂಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರೂಪಿಸಲಾದ ಅರೆಬರೆ ವಿಂಗಡಣೆಯಾಗಿದೆ. ಆದರೆ ಭಾರತೀಯ ಜನಾಂಗೀಯ ವರ್ಗ ವಿಂಗಡಣೆಯು ಪ್ರತಿಯೋರ್ವರ ಧಾರ್ಮಿಕ ಸಿದ್ಧಾಂತ, ಆಧ್ಯಾತ್ಮಿಕವೂ–ನೈತಿಕವೂ ಆದ ನಿಲುವು, ಹಾಗೂ ಅವರ ದೈನಂದಿನ ಕರ್ತವ್ಯದ ಮೇಲೆ ನಿರ್ಧಾರಿತವಾಗುತ್ತಿತ್ತು. ಅವನು ಸ್ವೀಕರಿಸಲಿರುವ ಧರ್ಮವು ಅವನ ಸ್ವಭಾವಕ್ಕೆ ಅನುಗುಣವಾಗಿಯೇ

ವರ್ಗೀಕರಣವಾಗುತ್ತಿತ್ತು. ಇಲ್ಲಿ ವರ್ಗ ನೀತಿಯು ಕರ್ಮಾಧಾರಿತವೇ ಹೊರತು, ಜನ್ಮಾಧಾರಿತವಾಗಿರಲಿಲ್ಲ. ಇಲ್ಲಿ ಬ್ರಾಹ್ಮಣನು ಅವನ ಹುಟ್ಟಿನಿಂದ ಬ್ರಾಹ್ಮಣತ್ವವನ್ನು ಸಂಪಾದಿಸಿರುವದಿಲ್ಲ. ಬದಲಾಗಿ ಯಾರು ಸಮಾಜದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಔನ್ನತ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಆಧ್ಯಾತ್ಮಿಕ ಮನೋಧರ್ಮವನ್ನು ಬೆಳೆಸಿಕೊಳ್ಳುತ್ತ ಆ ಮಾರ್ಗದಲ್ಲಿಯೇ ಆಧ್ಯಾತ್ಮಿಕ ತರಬೇತಿಯನ್ನು ಪಡೆದು ಬ್ರಹ್ಮವನ್ನು ಸಾಕ್ಷಾತ್ಕರಿಸಿ–ಕೊಳ್ಳುವನೋ ಆತನೇ ಬ್ರಾಹ್ಮಣನಾಗುತ್ತಿದ್ದನು; ಕ್ಷತ್ರೀಯ ತನವು ಅವನು ಯೋಧ ಕುಟುಂಬದ ಹಿನ್ನೆಲೆಯಿಂದ ಬಂದವನೋ ಅಥವಾ ರಾಜ ಪರಿವಾರದವನೋ ಎಂಬ ಕಾರಣಕ್ಕಾಗಿ ಅವನಿಗೆ ಕ್ಷತ್ರೀಯನೆಂದು ಕರೆಯಲಾಗುತ್ತಿರಲಿಲ್ಲ. ಬದಲಾಗಿ ರಾಷ್ಟ್ರ ರಕ್ಷಣೆಯ ವಿಷಯದಲ್ಲಿ ಬದ್ಧನಾಗಿ ಬಾಲ್ಯದಿಂದಲೇ ದೇಹದಾರ್ಢ್ಯ ಸಂಪನ್ನನಾಗಿ ಹಲವಾರು ವಿಧದ ಶಸ್ತ್ರಾಸ್ತ್ರ ವಿದ್ಯೆಯಲ್ಲಿ ಪರಿಣತನಾಗಿ ಸಮಾಜದಲ್ಲಿ ಸುಖ–ಶಾಂತಿ ನೆಲೆಸಲೋಸುಗ, ತನ್ನ ದೇಶವನ್ನು ಕಾಪಾಡುವ ನಿಟ್ಟಿನಲ್ಲಿ ತನ್ನನ್ನೇ ಅರ್ಪಿಸಿಕೊಳ್ಳುವ ಮನೋಭಾವನೆಯನ್ನು ಬೆಳೆಸಿಕೊಂಡ ವೀರಪುತ್ರನಿಗೆ ಕ್ಷತ್ರೀಯ ತನವನ್ನು ಅನುಮೋದಿಸಲಾಗುತ್ತಿತ್ತು; ದೇಶದ ಸಂಪತ್ತನ್ನು ಕೂಡಿಡುವ ಮತ್ತು ರಕ್ಷಿಸಿದ ಆ ಭಾಂಡಾರವನ್ನು ರಾಷ್ಟ್ರದ ಔನ್ನತ್ಯಕ್ಕೆಂದು ಬಳಸಿಕೊಳ್ಳುವ ಆರ್ಥಿಕ ವಿದ್ಯೆಯನ್ನು ಸಂಪಾದಿಸಿ ದೇಶ–ವಿದೇಶಗಳಿಂದ ವ್ಯಾಪಾರ–ವಹಿವಾಟುಗಳನ್ನು ನೋಡಿಕೊಳ್ಳುತ್ತ ದೇಶದ ಶ್ರೀಮಂತಿಕೆಯನ್ನು ಹೆಚ್ಚಿಸಲಿರುವ ಜನಾಂಗವನ್ನು ವೈಶ್ಯರೆಂದು ಕರೆಯಲಾಗುತ್ತಿತ್ತು; ಇನ್ನು ಕೊನೆಗೆ ರಾಷ್ಟ್ರದ ಸರ್ವ ವಿಧದ ಸೇವಾ ಕಾರ್ಯಗಳಲ್ಲಿ ತೊಡಗಿ ತನಗೆ ವಹಿಸಿದ ಕರ್ತವ್ಯವನ್ನು ವಿನಮ್ರವಾಗಿ ನಿರ್ವಹಿಸುತ್ತಾ ದೇಶದ ಏಳಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡುವ ಸಮುದಾಯವನ್ನು ಶೂದ್ರರು ಎನ್ನಲಾಗುತ್ತಿತ್ತು. ತಮ್ಮದೇ ಆದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಾ ಈ ನಾಲ್ಕೂ ವರ್ಗಗಳು ಏಕ ಕಾಲದಲ್ಲಿ ದೇಶದ ಸುಖ–ಶಾಂತಿ–ನೆಮ್ಮದಿಗಾಗಿಯೇ ದುಡಿಯುತ್ತಿತ್ತು. ಆ ಹಂತದಲ್ಲಿ ಬ್ರಾಹ್ಮಣರು ಶಿರೋಭಾಗದವರೂ, ಶೂದ್ರರು ತೀರಾ ಕೆಳಮಟ್ಟದವರೂ ಎಂಬ ಭಾವನೆಯು ಪ್ರಚಲಿತದಲ್ಲಿತ್ತೆಂಬುದು ನಿಜ! ಆದರೆ ಅದು ಕೇವಲ ಆಕಸ್ಮಿಕವಾದ, ಬಾಹ್ಯ ತೋರಿಕೆಗೆ ಮಾತ್ರ ಸೀಮಿತವಾಗಿತ್ತೇ ಹೊರತು ಯಾರದೋ ವೈಯಕ್ತಿಕ ಜೀವನಕ್ಕೆ ಧಕ್ಕೆ ತರುವಂತಹ ನಿಲುವನ್ನು ತಳೆದಿರಲಿಲ್ಲ. ಏಕಮೇವ ವಿರಾಟ್ ಪುರುಷನ ಅಂಗಗಳಾದ ಬ್ರಾಹ್ಮಣ–ಶೂದ್ರರ ನಡುವೆ ಯಾವುದೇ ತೆರನಾದ ಭಿನ್ನಾಭಿಪ್ರಾಯಗಳಿರಲಿಲ್ಲ, ಮೇಲು–ಕೀಳೆಂಬ ಮನೋಭಾವನೆಗಳಿರಲಿಲ್ಲ. ಆ ವಿರಾಟ್ ಪುರುಷನಿಗೆ ತನ್ನ ದೇಹದ ಸರ್ವಾಂಗಗಳೂ ಅವಶ್ಯಕವೇ ಆಗಿದ್ದವು. ಅದಕ್ಕಂತಲೇ ತಮ್ಮ ಜಾತಿಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವ ಬ್ರಾಹ್ಮಣ ಸಮುದಾಯಕ್ಕೆ

ಚೋಖಾ ಮೇಳಾ, ಮರಾಠಿ ಪರಯ್ಯರಂತಹ ಕೆಳಜಾತಿಯ ಯೋಗಿಗಳು ಗುರುಗಳಾದರು; ಚಾಂಡಾಲನೋರ್ವನು ಶಂಕರಾಚಾರ್ಯನಿಗೆ ಬೋಧಕನಾದನು. ಏಕೆಂದರೆ ಪರಯ್ಯನ ದೇಹದಲ್ಲಿ ಬ್ರಹ್ಮನ ದರ್ಶನವಾಗಿತ್ತು, ಚಾಂಡಾಲನ ಅಸ್ತಿತ್ವದೊಳಗೆ ಸರ್ವಶಕ್ತನಾದ ಶಿವನ ಸನ್ನಿಧಾನವಿತ್ತು. ಅದನ್ನು ಕಂಡುಕೊಂಡ ಬ್ರಾಹ್ಮಣರು ಅವರಿಗೆ ಮಣಿದಿದ್ದರು. ಆದರೆ ಬರುಬರುತ್ತಾ ಚಾತುರ್ವರ್ಣ್ಯ ವ್ಯವಸ್ಥೆಯ ಮೂಲರೂಪವೇ ಕಳೆದುಹೋಯಿತು. ಆಧುನಿಕರ ದೃಷ್ಟಿಯಲ್ಲಿ ಅದು ದಬ್ಬಾಳಿಕೆಯ ಜಾತಿ ವ್ಯವಸ್ಥೆಯಾಗಿ ಬದಲಾಯಿತು. ಹಿಂದೂ ನಾಗರೀಕತೆಯು ರೂಪಿಸಿದ ಆಧ್ಯಾತ್ಮಿಕ–ನೈತಿಕ ನಿಲುವಿನ ಧಾರ್ಮಿಕ ಸಿದ್ಧಾಂತವೊಂದು ತೀರಾ ಕೆಳಮಟ್ಟದ ಅವಹೇಳನಕ್ಕೆ ತುತ್ತಾಯಿತು. ಆದರೆ ಭೌತಿಕತೆಯನ್ನು ತೊರೆದು ಆಧ್ಯಾತ್ಮಿಕ ನೆಲೆಯಲ್ಲಿಯೇ ನಿರ್ಮಾಣವಾದ ಈ ಚಾತುರ್ವರ್ಣ ವ್ಯವಸ್ಥೆಗೆ ತನ್ನದೇ ಆದ ಸೈದ್ಧಾಂತಿಕ ನಿಲುವು ಇದೆ ಎಂಬುದು ಮಾತ್ರ ಸತ್ಯ.

ಕಾಲಾಂತರದ ಯುಗ ಪ್ರವಾಹದಲ್ಲಿ ಈ ಚಾತುರ್ವರ್ಣ್ಯ ವ್ಯವಸ್ಥೆಯು ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿತು. ಅದರ ವಿಕೃತಿಯನ್ನು ಎತ್ತಿತೋರಿಸುವವರ ಕೈಗೆ ಆಹಾರವಾಯಿತು. ಆದರೆ ನಾವು ಇಲ್ಲಿ ತಿಳಿದುಕೊಳ್ಳಬೇಕಾದ ಮುಖ್ಯವಾದ ವಿಷಯವೆಂದರೆ ಇಲ್ಲಿ ರೂಪಾಂತರವಾಗಿದ್ದು ಕೇವಲ ಜಾತಿ ವ್ಯವಸ್ಥೆಯಲ್ಲ, ಬದಲಾಗಿ ಪುರಾತನ ಸಂಸ್ಥೆಗಳ ಅವಸಾನದ ರೂಪದಲ್ಲಿ ಮಾನವೀಯ ಸ್ವಭಾವ ಮತ್ತು ಮನುಷ್ಯ ಮಾತ್ರದ ಚೈತನ್ಯಗಳೇ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು, ವಿಕೃತಿಯಲ್ಲಿ ಕೊಳೆತುಹೋಯಿತು, ಕಾಲಮಾನದ ಪಲ್ಲಟದಲ್ಲಿ ಕಳೆದೇ ಹೋಯಿತು. ಇದು ಜನಾಂಗೀಯ ಮನೋಭೂಮಿಕೆಯಲ್ಲಿದ್ದ ನಮ್ಯತೆಯ ಅವಸಾನದ ಮೊದಲ ಕುರುಹಾಯಿತು, ಇದು ಸಮಾಜದಲ್ಲಿರಬೇಕಾದ ಮೂಲ ಪರಿಕಲ್ಪನೆಯ ಚೈತನ್ಯದ ಮರೆವಿನ ಚಿಹ್ನೆಯಾಗಿ ಬದಲಾಯಿತು. ಶಾಶ್ವತವಾದ ಆತ್ಮವು ಚಿರಂತನತ್ವದ ಸಂಕೇತವಾಗಿದ್ದು, ಅದು ಧರಿಸುವ ಅಸಂಖ್ಯ ದೇಹಗಳು ಬದಲಾಗುವ ತಾತ್ಕಾಲಿಕತೆಯ ಸ್ವರೂಪಗಳಾಗಿರುತ್ತವೆ. ಹಾಗಾಗಿ ಚೈತನ್ಯವು ಒಂದೇ ಆಗಿರುವಾಗ ದೇಹಗಳು ಬದಲಾಗುತ್ತಲೇ ಸಾಗಬೇಕು. ಯಾವ ದೇಹಗಳು ಬದಲಾವಣೆಯನ್ನು ಒಪ್ಪುವದಿಲ್ಲವೋ ಅವುಗಳ ಅಂತ್ಯವಾಗಲೇಬೇಕು. ಅಥವಾ ದೇಹವು ಬದುಕ–ಬಯಸಿದರೆ ಅದು ತನ್ನ ಸುತ್ತಲಿನ ವಾತಾರಣದ ಬದಲಾವಣೆಗೆ ತಕ್ಕಂತೆ ತಾನೂ ಪರಿವರ್ತನೆಯಾಗುತ್ತ ಸಾಗಲೇಬೇಕು. ಹಾಗಾಗಿ ಇಲ್ಲಿ ಚೈತನ್ಯವೆಂದರೆ ಋತವೆಂದೂ, ಅದು ಧರಿಸಿ–ಬಿಸಾಡುವ ಅಸಂಖ್ಯ ದೇಹಗಳು ಜಾತಿಯ ಸ್ವರೂಪಗಳೇ ಆಗಿದ್ದು,

ಪ್ರತಿಯೋರ್ವ ಆತ್ಮಗಳು ತಮ್ಮ ಭವಾಂತರಗಳಲ್ಲಿ ಬದಲಾವಣೆಗೆ ತಕ್ಕಂತೆ ತಮ್ಮ ವರ್ಣವನ್ನು ಬದಲಿಸುತ್ತಲೇ ಸಾಗುತ್ತಿರಬೇಕು ಎಂಬ ಸತ್ಯವನ್ನು ನಾವೆಲ್ಲ ಅರಿಯ–ಬೇಕಾಗುತ್ತದೆ. ಆದರೆ ಕಾಲಾಂತರದಲ್ಲಿ ಈ ಚಾತುರ್ವರ್ಣ್ಯ ವ್ಯವಸ್ಥೆಯು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ವ್ಯಕ್ತಿಗತವಾದ ಅರ್ಹತೆಗೆ ತಕ್ಕಂತೆ ಜಾತಿ ನಿರ್ಧರಿಸುವ ವ್ಯವಸ್ಥೆಯನ್ನು ಕೈಬಿಟ್ಟು, ವರ್ಣ ವ್ಯವಸ್ಥೆಯನ್ನು ಕರ್ಮಾಧಾರಿತದಿಂದ ಜನ್ಮಾಧಾರಿತವಾಗಿ ಬದಲಾಯಿಸಿ ಬಿಟ್ಟಿತು. ಹಾಗೂ ಜಾತಿ ವ್ಯವಸ್ಥೆಯು ತನ್ನ ಸೃಷ್ಟಿಗೆ ಕಾರಣವಾದ ಮಹೋನ್ನತ ಉದ್ದೇಶದಿಂದ ದೂರ ಸರಿಯುತ್ತಲೇ ಸಾಗಿತು. ಹೀಗೆ ಆಧ್ಯಾತ್ಮಿಕ ಸ್ತರದಿಂದ ಆಗಬೇಕಿದ್ದ ವರ್ಗ ನೀತಿಯು ಭೌತಿಕ ಪರೀಕ್ಷಣಗಳ ಮೂಲಕ ಸಾಗತೊಡಗಿತು, ಇದರಿಂದ ಹಿಂದೂ ಸಂಪ್ರದಾಯವು ತನಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವ ವಿರುದ್ಧ ಪ್ರವೃತ್ತಿಗೆ ಹೊಂದಿಕೊಂಡಿತು. ಈ ಸಂದಿಗ್ಧದಿಂದಾಗಿ ಆಧ್ಯಾತ್ಮಿಕತೆಯನ್ನು ಬದಿಗೊತ್ತಿ, ಜಡ ಭೌತಿಕತೆಯನ್ನೇ ಮೇಲೆತ್ತಲಾಯಿತು. ಹಾಗೂ ಇದುವೇ ಜಾತಿಯ ಅಹಂಕಾರಕ್ಕೆ, ಮೇಲು–ಕೀಳುಗಳೆಂಬ ದಬ್ಬಾಳಿಕೆಯ ಸ್ವರೂಪಗಳಿಗೆ ಕಾರಣವಾಗಿ ರಾಷ್ಟ್ರದ ದೌರ್ಬಲ್ಯಕ್ಕೆ ಮೂಲ ಕಾರಣಗಳಾಗಿ ದೇಶವನ್ನು ದುಃಸ್ಥಿತಿಗಿಳಿಸಿತು. ಆದರೆ ಈಗ ಕಾಲ ಬದಲಾಗಿದೆ. ಮೂಲದ ಸತ್ಯವು ಸರ್ವರಲ್ಲೂ ಜಾಗೃತವಾಗುವ ಸಮಯವು ಸನ್ನಿಹಿತವಾಗಿದೆ. ಈಗಲಾದರೂ ನಾವು ಎಚ್ಚೆತ್ತುಕೊಂಡು ಈ ಚಾತುರ್ವರ್ಣ್ಯ ವ್ಯವಸ್ಥೆಯನ್ನು ಮತ್ತೆ ಮೂಲ ಸ್ವರೂಪದಲ್ಲಿ ರೂಪಾಂತರಿಸಬೇಕು. ಆ ಮೂಲಕ ಭಾರತೀಯ ನಾಗರೀಕತೆಯನ್ನು ಮತ್ತೆ ಔನ್ನತ್ಯದ ಸ್ಥಿತಿಗೆ ಕೊಂಡೊಯ್ಯಬೇಕು. ಇದು ನಮ್ಮೆಲ್ಲರ ಕರ್ತವ್ಯವೂ ಹೌದು!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/682–84**

**ಭಾರತ ದೇಶವೆಂದರೆ ಏನು?**

ಮರ್ತ್ಯದ ಪ್ರತಿಯೋರ್ವ ಮಾನವನು ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಮೂರು ವಿಧವಾದ ದೇಹಗಳಿಂದ ರಚಿತವಾದಂತೆ, ರಾಷ್ಟ್ರವೂ ಸಹಿತ ಈ ಮೂರು ತೆರನಾದ ದೇಹಗಳಿಂದಲೇ ನಿರ್ಮಿತವಾಗಿದೆ. ನಮ್ಮ ತತ್ವ ಶಾಸ್ತ್ರದ ಪ್ರಕಾರ ಮಾನವನ ಬಾಹ್ಯ ರಚನೆಯು ಸ್ಥೂಲದೇಹದಿಂದಾಗಿದ್ದು, ಅದು ತನ್ನೊಳಗೆ ಇತರ ಎರಡೂ ದೇಹಗಳನ್ನು ಧರಿಸಿಕೊಂಡು ಮಾನವನ ಸಂಪೂರ್ಣ ನಿರ್ಮಿತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುತ್ತದೆ; ಹಾಗಾಗಿ ನಾವು ಓರ್ವ ವ್ಯಕ್ತಿಯ ಕುರಿತು ವಿಮರ್ಶೆ ಮಾಡಬೇಕಾದ ಸಂದರ್ಭ ಬಂದಲ್ಲಿ ನಾವು ಅವನ ಆತ್ಮವು ಧರಿಸಿದ ಮೂರೂ

ದೇಹಗಳನ್ನು ಕುರಿತು ಕೂಲಂಕುಶವಾಗಿ ತಿಳಿದಿರಬೇಕಾಗುತ್ತದೆ. ಹಾಗೆಯೇ ಒಂದು ರಾಷ್ಟ್ರದ ಸರ್ವಾಂಗೀಣ ದರ್ಶನವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ, ಆ ರಾಷ್ಟ್ರದ ರಚನೆಗೆ ಕಾರಣವಾದ ತ್ರಿವಿಧ ರೂಪದ ದೇಹಗಳ ಕುರಿತು ಧೇನಿಸಬೇಕಾಗುತ್ತದೆ. ಉದಾಹರಣೆಗೆ ನಮ್ಮ ತಾಯ್ನಾಡಾದ ಭಾರತ ದೇಶದ ಕುರಿತು ಚರ್ಚಿಸಬೇಕಾದಲ್ಲಿ, ಭಾರತವು ಉತ್ತರದಲ್ಲಿ ಗಗನ ಚುಂಬಿತವಾದ ಹಿಮಾದ್ರಿ ಶೃಂಗಗಳಿಂದಲೂ, ದಕ್ಷಿಣದಲ್ಲಿ ಕನ್ಯಾಕುಮಾರಿಯ ಕಡಲತಡಿಯವರೆ ಗೂಚಾಚುಕೊಂಡಿದ್ದು, ಉಳಿದೆರಡು ಮೂಡಣ–ಪಡುವಣ ದಿಕ್ಕುಗಳನ್ನೂ ಸಾಗರವು ಸುತ್ತುವರೆದಿದ್ದು; ಇಲ್ಲಿ ಗಂಗಾ, ಯಮುನಾ, ನರ್ಮದಾ, ಕೃಷ್ಣಾ, ಗೋದಾವರಿ ನದಿಗಳು ನಿರಂತರವಾಗಿ ಹರಿದು ನೆಲದ ಹೊನಲನ್ನು ಸಮೃದ್ಧವಾಗಿರಿಸಿವೆ; ಒಂದೊಮ್ಮೆ ಸಂಪದ್ಭರಿತವಾಗಿದ್ದ ಪ್ರಾಚೀನ ನಗರಿಗಳು, ಎತ್ತರ–ಬಿತ್ತರವಡೆದ ಭವ್ಯವಾದ ದೇವಾಲಯಗಳು, ಕಲಾತ್ಮಕವಾಗಿ ವಿನ್ಯಾಸಗೊಳಿಸಿದ ಅರಮನೆಯ ವೈಭವಗಳು ಈ ದೇಶದ ಸೌಂದರ್ಯವನ್ನು ವರ್ಧಿಸಿವೆ. ಇಂತು ಬಾಹ್ಯ ದರ್ಶನದಲ್ಲಿ ವೈಭವೋಪೇತವಾಗಿ ಕಾಣುವ ಈ ಭೂ–ಭಾಗವನ್ನು ನಾವು ಭಾರತವೆಂದು ಕರೆಯುತ್ತೇವೆ. ಅಲ್ಲದೇ ಭಾರತವೆಂದ ತಕ್ಷಣ ನಮ್ಮ ಮನಃಪಟಲದಲ್ಲಿ ಮೂಡುವ ಈ ದೃಶ್ಯವೇ, ಈ ರಾಷ್ಟ್ರದ ಸ್ಥೂಲ ದೇಹವಾಗಿದೆ. ಇದರ ಸುಂದರ ನಿರೂಪಣೆಯನ್ನು ಬಂಕಿಮ್ ಚಂದ್ರ ಚಟರ್ಜಿಯವರು ತಮ್ಮ 'ವಂದೇ ಮಾತರಂ' ಗೀತೆಯಲ್ಲಿ ಬಹು ಸೊಗಸಾಗಿ ಹಿಡಿದಿಟ್ಟಿದ್ದಾರೆ. ಇಂತಹ ಭರತ ಭೂಮಿಯಲ್ಲಿ ಸುಮಾರು ಮೂವತ್ಮೂರು ಕೋಟಿ ಜನರು ತಮ್ಮ ಸುಖ–ದುಃಖಗಳೊಂದಿಗೆ, ಒಳಿತು–ಕೆಡುಕುಗಳೊಂದಿಗೆ, ಆಸೆ–ನಿರಾಸೆಗಳೊಂದಿಗೆ ನೆಲೆಸುತ್ತಾ, ಈ ರಾಷ್ಟ್ರದ ಸೂಕ್ಷ್ಮ ದೇಹದ ಸ್ಥಾನವನ್ನು ಪಡೆದಿದ್ದಾರೆ. ಈ ಬಾಹ್ಯ ರಚನೆ ಮತ್ತು ಅಂಕಿ–ಅಂಶಗಳು ಕಾಲಕ್ಕೆ ತಕ್ಕಂತೆ ಬದಲಾಗಬಹುದು. ಆದರೆ ಈ ರಾಷ್ಟ್ರದ ಮೂಲಚೇತನವು ಮಾತ್ರ ಪರಮಾಣು ರೂಪದಲ್ಲಿ, ರಾಷ್ಟ್ರದಾತ್ಮದ ಬೀಜ ಸ್ಥಾನದಲ್ಲಿ ಚೈತನ್ಯಯುತವಾಗಿ ನೆಲೆಸಿರುತ್ತದೆ. ಇದುವೇ ಭಾರತದ ಕಾರಣ ಶರೀರವಾಗಿದೆ.

ಆದರೆ ರಾಷ್ಟ್ರ ಚಿಂತನೆಯಲ್ಲಿ ಈ ಅಂಕಿ–ಅಂಶಗಳಷ್ಟೇ ಸಾಕಾಗುವದಿಲ್ಲ. ನಾವು ಓರ್ವ ವ್ಯಕ್ತಿಯ ಬಗ್ಗೆ ಮಾತನಾಡವಾಗ ಅವನ ಪ್ರಸ್ತುತ ಸ್ಥಿತಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮುಂಬರಿಯುವದಿಲ್ಲ. ಬದಲಾಗಿ ಅವನ ಭೂತ–ಭವಿಷ್ಯತ್‌ಗಳನ್ನೂ ಸಹ ಲಕ್ಷ್ಯದಲ್ಲಿಟ್ಟುಕೊಂಡು ಯೋಚಿಸುತ್ತೇವೆ. ಹಾಗೆಯೇ ರಾಷ್ಟ್ರದ ವಿಷಯದಲ್ಲಿಯೂ ಸಹ ನಾವು ಅದರ ಭೂತ–ವರ್ತಮಾನ–ಭವಿಷ್ಯತ್‌ಗಳನ್ನು

ಅರಿತು ಮಾತನಾಡಬೇಕಾಗುತ್ತದೆ. ಉದಾಹರಣೆಗೆ ಭಾರತದ ನದಿಗಳು, ಪರ್ವತಗಳು ಹಾಗೂ ಪುರಾತನ ನಗರಿಗಳ ಬಗ್ಗೆ ಮಾತನಾಡುವಾಗ ನಮ್ಮ ಮನಸ್ಸಿನಲ್ಲಿ ಅವುಗಳ ಪ್ರಸ್ತುತ ಸ್ಥಿತಿಯಲ್ಲದೆ ಅದರ ಹಿಂದಿನ ಐದು ಸಾವಿರ ವರ್ಷಗಳ ಗತ ಇತಿಹಾಸವು ಮೂಡುತ್ತದೆ. ನಾವು ದೆಹಲಿ ಮತ್ತು ಆಗ್ರಾ ನಗರಗಳ ಕುರಿತು ಮಾತನಾಡುವಾಗ ಚಕ್ರವರ್ತಿ ಅಕ್ಬರ್ ಬಾದಷಾಹನ ಕಾಲದ ರಾಜಕೀಯ ಚಿತ್ರಣವು ನಮ್ಮೆದುರು ತೆರೆದುಕೊಳ್ಳುತ್ತದೆ. ಅದಕ್ಕಾಗಿಯೇ ನಮ್ಮ ರಾಷ್ಟ್ರದ ಕುರಿತು ಚಿಂತಿಸುವಾಗ ನಮ್ಮ ಪೂರ್ವಜರ ಮಹಾನ್ ಸಾಧನೆಗಳನ್ನು ನೆನೆಸಿಕೊಳ್ಳಬೇಕಾಗುತ್ತದೆ. ನಾವು ಕಾಲಗಟ್ಟದಲ್ಲಿ ಹಿಂದೆ ಸರಿದಂತೆ ಶಿವಾಜಿ ಮಹಾರಾಜರು, ಸಾಮ್ರಾಟ ಅಶೋಕ, ಅಕ್ಬರ್ ಮಹಾಶಯರ ಅಭೂತಪೂರ್ವ ಸಾಧನೆಗಳು ತಮ್ಮ ಅಮೋಘ ಅಸ್ತಿತ್ವವನ್ನು ನಮ್ಮೆದುರು ತೆರೆದಿಡುತ್ತವೆ. ಈ ಹಿಮ್ಮುಖ ಚಲನೆಯು ಹೀಗೆಯೇ ಮುಂದುವರಿದಂತೆ, ಅದು ನಮ್ಮನ್ನು ಭರತ ಭೂಮಿಯ ಆದ್ಯ ನಿರ್ಮಾತೃಗಳಾದ ಪುರಾತನ ಋಷಿಗಳ ಕಾಲದವರೆಗೂ ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/812–13**

## ರಾಷ್ಟ್ರೀಯತೆಯೇ ಒಂದು ಧರ್ಮ

ರಾಷ್ಟ್ರೀಯತೆ ಎಂದರೇನು ಎಂಬುದನ್ನು ನೀವು ಅರಿತಿದ್ದೀರಾ? ನಿಮಗೇ ತಿಳಿಯದಂತೆ ನೀವು ಒಪ್ಪಿಕೊಂಡಿರುವ ಅಪ್ಪಿಕೊಂಡಿರುವ ಧರ್ಮವೇ ಈ ರಾಷ್ಟ್ರೀಯತೆ ಎಂಬುದನ್ನು ನೀವು ಬಲ್ಲಿರಾ? ಒಂದು ವೇಳೆ ನೀವು ಈ ರಾಷ್ಟ್ರೀಯತೆಯ ಧರ್ಮವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದಲ್ಲಿ ನಿಮ್ಮನ್ನು ನೀವು ರಾಷ್ಟ್ರೀಯವಾದಿಗಳು ಎಂದು ಕರೆದುಕೊಳ್ಳಬಹುದು. ಒಂದೊಮ್ಮೆ ನೀವು ನಿಮ್ಮನ್ನು ರಾಷ್ಟ್ರೀಯವಾದಿಗಳು ಎಂದು ಹೆಮ್ಮೆಯಿಂದ ಕರೆದುಕೊಂಡಿದ್ದೇ ಆದಲ್ಲಿ ನಿಮ್ಮ ರಾಷ್ಟ್ರೀಯತೆಯ ಧರ್ಮವನ್ನು ಪಾಲಿಸುತ್ತ, ಆ ಧರ್ಮದ ಹಾದಿಯಲ್ಲಿಯೇ ಬದುಕಲು ಪ್ರಯತ್ನಿಸಿ. ಆ ಮೂಲಕ ನಿಮ್ಮೊಳಗೆ ಸುಪ್ತವಾಗಿರುವ ಶಕ್ತಿಯ ಸಾಮರ್ಥ್ಯವನ್ನು ಅರಿಯಲು ಪ್ರಯತ್ನಿಸಿ. ಆ ಶಕ್ತಿಯನ್ನು ಜಾಗೃತಗೊಳಿಸಿ ಕಾರ್ಯಗತಗೊಳಿಸುವಂತೆ ಅದನ್ನು ಪ್ರಚೋದಿಸಿರಿ. ಆಗ ಮಾತ್ರ ನಿಮ್ಮಿಂದ ಜರುಗುವ ಎಲ್ಲಾ ಮಹೋನ್ನತ ಕಾರ್ಯಗಳು ನಿಮ್ಮ ವೈಯಕ್ತಿಕ ಸಾಮರ್ಥ್ಯದಿಂದ ಸಾಧ್ಯವಾದುದಲ್ಲ ಬದಲಾಗಿ ನಿಮ್ಮೊಳಗಿರುವ ಋತಚೇತನದ ಅವ್ಯಕ್ತ ಅಂತಃಸತ್ವದ ಪ್ರೇರಣೆಯಿಂದಲೇ ಸಾಧ್ಯವಾಗಿದೆ ಎಂಬುದನ್ನು ಮನಗಾಣುವಿರಿ. ಹಾಗೂ ಆ ಅವ್ಯಕ್ತ ಋತಚೇತನದ ಪ್ರೇರಣೆಯಿಂದ ನೀವು

ಬದುಕುವ ಪ್ರತಿಯೊಂದು ಗಂಟೆಯನ್ನು ಹಿಂದಣ ಕಾಲಕ್ಕಿಂತಲೂ ಉಚ್ಚತಮವಾಗಿ ಮಾರ್ಪಡಿಸಿಕೊಳ್ಳಲು ಪ್ರಯತ್ನಿಸಿರಿ. ನಿಮ್ಮಲ್ಲಿರುವ ಚಿಂತನೆಯನ್ನು–ಕಾರ್ಯ ವೈಖರಿಯನ್ನು ಆ ಚಿರಂತನವಾದ ಋತಚೇತನದ ಸೇವೆಯಲ್ಲಿ ತೊಡಗಿಸಿ ಅದರ ಮಾರ್ಗದರ್ಶನದ ಮೂಲಕ ಸಾಗಿದ್ದೇ ಆದಲ್ಲಿ ನಿಮ್ಮ ಸಾಧನೆಯು ಯಾವುದೇ ಅಡ್ಡಿ ಆತಂಕಗಳಿಲ್ಲದಂತೆ ಸ್ವಯಂಪೂರ್ಣಗೊಳ್ಳುವುದು. ಇಂತಹ ನಿತ್ಯನಿರಂತರವಾದ ಶಕ್ತಿಯ ಅರಿವಿಲ್ಲದ ಜನರು, 'ನಮ್ಮಲ್ಲಿ ಹೊಸ ಉಪಾಯಗಳು ವೇಗವಾಗಿ ಫಲಕಾರಿಯಾಗುವದಿಲ್ಲ'ವೆಂದು, 'ನಾನು ಪೂರ್ಣಗೊಳಿಸಬೇಕಿರುವ ಕಾರ್ಯವು ಬಹು ನಿಧಾನವಾಗಿ ಸಾಗುತ್ತಿದೆ'ಯೆಂದು, 'ನಮ್ಮನ್ನು ನಮ್ಮ ಸಾಧನೆಯ ಗಿರಿ ಶಿಖರವನ್ನು ತಲುಪಿಸಲಿಕ್ಕಾಗಿ ಓರ್ವ ಯೋಗ್ಯ ನಾಯಕನಿಲ್ಲ'ವೆಂದು, 'ಹಾಗೊಂದು ವೇಳೆ ಯಾರಾದರೂ ಮಹಾನ್ ವ್ಯಕ್ತಿಗಳು ಬಂದು ಇಂತಹುದೇ ಮಾರ್ಗದಲ್ಲಿ ಮುನ್ನಡೆಯುವಂತೆ ನಮ್ಮನ್ನು ಪ್ರೇರೆಪಿಸಬಹುದು. ಆದರೆ ಖುದ್ದು ಅವರೇ ನಮ್ಮನ್ನು ಕೈಹಿಡಿದು ಅವರು ತೋರಿದ ಮಾರ್ಗದಲ್ಲಿ ಮುನ್ನಡೆಸುವದಿಲ್ಲ'ವೆಂದು ವಿಧವಿಧದ ಕಾರಣಗಳನ್ನು ಹೇಳುತ್ತ ವೃಥಾ ಕಾಲಹರಣ ಮಾಡುತ್ತಿರುತ್ತಾರೆ. ಆದರೆ ಇಲ್ಲಿ ತಿಳಿದಿರಬೇಕಾದ ಬಹುಮುಖ್ಯವಾದ ಅಂಶವೆಂದರೆ, ಹೊರಗಿನಿಂದ ಯಾರೋ ಬಂದು ನಿಮ್ಮನ್ನು ನಿಮ್ಮ ಕಾರ್ಯಕ್ಕೆಂದು ಮಾರ್ಗದರ್ಶನ ಮಾಡಬೇಕಿಲ್ಲ. ಏಕೆಂದರೆ ನಿಮಗೆ ಮಾರ್ಗದರ್ಶನ ನೀಡಲಿರುವ ನಾಯಕ ನಿಮ್ಮೊಳಗೇ ಇದ್ದಾನೆ. ಒಂದು ವೇಳೆ ನೀವು ನಿಮ್ಮೊಳಗಿರುವ ಆ ಮಾರ್ಗದರ್ಶಕನನ್ನು ನೋಡಲು ಶಕ್ತರಾದಲ್ಲಿ, ಅವನ ಅಂತಃಪ್ರೇರಿತ ನುಡಿಗಳನ್ನು ಕೇಳಲು ಶಕ್ತರಾದಲ್ಲಿ ನೀವು ಬೇರೊಬ್ಬರ ಜೀವನದಲ್ಲಿ ಮಾರ್ಗದರ್ಶಕರಾಗಲು ಬಯಸುವದಿಲ್ಲ. ಏಕೆಂದರೆ ಪ್ರತಿಯೋರ್ವರಲ್ಲೂ ನಿಮ್ಮೊಳಗಿರುವಂತೆ ಓರ್ವ ದಿವ್ಯ ಪುರುಷನ ಸನ್ನಿಧಿಯಿದ್ದು, ಆತ ನಿಮ್ಮೊಳಗಿಂದ ನಿಮ್ಮನ್ನು ಪ್ರೇರೇಪಿಸುತ್ತಿರುವಂತೆ ಬೇರೊಬ್ಬರೊಳಗೂ ನೆಲೆಸಿ ಅವರನ್ನೂ ಅವರ ಸಾಧನೆಯಲ್ಲಿ ಸಹಕರಿಸುತ್ತಿರುತ್ತಾನೆ. ಆದರೆ ಯಾರು ಆ ಅಂತಃಪುರುಷನ ದಿವ್ಯವಾಣಿಗೆ ಓಗೊಟ್ಟು ಅವನು ತೋರಿದ ಮಾರ್ಗದಲ್ಲಿ ಸಾಗಿ ತಾನೇ ಸ್ವತಃ ಆ ಪುರುಷನ ಸ್ಥಾನವನ್ನು ಗಳಿಸಿಕೊಳ್ಳುತ್ತಾನೋ, ಅಂತಹ ವ್ಯಕ್ತಿಯ ಒಂದು ಕರೆಯಲ್ಲಿ ಲಕ್ಷ ಜನರ ಲಕ್ಷ್ಯವನ್ನು ತನ್ನೆಡೆ ಸೆಳೆದುಕೊಳ್ಳುವ ಸಾಮರ್ಥ್ಯವು ಸಿದ್ಧಿಸಿರುತ್ತದೆ. ಅಂತಹ ಕ್ರಾಂತಿಕಾರಿ ಹೋರಾಟಗಾರರ ದಿವ್ಯ ಧ್ವನಿಯಿಂದಲೇ ನಾವಿಂದು ಪರಾತಂತ್ರ್ಯದಿಂದ ಸ್ವಾತಂತ್ರದ ಪರಮಾವಧಿಯನ್ನು ತಲುಪಿದ್ದೇವೆ. ಬಂಗಾಳದಲ್ಲಿ ಅಂತಹ ಮಹಾನ್ ನಾಯಕರ ಆಗಮನದಿಂದ ಮುಂದಿನ ಐವತ್ತು–

ನೂರು ವರ್ಷಗಳಲ್ಲೂ ಸಹ ನಾವು ಸಂಪಾದಿಸಲು ಸಾಧ್ಯವಾಗದಂತಹ ಚೈತನ್ಯವನ್ನು ನಾವು ಕೇವಲ ಮೂರು ವರ್ಷಗಳಲ್ಲಿ ಗಳಿಸಿಕೊಂಡೆವು. ಅದುವೇ ಬಂಗಾಳದಲ್ಲಿ ರಾಷ್ಟ್ರೀಯತೆಯ ಪಂಥದ ಜನನಕ್ಕೂ ಮುಂದೊಮ್ಮೆ ಸ್ವಾತಂತ್ರ್ಯಕ್ಕೂ ಕಾರಣವಾಯಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/830–31**

### ರಾಷ್ಟ್ರೀಯತೆ ಎಂಬುದು ದೇವ ನಿರ್ಮಿತವಾದ ಒಂದು ಶಕ್ತಿ

ರಾಷ್ಟ್ರೀಯತೆಯು ವ್ಯಕ್ತಿಗತವಾಗಿ ಸೃಷ್ಟಿಯಾದುದಲ್ಲ. ಬದಲಾಗಿ ಅದೊಂದು ದೈವ ನಿರ್ಮಿತವಾದ ಶಕ್ತಿ. ಅದು ಸೃಷ್ಟಿಯಾಗುವ ಸಂದರ್ಭದಲ್ಲಿ ದೈವತದಿಂದ ಆಜ್ಞೆಯೊಂದನ್ನು ಪಡೆದಿದ್ದು, ಅದರ ನಿರ್ದೇಶನದಂತೆ ಕಾಲ–ದೇಶಗಳ ಗಡಿಯನ್ನು ಮೀರಿ ಮುನ್ನುಗ್ಗುವುದೇ ಅದರ ಧ್ಯೇಯವಾಗಿದೆ. ಎಲ್ಲಿಯವರೆಗೆ ಅದನ್ನು ಸೃಷ್ಟಿಸಿದ ದೈವತವೇ ಬಂದು ಅದರ ಚಲನೆಯನ್ನು ನಿಲ್ಲಿಸುವದಿಲ್ಲವೋ, ಅಲ್ಲಿಯವರೆಗೂ ಅದರ ಓಟ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಏಕೆಂದರೆ ಅದರ ನಿಯೋಜಿತ ಕಾರ್ಯವೇ ಇಂತು ಕಾಲಾತೀತವಾದ ಅದರ ರಭಸಕ್ಕೆ ಕಾರಣವಾಗಿದೆ. ಈ ರಾಷ್ಟ್ರೀಯತೆಯು ತನ್ನನ್ನು ಸೃಷ್ಟಿಸಿದ ಶಕ್ತಿಗೆ ವಿಧೇಯವಾಗಿ ಮುನ್ನುಗ್ಗುತ್ತಲೇ ಸಾಗುತ್ತಿರುತ್ತದೆ. ಅದರ ಅಂಧ–ನಿರ್ದಾಕ್ಷಿಣ್ಯಯುತವಾದ ದಾರಿಯಲ್ಲಿ ಸಿಗುವ ಜನ–ಸಮಾಜ–ಸಂಘ–ಸಂಸ್ಥೆಗಳೆಲ್ಲವನ್ನೂ ನೆಲಕ್ಕೊತ್ತಿ ಅವನ್ನು ಮಣ್ಣೊಳಗೆ ಮಣ್ಣಾಗಿಸುತ್ತ ಸಾಗುತ್ತಿರುತ್ತದೆ. ಅದರ ಈ ಪ್ರಕೋಪವನ್ನು ಪುರಾತನೀಕೃತವಾದ ಪಾವಿತ್ರ್ಯತೆಯಾಗಲೀ, ಮಾನವ ನಿರ್ಮಿತ ಸರ್ವೋಚ್ಚ ಅಧಿಕಾರವಾಗಲೀ ಅಥವಾ ಕಾಲದಲ್ಲಿ ಹಿಂಸರಿದು ಹೋದ ಜನಪ್ರಿಯತೆಯಾಗಲೀ ತಡೆಯಲು ಸಾಧ್ಯವೇ ಇಲ್ಲ! ಏಕೆಂದರೆ ಇದರ ಓಟದಲ್ಲಿ ಈ ಯಾವ ಮನವಿಗಳೂ ಸಹ ಕೆಲಸಕ್ಕೆ ಬಾರವು.

ಪ್ರಕೃತಿದತ್ತವಾದ ತನ್ನ ಅದಮ್ಯವೂ–ಅನೈಚ್ಛಿಕವೂ ಆದ ಚಲನೆಯಿಂದ ಪರ್ವತವಾಸಿ ಜನ ಸಮೂಹವನ್ನು ಗುಡಿಸಿ ಹಾಕಿದರೆ ಅದು ಹಿಮಪಾತದ ತಪ್ಪಲ್ಲ; ಹಾಗೆಯೇ ಸಾವಿರಾರು ವರ್ಷಗಳಿಂದ ನೆಲಕಚ್ಚಿ ನಿಂತಿದ್ದ ಓಕ್ ಮರವೊಂದನ್ನು ತನ್ನ ಅಗ್ನಿ ಹಸ್ತದ ಆಘಾತದಿಂದ ಸುಟ್ಟು ಬೂದಿಯಾಗಿಸಿದ್ದಲ್ಲಿ ಅದು ಸಿಡಿಲಿನ ತಪ್ಪಲ್ಲ. ಉಪ್ಪು ನೀರಿನ ವಾರಿಧಿಯೊಳಗೆ ಮುಳುಗಿ ಮರೆಯಾಗಿ ಹೋದ ಪ್ರಾಕ್ತನ ಕಡಲ್ಗಾರರಷ್ಟೇ ಅಲ್ಲದೇ, ಸಾಗರತೆರೆಯ ಉಬ್ಬರವಿಳಿತದ ಮೇಲೆ ಈಗತಾನೇ ಚುಕ್ಕಾಣಿ ಹಿಡಿದು ನಿಂತ ನವ್ಯ ಸಾಹಸಿಗಳು, 'ತಾವು ಸಾಗರದ ಮೇಲೆ ತಮ್ಮ

ಅಧಿಪತ್ಯವನ್ನು ಇನ್ನೇನು ಸಾಧಿಸಿಯೇ ಬಿಟ್ಟೆವು' ಎಂದು, 'ನಾವು ಇಡೀ ಸಾಗರವನ್ನು ಸೂರೆಗೈದು, ಅದರ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸುವೆವು' ಎಂದು ಊಹಿಸುವ ಹುಚ್ಚು ಸಾಹಸಿಗಳೆಲ್ಲರೂ ಒಂದೊಮ್ಮೆ ತಮ್ಮ ಈ ಕಲ್ಪನೆಗೆ ಬೆಲೆ ತೆರಲೇಬೇಕಾಗುತ್ತದೆ. ನಾಳೆ ಬರಲಿರುವ ನವ್ಯತೆಯು ಇಂದಿನ ಖ್ಯಾತಿ, ಜನಪ್ರಿಯತೆ, ಆಡಂಬರತೆಯನ್ನು ಬದಿಗೊತ್ತಲು ಪ್ರಯತ್ನಿಸುವಾಗ ಅದು ಕ್ರಾಂತಿಯತೆಗೆ ಕಾರಣವಾಗುತ್ತದೆ. ಇಂದು 'ವಂದೇ ಮಾತರಂ'ನ ಮೊಳಗಿನೊಂದಿಗೆ, ಹೂಮಾಲೆಗಳ ಸಂಭ್ರಮದೊಂದಿಗೆ ದೊಡ್ಡ–ದೊಡ್ಡ ನಗರಗಳಲ್ಲಿ ಮೆರವಣಿಗೆ ಹೊರಡುವ ಪ್ರಭಾವೀ ವ್ಯಕ್ತಿಯೋರ್ವ ಮುಂದೊಂದು ದಿನ ಯಾರ ಗಣನೆಗೂ ಬಾರದಂತೆ ಮೂಲೆ ಗುಂಪಾಗಬಹುದು, ಅವನ ನುಡಿಗಡಣವೇ ಬರಿದಾಗಿ ಹೋಗಬಹುದು, ಅಥವಾ ಮುಂಬರುವ ಕಾಲದಲ್ಲಿ ಅವನೇ ಕಾಲವಾಗಿ ಹೋಗಬಹುದು. ಹಾಗಾಗಿ ಯಾವುದೇ ವ್ಯಕ್ತಿಗತರೂ ಸಹ ಇದರ ಚಲನೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಒಂದು ಕಾಲಕ್ಕೆ ತಮ್ಮ ವೈಯಕ್ತಿಕ ಪ್ರತಿಭೆಯಿಂದ ಸಮಾಜದಲ್ಲಿ ಮೇಲ್ಮಟ್ಟದ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದ ಬ್ಯಾರಿಸ್ಟರ್‌ಗಳು, ಸಂಪಾದಕರುಗಳು, ಪ್ರಾಧ್ಯಾಪಕರುಗಳು ಬರಲಿರುವ ಬದಲಾವಣೆಯ ಕ್ರಾಂತಿಗೆದುರಾಗಿ, "ನೀನು ನನ್ನ ಸೇವಕ, ನನ್ನ ಸೇವೆ ಮಾಡುವುದೇ ನಿನ್ನಾದ್ಯ ಕರ್ತವ್ಯ"ವೆಂದೂ, ಚೋಸ್‌ಗೆ ಎದುರಾಗಿ, "ನಾನು ನನ್ನ ವೈಯಕ್ತಿಕ ಕಾರ್ಯಗಳಲ್ಲಿ ನಿನ್ನನ್ನು ಸಹಾಯಕ ದ್ರವ್ಯವಾಗಿ ಬಳಸಿಕೊಳ್ಳುವೆ."ಎಂದು ದರ್ಪದ ನುಡಿಗಳನ್ನಾಡಿ, ಕಾಲ ಪ್ರವಾಹದಲ್ಲಿ ಮುಂದೊಮ್ಮೆ ಯಾರ ಲಕ್ಷ್ಯಕ್ಕೂ ಬಾರದ ಸಮಾಜದಿಂದ ಕಡೆಗಣಿತ ಜನಾಂಗವಾಗಿ ನಿಶ್ಶೇಷವಾಗಿ ಹೋಗುತ್ತಾರೆ. ಇಂದಿನ ಯುಗದಲ್ಲಿ ಉಗ್ರವಾದಿಗಳೆಂದು, ಬರಲಿರುವ ಹೊಸ ಯುಗದ ಮುಂದಾಳತ್ವದ ನಾಯಕರೆಂದು, ರಾಷ್ಟ್ರೀಯತೆಯ ಬೋಧಕರೆಂದು, ಜನಪ್ರಿಯ ಭಾವನೆಯ ಸಾಕಾರರು ಎಂದು ಕರೆಸಿಕೊಳ್ಳುತ್ತಿರುವ ವ್ಯಕ್ತಿಗತರು ಮುಂದೊಮ್ಮೆ ತಮ್ಮನ್ನು ಹಿಂದೆ ಬಿಟ್ಟು ಮುಂದೆ ಸಾಗುತ್ತಿರುವ ನವ್ಯ ಯುಗದಲ್ಲಿ ವೈಭವದ ಮಹಾತ್ವಾಕಾಂಕ್ಷೆಯುಳ್ಳ ಹಾಗೂ ಅದನ್ನು ಸಾಕ್ಷಾತ್ಕರಿಸಿಕೊಳ್ಳದ ಜೀವಂತ ಸ್ಮಾರಕವಾಗಿ ಬದುಕದೂಡುತ್ತಾರೆ. ಇತಿಹಾಸದಲ್ಲಿ ಚಿರಸ್ಥಾಯಿಯಾದ ನಾಯಕರುಗಳು ತಮ್ಮ ನಿರರ್ಗಳವಾದ ಭಾಷಣ ಮತ್ತು ಹರಿತ ಲೇಖನಿಯಿಂದ ಸಮಾಜದಲ್ಲಿ ಕ್ರಾಂತಿಯನ್ನೆಬ್ಬಿಸಿ ಹೊಸ ಯುಗದ ನಿರ್ಮಾಣಕ್ಕೆ ಕಾರಣರಾಗಿ ಜನದ ಮನೆ–ಮನಗಳಲ್ಲಿ ತಮ್ಮದೇ ಆದ ಪ್ರಭಾವವನ್ನು ಬೀರಿದ್ದಾರೆ. ನಾವು ನಮ್ಮ ಆಯುಷ್ಯ ಮತ್ತು ಕರ್ಮವನ್ನು ಮುಗಿಸಿ ಹೋಗುವ ಮೊದಲು ಒಂದೊಮ್ಮೆ ತಮ್ಮ ತ್ಯಾಗ–

ಬಲಿದಾನಗಳ ಮೂಲಕ ವೈಯಕ್ತಿಕವಾಗಿ ದುಃಖವನ್ನನುಭವಿಸಿದರೂ ಸಹ ದೇಶದ ಪರಿವರ್ತನೆಯಲ್ಲಿ ತಮ್ಮದೇ ಆದ ಅಮೋಘ ಸೇವೆಯನ್ನು ನೀಡಿದ ಅಂತಹ ಚಿರಂತನ ನಾಯಕರನ್ನು ಧೇನಿಸಲೇಬೇಕು. ಏಕೆಂದರೆ ಸ್ವತಃ ದೈವತವೇ ವ್ಯಕ್ತಿಗತರ ಮೂಲಕ ರಾಷ್ಟ್ರದ ಅಭ್ಯುದಯ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ ಎಂಬ ಹಸುಳೆ ನಂಬಿಕೆಯೊಂದಿಗೆ, ನಮ್ಮ ರಾಷ್ಟ್ರದ ಮಹಾತ್ವಾಕಾಂಕ್ಷೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಅಂತಹ ದೈವೀ ಪುರುಷರನ್ನು ನಾವು ಸದಾ ನೆನೆಯಲೇಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/668–69**

## ಸ್ವರಾಜ್

ನಾವು ಸ್ವರಾಜ್ಯದ ಬಗ್ಗೆ ಮಾತುನಾಡುತ್ತಿದ್ದೇವೆ ಎಂದರೆ, ಅದು ಯಾವುದೋ ಒಂದು ಸ್ಥಾನಿಕ ಸರ್ಕಾರದಿಂದ ಮನ್ನಣೆ ಪಡೆದ ಅದರ ಸ್ವತಂತ್ರಯುತವಾದ ರಾಷ್ಟ್ರೀಯ ಜೀವನದ ತತ್ವವನ್ನು ಬೋಧಿಸುತ್ತಿರುವೆವು ಎಂದರ್ಥ. ಸ್ವರಾಜ್ ಎಂಬುದು ಹೊಸ ಪದವೇನಲ್ಲ ಅದು ತೀರಾ ಪುರಾನತ ಪದವೇ ಆಗಿದೆ. ಇದು ನಮ್ಮ ಸಾಹಿತ್ಯ ಮತ್ತು ನಾಗರೀಕತೆಯಷ್ಟೇ ಹಳೆಯ ಪದವಾಗಿದೆ. ನಮ್ಮ ಪ್ರಾಕ್ತನ ಸಾಹಿತ್ಯದಲ್ಲಿ ಸ್ವರಾಜ್ ಎಂಬ ಪದವು ಮುಕ್ತಿಶ್ರೀಯನ್ನು ಪಡೆಯುವ ಆತ್ಮದ ಆಧ್ಯಾತ್ಮಿಕ ಮೂಲ ನೆಲೆಯ ಸ್ಥಿತಿಯನ್ನು ಸಂಕೇತಿಸುತ್ತಿತ್ತು. ಆತ್ಮವೊಂದು ಭೌತಿಕ ಜಗತ್ತಿನಿಂದ ಪಾರಾಗಿ, ಮರ್ತ್ಯದ ಎಲ್ಲಾ ಜಡ ಬಂಧನಗಳಿಂದ ಸ್ವತಂತ್ರವಾಗಿ ತನ್ನ ಮೂಲ ನೆಲೆಯಾದ ಚ್ಯುತಿಯಿರದ ಹಗಲಿನ ಆನಂದದ ನೆಲೆಯಲ್ಲಿ ಖಾಯಂ ನಿವಾಸಿಯಾಗಿ ತಲುಪಿದಾಗ ಮಾತ್ರ ಆ ಆತ್ಮವು ಸ್ವರಾಜ್ಯವನ್ನು ಪಡೆಯಿತು ಎಂದು ನಿರೂಪಿಸಲಾಗಿತ್ತು. ನಮ್ಮ ಪ್ರಾಚೀನ ತತ್ವ ಶಾಸ್ತ್ರದ ಪ್ರಕಾರ "ಸರ್ವಂ ಪರವಶಂ ಸರ್ವಂ ದುಃಖಂ ಆತ್ಮವಶಂ ಸುಖಂ" ಎಂದರೆ, "ಇತರರ ಮೇಲೆ ಅವಲಂಬನೆಯಾಗಿರುವುದೇ ದುಃಖ, ನಮ್ಮ ಮೇಲೆ ನಾವು ಸ್ವಾವಲಂಬಿತರಾಗುವುದೇ ಆನಂದ; ಇದುವೇ ಋತಂಬರ ಸತ್ಯ. ಮಾಯೆಯ ಬಂಧನದಿಂದ ಮುಕ್ತರಾಗಲು ನಮಗಿರುವುದು ಇದೊಂದೇ ದಾರಿ. ಇದುವೇ ನಮ್ಮ ಪುರಾತನ ಧರ್ಮದ ಆದರ್ಶ. ಇದುವೇ ಮಾನವನ ಅಸ್ತಿತ್ವಕ್ಕಿರುವ, ಮಾನವನ ಜೀವಕ್ಕಿರುವ ಪರಮ ದ್ರವ್ಯ."

ಈಗ ಸ್ವರಾಜ್ ಪದವನ್ನು ರಾಷ್ಟ್ರೀಯತೆಗೆ ಹೋಲಿಸಿ ಅನ್ವಯಿಸೋಣ. ರಾಷ್ಟ್ರದ ಆತ್ಮವು ಸದಾ ಸುಧಾರಿತವಾದ ಜನ ಜೀವನವನ್ನೇ ಬಯಸುತ್ತಿರುತ್ತದೆ. ಈ

ರಾಷ್ಟ್ರವೇ ನಮ್ಮ ಸ್ವರಾಜ್ಯ. ಒಂದು ರಾಷ್ಟ್ರವೇ ಆ ರಾಷ್ಟ್ರದ ಆತ್ಮವನ್ನು ಪ್ರತಿನಿಧಿಸುತ್ತದೆ. ಅದು ರಾಷ್ಟ್ರದ ಮೂವತ್ತು ಕೋಟಿ ಆತ್ಮಗಳ ಉನ್ನತಿಯನ್ನು ಸಂಕೇತಿಸುತ್ತದೆ. ಒಂದು ರಾಷ್ಟ್ರವು ಬೇರೊಂದರ ಮೇಲೆ ಅವಲಂಬಿತವಾದಲ್ಲಿ ಅದು ಕ್ರಮೇಣ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಾ ಸಾಗುತ್ತದೆ. ತನ್ನ ಪೌರುಷವನ್ನು ಸಂಕುಚಿತಗೊಳಿಸುತ್ತಾ ಸಾಗುತ್ತದೆ. ಕೊನೆಗೆ ಅದು ತುಂಡು–ತುಂಡಾಗಿ ದುರ್ಬಲ ಮತ್ತು ಅಸಹಾಯಕವಾಗಿ ಅಂತ್ಯಗೊಳ್ಳುತ್ತದೆ. ಇದುವೇ ವಿಶ್ವದ ಇತಿಹಾಸವು ನಮಗೆ ಕಲಿಸಿದ ಪಾಠವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/840–41**

## ಸ್ವರಾಜ್ಯದ ಸ್ವಾತಂತ್ರ್ಯ

ಸ್ವರಾಜ್ ಎಂಬುದು ರಾಷ್ಟ್ರದ ಜನತೆಗೆ ದೈವದತ್ತವಾಗಿ ಬಂದ ವರದಾನವಾಗಿದ್ದು, ಇದು ಕೇವಲ ರಾಜಕೀಯ ಸಾತಂತ್ರ್ಯವಲ್ಲ, ಬದಲಾಗಿ ಸಂಪೂರ್ಣವೂ–ವೈಶಾಲ್ಯಯುತವೂ ಆದ ಪೌರರ ವೈಯಕ್ತಿಕ ಸ್ವಾತಂತ್ರ್ಯ, ಹಲವು ವ್ಯಕ್ತಿಗತರಿಂದ ರೂಪುಗೊಂಡ ಒಂದು ಸಮುದಾಯದ ಸ್ವಾತಂತ್ರ್ಯ, ಹಾಗೂ ಅಪಾರ ಸಂಖ್ಯೆಯ ಸಮುದಾಯಗಳಿಂದ ಸಮೃದ್ಧವಾದ ಒಂದಿಡೀ ರಾಷ್ಟ್ರದ ಸ್ವಾತಂತ್ರ್ಯವಾಗಿದೆ; ಈ ಸ್ವರಾಜ್ ಸ್ವಾತಂತ್ರ್ಯದಲ್ಲಿ ಆಧ್ಯಾತ್ಮಿಕ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸ್ವಾತಂತ್ರ್ಯವೆಂಬ ಮೂರು ವಿಧ. ಅವುಗಳಲ್ಲಿ ಪ್ರಥಮವಾದ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನಮ್ಮ ಪ್ರಾಕ್ತನ ಋಷಿಗಳು ಅದಾಗಲೇ ಘೋಷಿಸಿದ್ದಾರೆ; ಇನ್ನು ಎರಡನೆಯದಾದ ಸಾಮಾಜಿಕ ಸ್ವಾತಂತ್ರ್ಯವು ಬುದ್ಧ, ಚೈತನ್ಯ, ನಾನಕ್, ಕಬೀರ್ ಹಾಗೂ ಮಹಾರಾಷ್ಟ್ರದ ಸಂತರ ದಿವ್ಯ ಸಂದೇಶಗಳ ಮೂಲಕ ನಮಗೆ ಲಭಿಸಿತ್ತು; ಕೊನೆಯದಾದ ರಾಜಕೀಯ ಸ್ವಾತಂತ್ರ್ಯವು ತ್ರಿವಿಧ ಮಂತ್ರಗಳಲ್ಲಿ ಕೊನೆಯದಾಗಿದ್ದು, ಈ ರಾಜಕೀಯ ಸ್ವಾತಂತ್ರ್ಯವು ಲಭಿಸದಿದ್ದಲ್ಲಿ ಮಾನವನ ಆತ್ಮಕ್ಕೆ ಪೂರ್ಣತ್ವವು ಸಿದ್ಧಿಸುವದಿಲ್ಲ. ಕೆಲವೇ ಕೆಲವು ಸಮರ್ಥಯುತ ಆತ್ಮಗಳು ಮಾತ್ರ ತಮ್ಮ ಸ್ತರವನ್ನು ಮೀರಿ ಮೇಲೇರುತ್ತವೆ. ಆದರೆ ಮರ್ತ್ಯ ಮಾನವನು ಈ ಸ್ತರದ ಸೆರೆಯಾಳಾಗಿದ್ದು, ಆ ಸ್ತರವು ಗುಲಾಮಗಿರಿ ಮತ್ತು ಕೀಳರಿಮೆಯ ಅಂಶವನ್ನೇ ಪ್ರತಿಪಾದಿಸುತ್ತಿದ್ದರೆ ಅದರ ನಿವಾಸಿಯಾದ ಪೌರರೂ ಸಹ ಆ ಗುಲಾಮಗಿರಿಯ ಹಂತದಲ್ಲೇ ಬದುಕ ಸವೆಸುತ್ತಾರೆ. ಯಾವಾಗ ಮಾನವನು ಆತ್ಮವು ಗುಲಾಮಗಿರಿ ಮತ್ತು ಕೀಳರಿಮೆಯ ಭಾವನೆಗಳಿಂದ ವಿಮುಕ್ತವಾಗಿ ವಿಶಾಲವೂ–ಮುಕ್ತವೂ–ಪರಮೋದಾರಿಯೂ ಆದ

ಮಾರ್ಗದಲ್ಲಿ ಸಾಗುವುದೋ ಆಗ ಮಾತ್ರ ಸಾಮಾಜಿಕ ಸ್ವಾತಂತ್ರ್ಯವು ಮರ್ತ್ಯದಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಪಡಿಸುತ್ತದೆ. ಸಾಮಾಜಿಕ ಸ್ವಾತಂತ್ರ್ಯವೆಂಬುದು ಸಮಾಜದಲ್ಲಿನ ಯಾಂತ್ರಿಕ ಜೀವನದ ಫಲವಲ್ಲ. ಬದಲಾಗಿ ಮಾನವನ ಬುದ್ಧಿಮತ್ತೆ ಮತ್ತು ಮಾನವಾತ್ಮದ ಉದಾತ್ತ ಗುಣಗಳ ಪ್ರತಿಫಲವಾಗಿದೆ. ಸದಾ ಕೆಳಹಂತದ ಕೀಳರಿಮೆಯ ಸಾಧನೆಯಲ್ಲಿಯೇ ತೊಡಗಿರುವ ವ್ಯಕ್ತಿಯು ತನ್ನ ಸಹವರ್ತಿಗಳೊಂದಿಗೆ ಎಂದಿಗೂ ಸಹೋದರತ್ವವನ್ನು, ಭ್ರಾತೃತ್ವ ಭಾವನೆಯನ್ನು ತಳೆಯಲು ಸಾಧ್ಯವಿಲ್ಲ. ಏಕೆಂದರೆ ಅವನು ಸದಾ ತನ್ನ ಕೀಳು ಯೋಜನೆಗಳಿಂದಲೇ ಮೇಲೇರಲೆಂದು ಬಯಸುತ್ತಿರುತ್ತಾನೆ. ಒಂದು ವೇಳೆ ಜಾತಿ ಅಥವಾ ಸಂಪತ್ತು ಅವನನ್ನು ಉನ್ನತಿಯೆಡೆಗೇರಿಸಿದ್ದಲ್ಲಿ, ಅವನು ಅದೇ ಜಾತಿ–ಸಂಪತ್ತುಗಳನ್ನೇ ಒಪ್ಪಿಕೊಳ್ಳುತ್ತಾನೆ. ತನ್ನೆದೆಗೆ ಅಪ್ಪಿಕೊಳ್ಳುತ್ತಾನೆ. ರಾಷ್ಟ್ರದಲ್ಲಿ ರಾಜಕೀಯ ಸ್ವಾತಂತ್ರ್ಯವಿಲ್ಲದಿದ್ದರೆ ವ್ಯಕ್ತಿ ಸಮುದಾಯಕ್ಕೆ ಯಾವುದೇ ಮಹತ್ತರವಾದ ಗುರಿಯಾಗಲೀ–ಉದ್ದೇಶವಾಗಲೀ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ವ್ಯಕ್ತಿಯು ಜಾತಿ, ಸಂಪತ್ತು ಮತ್ತು ವರ್ಗ ಶ್ರೇಷ್ಠತೆಗಳೆಂಬ ಕೀಳು ಮಹಾತ್ವಾಕಾಂಕ್ಷೆಗಳಿಂದ ತುಂಬಿರುವ ಸಮಾಜದ ಅತಿ ಇಕ್ಕಟ್ಟಾದ ಬಿಲದೊಳಗೆ ಸಿಲುಕಿಕೊಳ್ಳುತ್ತಾನೆ. ಅದೇ ರಾಜಕೀಯ ಸ್ವಾತಂತ್ರ್ಯವು ಅವನೆದುರಿಗೆ ವಿಶಾಲವಾದ ದಿಗಂತವನ್ನು ತೆರೆದಿಟ್ಟಲ್ಲಿ ಅವನು ಕೀಳು ಮಹಾತ್ವಾಕಾಂಕ್ಷೆಗಳನ್ನು ಮರೆತುಬಿಡುತ್ತಾನೆ, ಮೇಲಾಗಿ ಓರ್ವ ಗುಲಾಮನು ಎಂದಿಗೂ ಉದಾತ್ತ–ವಿಶಾಲ ಮನಸ್ಸಿನವನಾಗಿರಲು ಸಾಧ್ಯವಿಲ್ಲ. ಏಕೆಂದರೆ, ಅವನು ಈಗಾಗಲೇ ಗುಲಾಮಗಿರಿಯಲ್ಲಿ ತೊಳಲುತ್ತಿದ್ದು, ಅವನು ನೀಡುವ ಸೇವೆಯೇ ಒಂದೊಮ್ಮೆ ಅವನ ಅವನತಿಗೆ ಕಾರಣವಾಗುತ್ತದೆ. ಹೀಗೆ ಮಾನವನ ಅಧೋಗತಿಗೆ ಕಾರಣವಾದ ಸಮಾಜವು ಸ್ವತಂತ್ರವಾಗಬಹುದೆಂದು ಯೋಚಿಸುವುದೇ ನಿಷ್ಫಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/874–76**

**ವಿಶ್ವ ನಿಯಾಮಕ ಕಾರ್ಯದಲ್ಲಿ ಏಷ್ಯಾದ ಪಾತ್ರ**

ಹಿಂದೂಗಳ ಪ್ರತಿಭೆಯು ಕೇವಲ ಶುದ್ಧಕ್ರಿಯೆಗಾಗಿ ಮಾತ್ರವಲ್ಲದೇ, ಆ ಕ್ರಿಯೆಯನ್ನು ಸಾಧಿಸಲು ಬೇಕಿರುವ ಆಲೋಚನೆ ಮತ್ತು ಆಕಾಂಕ್ಷೆಗಳ ಕುರಿತು ಕಾರ್ಯನಿರ್ವಹಿಸುತ್ತಿರುತ್ತದೆ. ಭೌತಿಕ ದೇಹವು ಆಂತರ್ಯದ ಆಜ್ಞೆಗನುಸಾರವಾಗಿ ಜೈವಿಕ ಕ್ರಿಯೆಗಳನ್ನು ನಡೆಸುತ್ತಿದ್ದರೆ, ಆ ದೇಹವನ್ನು ನಿಯಂತ್ರಿಸುತ್ತಿರುವ ಆತ್ಮವು ಆ

ದೇಹಕ್ಕೆ ಬೇಕಿರುವ ಪೂರ್ವನಿಯೋಜಿತ ಸೂಚನೆಗಳನ್ನು ರಚಿಸುತ್ತಿರುತ್ತದೆ. ಹಿಂದೂಗಳ ಜೀವನಕ್ರಿಯೆಯು ಸದಾ ಅಂತರ್ಮುಖಿಯಾಗಿಯೇ ಇರುತ್ತದೆ. ಹಾಗೂ ಅವನ ಬಾಹ್ಯ ಜೀವನವು ಆತ್ಮದ ಆಂತರ್ಯದ ಸೂಚನೆಗಳನ್ನು ಪಾಲಿಸುತ್ತಲೇ ತನ್ನ ಗುರಿಯೆಡೆಗೆ ಮುನ್ನುಗ್ಗುತ್ತಿರುತ್ತದೆ. ಈ ದೇಹ–ಆತ್ಮಗಳ ಮಧ್ಯೆ ಸಾಗುತ್ತಿರುವ ಕಾರ್ಯ–ಕಾರಣಗಳ ನಿಕಟವಾದ ಸಂಬಂಧವೇ ಅವರ ಶಾಶ್ವತವಾದ ಚೈತನ್ಯದ ರಹಸ್ಯವಾಗಿದೆ. ಇನ್ನು ಭಾರತೀಯರ ಬಾಹ್ಯ ಜೀವನವು ವಿದೇಶಿಯರಂತೆ ಉನ್ನತಿ–ಅವನತಿಗಳ ಪರಿಭ್ರಮಣದಲ್ಲೇ ಸುತ್ತುತ್ತಿದ್ದರೂ ಸಹ, ಇತರ ದೇಶ ನಿವಾಸಿಗಳ ಬಾಹ್ಯ ಜೀವನದ ಶ್ರೇಷ್ಠತೆ–ಭ್ರಷ್ಠತೆಗಳಿಗೆ ಒಂದು ಮಿತಿಯಿದೆ. ಆದರೆ ಭಾರತೀಯರ ಬಾಹ್ಯ ಜೀವನವು ಈ ಎಲ್ಲ ಗಡಿ ರೇಖೆಗಳನ್ನೂ ಮೀರಿ ಸೀಮಾತಿತವಾಗಿ ವ್ಯಾಪಿಸಿದೆ. ಉದಾಹರಣೆಗೆ ಸಾವು ಬಂದು ಅಂತಿಮ ಸತ್ಯದಂತೆ ತಮ್ಮೆದುರು ನಿಂತಿರಲು, ಹಿಂದೂಗಳು ಆ ಮೃತ್ಯುವನ್ನು ಕಂಡು ಹೆದರುವದಿಲ್ಲ. ಬದಲಾಗಿ ಅವರು ಕಣ್ಣೆದುರು ನಿಂತ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ, ಅದನ್ನು ಅಪ್ಪಿಕೊಳ್ಳುತ್ತಾರೆ. ಚಿರಂತನವಾದ ಅಮೃತ ಧಾಮದೆಡೆಗೆ ಪಯಣಿಸುತ್ತಾರೆ, ಅಲ್ಲಿನ ಚೈತನ್ಯದ ಚಿಲುಮೆಯೊಳಗೆ ಧುಮುಕಿ ತಮ್ಮ ಆತ್ಮದ ನೂತನ ಅಸ್ತಿತ್ವಕ್ಕಾಗಿ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುತ್ತಾರೆ. ಅಂತೆಯೇ ತಮ್ಮ ವೈಯಕ್ತಿಕ ಜೀವನದ ಜೊತೆ ಜೊತೆಗೆ ರಾಷ್ಟ್ರೀಯ ಜೀವನದ ಅಮೃತವನ್ನು ಸಹ ಭಾರತೀಯರು ಮಾತ್ರ ಶೋಧಿಸಿದ್ದಾರೆ. ತಾಯಿ ಭಾರತಿಯು ಸಹಸ್ರಾರು ವರ್ಷಗಳಿಂದ ಈ ಅಮೃತದ ಭಾಂಡಾರವನ್ನು ತನ್ನೊಳಗೆ ಬೈತಿಟ್ಟುಕೊಂಡು, ಮುಂದೊಮ್ಮೆ ಇಡೀ ಪ್ರಪಂಚವು ಆ ಅಮೃತವನ್ನು ಪಡೆಯಲು ಸಿದ್ಧವಾಗುವವರೆಗೂ ಜೋಪಾನವಾಗಿ ರಕ್ಷಿಸಿಕೊಂಡು ಬಂದಿದ್ದಾಳೆ. ಆದರೆ ಈಗ ಇಡೀ ಪ್ರಪಂಚವು ಈ ಅಮೃತ ಸಂಚಯನದ ಸವಿಯುವಿಕೆಗಾಗಿ ಸಿದ್ಧವಾಗಿದೆ. ಹಾಗಾಗಿ ಸಾವಿನ ಅಂಚಿನಲ್ಲಿರುವ ಹಾಗೂ ಅವನತಿಯ ಮಾರ್ಗದಲ್ಲಿರುವ ಇತರ ರಾಷ್ಟ್ರಗಳಿಗೆ ಅಮೃತವನ್ನು ಹಂಚುವ ಕಾಲ ಸನ್ನಿಹಿತವಾಗಿದೆ. ಯುರೋಪಿನ ಜನಾಂಗವು ಭೌತಿಕ ಜೀವನವನ್ನು ಅದಾಗಲೇ ಅದರ ಔನತ್ಯದ ಅಂಚಿಗೆ ಕೊಂಡೊಯ್ದಿದ್ದಾರೆ. ಶಾರೀರಿಕವಾದ ನ್ಯೂನ್ಯತೆಗಳನ್ನು ಸರಿದೂಗಿಸುವ ವಿಜ್ಞಾನವನ್ನೇನೋ ಅವರು ಶೋಧಿಸಿದ್ದಾರೆ. ಆದರೆ ತಾವು ಶೋಧಿಸಿರುವ ವಿಜ್ಞಾನಕ್ಕೂ ಸಹ ಗುಣಪಡಿಸಲಾಗದಂತಹ ಘೋರ ರೋಗಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ತನ್ನ ಪ್ರಾಯೋಗಿಕ ಬುದ್ಧಿಮತ್ತೆಯಿಂದ ಇಂಗ್ಲೆಂಡ್, ತನ್ನ ತಾರ್ಕಿಕವಾದ ಜ್ಞಾನದಿಂದ ಫ್ರಾನ್ಸ್, ತನ್ನ ಊಹಾತ್ಮಕ ಪ್ರತಿಭೆಯಿಂದ ರಷ್ಯಾ ಹಾಗೂ

ತನ್ನ ವಾಣಿಜ್ಯ ಶಕ್ತಿಯಿಂದ ಅಮೇರಿಕಾವು ಇಡೀ ಮಾನವ ಸಮುದಾಯದ ಅಭಿವೃದ್ಧಿಗಾಗಿ ಏನೆಲ್ಲಾ ಮಾಡಬಹುದಾಗಿತ್ತೋ ಅದನ್ನಾಗಲೇ ಮಾಡಿಯಾಗಿದೆ. ಆದರೆ ಈ ಪ್ರತಿಯೊಂದೂ ರಾಷ್ಟ್ರಗಳು ತನ್ನಿಂದ ಸಾಧ್ಯವಾದ ಸರ್ವವನ್ನೂ ಪೂರೈಸಿ ತನಗಿದ್ದ ವಿಶಿಷ್ಟ ಸಾಮರ್ಥ್ಯದ ಮಿತಿಯನ್ನು ಅದಾಗಲೇ ತಲುಪಿಬಿಟ್ಟಿವೆ. ಇದಕ್ಕೂ ಮೀರಿದ ಅದಾವುದೋ ಶಕ್ತಿಯನ್ನು ಪೂರೈಸಲು ಯುರೋಪ್ ಸರ್ವಥಾ ಹೆಣಗಾಡುತ್ತಿದೆ. ಇಂತಹ ಸಂದರ್ಭದಲ್ಲಿ ಏಷ್ಯಾದ ಆಂತರ್ಯವು ಜಾಗೃತಗೊಂಡಿದ್ದು, ಪ್ರಸ್ತುತ ಯುಗದಲ್ಲಿ ಇಡೀ ಜಗಕ್ಕೆ ಅವಳ (ಏಷ್ಯಾದ) ಅಗತ್ಯವಿದೆ. ಅವಳು ಪ್ರಪಂಚದ ಮನಸ್ಸಿನ ಶಾಂತಿಯನ್ನು ಕಾಪಾಡುವ ದೇವಿ, ಯುರೋಪ್ ಉತ್ಪಾದಿಸುತ್ತಿರುವ ಅಸಂಖ್ಯ ರೋಗಗಳನ್ನು ಗುಣಪಡಿಸುವ ವೈದ್ಯೆ, ಅವಳು ಯುಗ ಯುಗಗಳಿಂದಲೂ ಪ್ರಜ್ಞಾರೋಹಣದಲ್ಲಿ ಸಾಗುತ್ತ ಬಂದು ಋತವು ನಿಯಮಿಸಿದ ಒಂದು ಋತುವಿನವರೆಗೆ ಇಡೀ ಜಗತ್ತನ್ನು ಆಳಲೆಂದು ನಿಯೋಜಿಸಲ್ಪಟ್ಟಿದ್ದಾಳೆ. ಹಾಗಾಗಿ ಅವಳಿಂದ ಮಾತ್ರ ಪ್ರಬೋಧಿತವಾಗಲಿರುವ ರಹಸ್ಯಗಳನ್ನು ಕಲಿಯಲು ಜಗತ್ತು ಅವಳ ಪಾದದಡಿ ಕುಳಿತುಕೊಳ್ಳಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1019–20**

## ಸ್ವರಾಜ್ಯಕ್ಕೆ ಅತ್ಯಗತ್ಯವಾಗಿರುವ ವಸ್ತುಸ್ಥಿತಿ

ಪ್ರಸ್ತುತ ಯುಗಮಾನದಲ್ಲಿ ಸ್ವರಾಜ್ಯದ ಪರಿಕಲ್ಪನೆಗೆ ಅತ್ಯಗತ್ಯವಾಗಿರುವ ವಸ್ತುಸ್ಥಿತಿಯೆಂದರೆ, ನಾವು ಮೊದಲು ಜನ ಸಾಮಾನ್ಯರ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಬೇಕಿದೆ. ಇತಿಹಾಸದ ಕಳೆದುಹೋದ ಒಂದು ಕಾಲ ಘಟ್ಟದಲ್ಲಿ ಕೇವಲ ಕೆಲವಾರು ವರ್ಗಗಳು ಉದಾಹರಣೆಗೆ ಆಳುವ ವರ್ಗ, ಕಲಿತ ವರ್ಗ, ಹೆಚ್ಚೆಂದರೆ ವ್ಯಾಪಾರಿ ವರ್ಗಗಳು ಮಾತ್ರ ಎಚ್ಚೆತ್ತುಕೊಂಡಿದ್ದರೆ ಸಾಕು ಎನ್ನುವ ಕಾಲವಿತ್ತು, ಆದರೆ ಆಧುನಿಕ ರಾಷ್ಟ್ರದ ಸಂಘಟನೆಯು ಇಡೀ ಮಾನವ ಸಮೂಹದ ರಾಜಕೀಯ ಪ್ರಜ್ಞೆಯ ಜಾಗೃತಿಯನ್ನು ಅವಲಂಬಿಸಿದೆ. ಇದು ಲಕ್ಷಾಂತರ ಜನರು ವ್ಯವಹರಿಸುವ ಪ್ರಜಾ ಪ್ರಭುತ್ವದ ಯುಗ. ಯಾವುದೇ ಒಂದು ರಾಷ್ಟ್ರವು ಈ ಆಧುನಿಕ ದ್ವಂದ್ವದಲ್ಲಿ ನೆಲೆಯೂರಬೇಕೆಂದು ಬಯಸಿದರೆ, ಅಥವಾ ಅದು ಸ್ವರಾಜ್ಯವನ್ನು ವ್ಯವಸ್ಥಿತ ರೂಪದಲ್ಲಿ ಸ್ಥಾಪಿಸಬೇಕಾದರೆ, ಮೊದಲು ಆ ದೇಶವು ತನ್ನ ದೇಶ ನಿವಾಸಿಗಳನ್ನು ಜಾಗೃತರನ್ನಾಗಿಸಬೇಕು ಮತ್ತು ಅವರಲ್ಲಿ ರಾಷ್ಟ್ರೀಯ

ಪ್ರಜ್ಞೆಯನ್ನು ತುಂಬಬೇಕು. ಇದರಿಂದಾಗಿ ಪ್ರತಿಯೋರ್ವ ದೇಶ ನಿವಾಸಿಯಲ್ಲೂ ತಾನು ಬದುಕುತ್ತಿರುವ ರಾಷ್ಟ್ರದ ಅಭ್ಯುದಯಕ್ಕಾಗಿ ತಾನೂ ದುಡಿಯಬೇಕು ಎಂಬ ಮನೋಭಾವವು ಬೆಳೆಯುತ್ತದೆ. ಇದರಿಂದಾಗಿ ತನ್ನ ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವನು ಭಾಗವಹಿಸುವಂತಾಗುತ್ತದೆ. ಭಾರತದಂತದ ದೇಶಗಳಲ್ಲಿ ಹಳ್ಳಿಯೇ ರಾಷ್ಟ್ರದ ಕೇಂದ್ರವಾಗಿರುವಾಗ ನಾವು ಮೊದಲು ಹಳ್ಳಿಯ ಒಗ್ಗಟ್ಟಿನ ಜೀವನವನ್ನು ರಾಷ್ಟ್ರದ ಏಳಿಗೆಗಾಗಿ ಸಂಘಟಿಸಬೇಕು. ಇಲ್ಲದಿದ್ದರೆ ನಮಗೆ ವಿದ್ಯಾವಂತರು ಮತ್ತು ಜನ ಸಾಮಾನ್ಯರ ನಡುವೆ ಉಂಟಾಗಿರುವ ಭಾರಿ ಕಂದಕವನ್ನು ತುಂಬಿಸಿ ಅವರಿಬ್ಬರ ಮಧ್ಯೆ ಸೇತುವೆ ನಿರ್ಮಿಸಲು ಸಾಧ್ಯವಾಗುವದಿಲ್ಲ. ಒಂದೊಮ್ಮೆ ಈ ಎರಡೂ ಬಣಗಳು ಒಂದಾಗಿದ್ದೇ ಆದಲ್ಲಿ ಅವರು ಏಕತಾ ಮನೋಭಾವನೆಯನ್ನು ತಾಳುತ್ತಾರೆ. ಆಗ ಗ್ರಾಮ ಸ್ವರಾಜ್, ಹಳ್ಳಿಗಳ ಸಮುದಾಯಗಳಲ್ಲಿ ಸ್ವರಾಜ್, ಜಿಲ್ಲೆಗಳಲ್ಲಿ ಸ್ವರಾಜ್, ರಾಷ್ಟ್ರದಲ್ಲಿ ಸ್ವರಾಜ್ ಎಂಬ ಮನೋಭಾವನೆಯು ಜನ ಸಾಮಾನ್ಯರಲ್ಲಿ ಮೂಡುತ್ತದೆ. ಇದು ಒಮ್ಮೆಲೇ ಆಗುವ ಕಾರ್ಯವಲ್ಲ. ಗ್ರಾಮ ನಿವಾಸಿಗಳು ಒಂದೇ ನೆಗೆತಕ್ಕೆ ರಾಷ್ಟ್ರ ಸ್ವರಾಜ್‌ದ ಪರಿಕಲ್ಪನೆಯೆಡೆಗೆ ಏರಲು ಸಾಧ್ಯವಿಲ್ಲ. ಹಾಗಾಗಿ ಪೂರ್ವಭಾವಿಯಾಗಿ ಹಳ್ಳಿ–ಪಳ್ಳಿಗಳಲ್ಲಿ ಗ್ರಾಮ ಸಮಿತಿಯನ್ನು ಸಂಘಟಿಸಿ ಅಲ್ಲಿನ ಜನ ಸಾಮಾನ್ಯರಲ್ಲಿ ಸ್ವರಾಜ್‌ದ ಗ್ರಹಿಕೆಯನ್ನು ಪ್ರಚುರಪಡಿಸಬೇಕು. ಇದುವೇ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1049**

## ಪಕ್ಷ ಮತ್ತು ರಾಷ್ಟ್ರ

ಯಾವ ರಾಷ್ಟ್ರಗಳು ತಮ್ಮ ಇತರ ಎಲ್ಲಾ ವಸ್ತುಸ್ಥಿತಿಗಳಿಗಿಂತಲೂ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆಯನ್ನು ತೆರುತ್ತದೆಯೋ, ಅಂತಹ ರಾಷ್ಟ್ರಗಳಿಗೆ ಪಕ್ಷದ ಉಪಯೋಗವು ಒಂದು ರಹಸ್ಯವೇ ಆಗಿರುತ್ತದೆ. ಮುಕ್ತ ಮನಸ್ಸು ಮತ್ತು ಮುಕ್ತ ಹವ್ಯಾಸಗಳಿರುವ ನಾಯಕರು ತಮ್ಮ ಪಕ್ಷದ ಭಾವನೆಗಳೊಂದಿಗೆ ಸಾಮರಸ್ಯವನ್ನು ಸಾಧಿಸುವಷ್ಟು ಬಲಶಾಲಿಯಾದ ಆತ್ಮವನ್ನು ಹೊಂದಿರುತ್ತಾರೆ. ಹಾಗಾಗಿ ಅವರೆಂದಿಗೂ ಅದರ ಜೀತದಾಳಾಗಬಯಸುವದಿಲ್ಲ. ಇನ್ನು ಧೃಡ ಮನಸ್ಸಿನವರಾದ ಅವರುಗಳೆಂದಿಗೂ ಕಾಲಕ್ಕೆ ತಕ್ಕಂತೆ ಬದಲಾಗುವ ನಿಯಮಗಳ ಬಲಿ ಪೀಠದ ಮೇಲೆ ತಮ್ಮ ಬೇಕು ಬೇಡಿಕೆಗಳನ್ನು ಸಮರ್ಪಿಸಲು ಸಿದ್ಧರಾಗುವದಿಲ್ಲ. ಸ್ವತಂತ್ರತೆಯನ್ನು ಬಯಸದ, ಕೇವಲ ಇತರರ ದಾಸ್ಯತನದಲ್ಲಿಯೇ ಬದುಕಬೇಕೆಂಬ

ಅಭ್ಯಾಸಗಳಿಗೆ ಒಗ್ಗಿಕೊಂಡ ರಾಷ್ಟ್ರಗಳಲ್ಲಿ ಪಕ್ಷಗಳೇ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿ ಯಾಜಮಾನ್ಯವನ್ನು ವಹಿಸಿರುತ್ತವೆ. ಆದರೆ ಆ ಪಕ್ಷಗಳ ಅಧಿಕಾರವೇ ಅಂತಿಮವೆಂದಲ್ಲ, ಅದುವೇ ಪರಮ ಸಾಧನವೆಂದು ಅರ್ಥವಲ್ಲ. ವೈಯಕ್ತಿಕವಾದ ಭಾವನೆಗಳನ್ನೂ ಮೀರಿ ತನ್ನವರಿಗಾಗಿ ಆಕ್ರಮಣಕಾರಿಯಾಗಿ ಹೋರಾಡುವ, ಅದರ ಜೊತೆಜೊತೆಗೆ ಇತರರ ಅಭಿಪ್ರಾಯಗಳನ್ನೂ ಸಹ ಸ್ವೀಕರಿಸುವ ವಿಶಾಲ ದೃಷ್ಟಿಕೋನದ, ಕೆಲವೊಂದು ಬಾರಿ ತನ್ನ ಎದುರಾಳಿಯಾಗಿರುವವನ ಕೈಹಿಡಿದು ಮೇಲೆತ್ತುವ ಔದಾರ್ಯಯುತವಾದ ಮನೋಭಾವನೆಗಳು ಸ್ವತಂತ್ರಯುತವಾದ ಚೈತನ್ಯಯುತವಾದ ವಾತಾವರಣದಲ್ಲಿ ಅರಳುತ್ತವೆಯೇ ಹೊರತು, ದಾಸ್ಯತನದಿಂದ ಕೂಡಿದ ಬಂಜರು ಭೂಮಿಯಲ್ಲಲ್ಲ. ಗಾಯಗೊಂಡಿರುವ ಓರ್ವ ಗಾಯಾಳುವಿನ ನೋವಿಗೂ ಮುಗ್ಧ ಹಸುಳೆಯಂತಿರುವ ಗುಲಾಮನೋರ್ವನ ನೋವಿಗೂ ಯಾವುದೇ ವ್ಯತ್ಯಾಸವಿಲ್ಲ; ಸೋಲನ್ನು ಒಪ್ಪಿಕೊಳ್ಳದ ಅಹಮಿಕೆ, ಸೋತವರ ಮೇಲೆ ನಿರಂತರವಾಗಿ ಅವಹೇಳನಕಾರಿಯಾದ ನಿಂದನೆಗಳನ್ನು ನೀಡುವ ದುರುದ್ದೇಶ, ಎದುರಾಳಿಯಲ್ಲಿ ಒಳ್ಳೆಯತನವನ್ನು ಕಾಣದ ಅಥವಾ ಅವನ ಅಭಿಪ್ರಾಯಗಳಲ್ಲಿರುವ ಪ್ರಾಮಾಣಿಕತೆಯನ್ನು ಅರಿಯಲು ಪ್ರಯತ್ನಿಸದೇ ಇರುವ ಸಂಕುಚಿತತೆ, ಪಕ್ಷದ ಸದ್ಗುಣಗಳನ್ನು ತನ್ನ ವೈಯಕ್ತಿಕ ಅಭಿವೃದ್ಧಿಗಾಗಿ ದುರುಪಯೋಗಪಡಿಸಿಕೊಳ್ಳುವ ಮನೋಭಾವನೆಗಳು ರಾಷ್ಟ್ರದ ಏಳಿಗೆಗೆ ತೊಡಕಾಗುತ್ತವೆ. ಇಂತಹ ಭೂಮಿಕೆಗಳು ಇರುವವರೆಗೂ ಪಕ್ಷವು ಶಾಪಗ್ರಸ್ಥವಾಗಿಯೇ ಇರುತ್ತದೆ. ಅದಾಗ್ಯೂ ಪಕ್ಷವಿಲ್ಲದ ರಾಷ್ಟ್ರದಲ್ಲಿ ಸ್ವರಾಜ್ಯದ ಪರಿಕಲ್ಪನೆಯೂ ಅಸಾಧ್ಯ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1061**

## ಸಂಯುಕ್ತ ರಾಷ್ಟ್ರ ರೇಖೆಗಳು

ಭಾರತದ ರಾಷ್ಟ್ರೀಯತೆಯು ತನ್ನ ಸರ್ವರೂಪದ ಅಧಿಕಾರಗಳಲ್ಲಿ ತನ್ನನ್ನು ತಾನು ಸಂಯುಕ್ತ ರಾಷ್ಟ್ರಗಳ ಒಕ್ಕೂಟದಲ್ಲಿ ಒಂದೆಂದು ಗುರುತಿಸಿಕೊಳ್ಳುತ್ತದೆ. ಈ ಒಕ್ಕೂಟದಲ್ಲಿನ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಸಂಘಟನೆ ಮತ್ತು ಆದರ್ಶಗಳನ್ನು ಪಾಲಿಸುತ್ತಿರುತ್ತದೆ. ಹಾಗೂ ಒಕ್ಕೂಟದ ಇತರ ರಾಷ್ಟ್ರದೊಂದಿಗೂ ಉತ್ತಮ ಬಾಂಧವ್ಯವನ್ನಿಟ್ಟುಕೊಂಡು ಅದರೊಡನೆ ಸಂವಹನ ನಡೆಸುತ್ತಿರುತ್ತದೆ. ಆ ಮೂಲಕ ಆ ಎಲ್ಲ ರಾಷ್ಟ್ರಗಳೂ ಒಂದೇ ಮಾರ್ಗದಲ್ಲಿ ಚಲಿಸುತ್ತ ಸಾರ್ವತ್ರಿಕವಾದ

ಸತ್ಯದೆಡೆಗೆ, ವೈಶ್ವಿಕವಾದ ಋತದೆಡೆಗೆ ಸಾಗುತ್ತಿರುತ್ತವೆ. ಈ ಏಕರೂಪದ ಚಲನೆಯಲ್ಲಿ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಸಾಂಪ್ರದಾಯಿಕ ಮತ್ತು ಐತಿಹಾಸಿಕವಾದ ವಿಭಿನ್ನ ಮಾರ್ಗಗಳ ಮೂಲಕ ಸಾಗುತ್ತ ಕ್ರಮೇಣ ಪರಸ್ಪರ ಹತ್ತಿರವಾಗುತ್ತವೆ. ಈ ಹಂತದಲ್ಲಿ ಸಾಗುತ್ತಿರುವ ವಿವಿಧ ವರ್ಗಗಳು ಅವು ಬಹು ಪುರಾತನವೇ ಆಗಿರಲಿ ಅಥವಾ ಆಧುನಿಕ ಕಾಲದ್ದೇ ಆಗಿರಲಿ ಅವು ಒಂದು ಅನಿರ್ದಿಷ್ಟ ಅವಧಿಯವರೆಗೆ ಚಲಿಸುತ್ತ ಮುಂದೊಮ್ಮೆ ತಮ್ಮ ವಾಸ್ತವತೆಯನ್ನು ಕಳೆದುಕೊಂಡು ಏಕಮೇವತೆಯಲ್ಲಿ ಒಂದಾಗಿ ಬಿಡುತ್ತವೆ. ಹಾಗೆಂದ ಮಾತ್ರಕ್ಕೆ ಭಾರತದಲ್ಲಿರುವ ಮಹಮ್ಮದೀಯ, ಹಿಂದೂ, ಬೌದ್ಧ, ಕ್ರಿಶ್ಚಿಯನ್ ಮುಂತಾದ ವರ್ಗಗಳು ತಮ್ಮತನವನ್ನು ಸಂಪೂರ್ಣವಾಗಿ ಕಳೆದುಕೊಳ್ಳಲೇಬೇಕೆಂಬ ನಿಯಮವೇನಿಲ್ಲ. ಅವು ಇತರ ವರ್ಗ–ಸಂಸ್ಥೆಗಳ ಭಕ್ತಿ–ಆದರ್ಶಗಳನ್ನು ಸ್ಪಂದನಶೀಲವಾಗಿ, ಸಹಿಷ್ಣುವಾಗಿ, ಗೌರವಯುತವಾಗಿ ಭಾವಿಸಬೇಕು. ಹಾಗೂ ಜನ ಸಾಮಾನ್ಯರ ಮತ್ತು ನಾಗರೀಕ ಸಮಾಜದ ಮಧ್ಯೆ ಉತ್ಕಟವಾದ ಪ್ರೀತಿ–ವಾತ್ಸಲ್ಯಗಳನ್ನು ಬೆಳೆಸಿಕೊಳ್ಳಬೇಕು. ಆಗಮಾತ್ರ ನಿಜವಾದ ಭಾರತ ರಾಷ್ಟ್ರದ ನಿರ್ಮಾಣವಾಗುತ್ತದೆ. ಇದನ್ನು ಬೇರೆಯಾವ ಮಾರ್ಗದಲ್ಲೂ ನಿರ್ಮಿಸಲು ಸಾಧ್ಯವಿಲ್ಲ. ಕೇವಲ ಬ್ರಾಹ್ಮಣ, ಮೊಹಮ್ಮದೀಯ, ಕ್ರಿಶ್ಚಿಯನ್ ಧರ್ಮ ಪ್ರಚಾರವೆಂಬ ಜಾತಿಯತೆಯ ಮೂಲಕವೂ ಇದನ್ನು ಸಾಧಿಸಲಾಗದು. ಏಕೆಂದರೆ, ಇದು ರಾಷ್ಟ್ರೀಯ ಏಕತೆಗೆ ಧಕ್ಕೆ ತಂದಂತಾಗುತ್ತದೆ; ರಾಷ್ಟ್ರೀಯ ಸಾಮರಸ್ಯವನ್ನು ಯಾವುದೋ ಒಂದು ವರ್ಗದ ಮೂಲಕವೇ ಸಾಧಿಸಲೆಂದು ನಿಂತಿರುವ ನಾಯಕರು ರಾಷ್ಟ್ರದ ವಿವಿಧ ಸಮುದಾಯಗಳನ್ನು ಒಗ್ಗೂಡಿಸುವದರ ಬದಲಾಗಿ, ಎಲ್ಲೆಡೆ ಸಾಂಪ್ರದಾಯಿಕವಾದ ವಿರೋಧವನ್ನು ಹುಟ್ಟುಹಾಕಲು ಮೂಲ ಕಾರಣರಾಗುತ್ತಾರೆ. ಆ ಮೂಲಕ ಪುರಾತನವಾದ ಸಮರ್ಥ ಶಕ್ತಿಗಳನ್ನು ಕಳೆದುಕೊಳ್ಳುತ್ತಾರೆ. ರಾಷ್ಟ್ರೀಯ ಚಳುವಳಿಯ ವಿಷಯದಲ್ಲಿ ಕೇವಲ ಜಾತಿ ಮತ್ತು ಸಂಪ್ರದಾಯಗಳ ಇಕ್ಕಟ್ಟಾದ ಮಾರ್ಗದಲ್ಲಿ ಮುಂದುವರೆದಿದ್ದೇ ಆದಲ್ಲಿ ಅದು ಅವೈಜ್ಞಾನಿಕವಾದ ತತ್ವವನ್ನು ಪ್ರತಿನಿಧಿಸುತ್ತದೆ. ಇದರಿಂದಾಗಿ ವಿವಿಧ ವರ್ಗಗಳಲ್ಲಿ ರಾಷ್ಟ್ರೀಯತೆಯ ಬದಲಾಗಿ ಜಾತಿಯತೆಯು ಪ್ರಭಲವಾಗುತ್ತ ಸಾಗುತ್ತದೆ. ಈ ದೃಷ್ಟಿಯಿಂದ ನೋಡಬೇಕಾದರೆ ಕಳೆದ ಶುಕ್ರವಾರ ರಾಷ್ಟ್ರೀಯ ಭೋಜನದ ಹೆಸರಿನಲ್ಲಿ ನಡೆಸಲಾದ ಮೌಢ್ಯತೆಯನ್ನು ನಾವು ಖಂಡಿಸುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/169**

## ರಾಷ್ಟ್ರ ಮತ್ತು ದೇಶ

ರಾಷ್ಟ್ರವೆಂದರೆ ಯಾವುದು? ನಾವೆಲ್ಲ ಪಾಶ್ಚಿಮಾತ್ಯರ ಶಾಲೆಗಳಲ್ಲಿ ಕುಳಿತು ಅವರ ಭಾಷೆ ಮತ್ತು ವಿಚಾರಗಳನ್ನು ಕಲಿಯುತ್ತ, ನಮ್ಮದೇ ಆದ ಆಳವೂ–ಉನ್ನತವೂ ಆದ ತಾತ್ವಿಕ ಸತ್ಯಗಳನ್ನು, ವೈಚಾರಿಕ ಸಿದ್ಧಾಂತಗಳನ್ನು ಮರೆಯುತ್ತ ನರನಿಂದ ಮರಳಿ ವಾನರನೆಡೆಗೆ ಸಾಗುತ್ತಿದ್ದೇವೆ. ಪಾಶ್ಚಿಮಾತ್ಯರ ಪ್ರಕಾರ ಒಂದು ರಾಷ್ಟ್ರವೆಂದರೆ ಅದು ಕೇವಲ ಒಂದು ದೇಶವಷ್ಟೇ. ಅವರ ಪ್ರಕಾರ ರಾಷ್ಟ್ರವೆಂದರೆ ಸಭೆ ಸಮಾರಂಭಗಳಲ್ಲಿ ಉದ್ದುದ್ದ ಭಾಷಣವನ್ನು ಬಿಗಿಯುವ ಹಾಗೂ ತಾವು ಆರಿಸಿದ ರಾಜಕೀಯ ಆಡಳಿತದ ಮಧ್ಯೆ ಬದುಕುವ ಲಕ್ಷಾಂತರ ಜನರ ಸಮೂಹವಷ್ಟೇ. ಯುರೋಪಿಯನ್ನರು ತಮ್ಮ ದೇಶಕ್ಕಾಗಿ ಜೀವಂತವಾದ ಭಾವನೆಯೊಂದನ್ನು ಅನುಭವಿಸಲು ಬಯಸಿದಾಗ, ಅವರು ತಾವು ವಾಸಿಸುತ್ತಿರುವ ಭೂಮಿಯನ್ನೇ ವ್ಯಕ್ತಿಗತಗೊಳಿಸಿ, ಆ ವಿವೇಚನಾರಹಿತವಾದ ಬಂಜರು ಭೂಮಿಯಲ್ಲಿಯೇ ಚೈತನ್ಯವೊಂದು ಉಸಿರಾಡುತ್ತಿದೆ ಎಂದು ಭ್ರಮಿಸುತ್ತಾರೆ. ಮತ್ತು ತಮ್ಮದೇ ಆದ ಬುದ್ಧಿಮತ್ತೆಯ ಪರಿಧಿಯೊಳಗೆ ತಾವೇ ಸೃಷ್ಟಿಸಿಕೊಂಡಿರುವ ಅಸ್ಪಷ್ಟವೂ–ಅಮೂರ್ತವೂ ಆದ ಪರಿಕಲ್ಪನೆಯೊಂದನ್ನು ಆರಾಧಿಸುತ್ತಾರೆ. ಆದರೆ ಅದಕ್ಕೆ ವ್ಯತಿರಿಕ್ತವೆಂಬಂತೆ ಭಾರತೀಯ ರಾಷ್ಟ್ರೀಯತೆಯು ಆಳವೂ–ಉನ್ನತವೂ ಆದ ತತ್ವ–ಸಿದ್ಧಾಂತಗಳ ಮೇಲೆ ಸ್ಥಾಪಿತವಾಗಿದ್ದು, ನಮ್ಮ ಪ್ರಾಕ್ತನರು ದ್ರವ್ಯಗಳ ಸ್ಥೂಲದೇಹವನ್ನಲ್ಲದೇ ಅದರ ಸೂಕ್ಷ್ಮ ದೇಹವನ್ನು ಸಹ ಪರಿಶೋಧಿಸಿದ್ದಾರೆ. ಅದರ ಮೂಲಕ ದೊರೆಯುವ ಕಾಣ್ಕೆಗಳು ನಮ್ಮ ದೃಷ್ಟಿಯನ್ನು ಇನ್ನೂ ಆಳಕ್ಕಿಳಿಸಿ ಅಲ್ಲಿ ಮೂರನೆಯದಾದ ಕಾರಣ ದೇಹವನ್ನು ತೋರಿಸುತ್ತದೆ. ಅಲ್ಲಿ ಚಿರಂತನವಾಗಿ ಸ್ಥಾಪಿತವಾದ ಜೀವಾತ್ಮನ ಮೂಲ ರೂಪವನ್ನು ದರ್ಶಿಸುತ್ತದೆ. ಹೀಗೆ ಮನುಷ್ಯನ ಆತ್ಮದಂತೆಯೇ ರಾಷ್ಟ್ರದ ಆತ್ಮವೂ ಸಹ ಸ್ಥೂಲ–ಸೂಕ್ಷ್ಮ–ಕಾರಣಗಳೆಂಬ ತ್ರಿವಿಧ ರೂಪದ ದೇಹಗಳನ್ನು ಧರಿಸಿ ನಿಂತಿದೆ. ಭಾರತದಲ್ಲಿ ವಾಸಿಸುವ ಲಕ್ಷಾಂತರ ಜನ ಸಮೂಹವು ಅನ್ನಮಯ ಕೋಶವಾಗಿದೆ. ಇನ್ನು ರಾಷ್ಟ್ರದ ದೇಹವನ್ನು ಚೈತನ್ಯಯುತವಾಗಿಸಿರುವ ವಿವಿಧ ಜನಾಂಗಗಳ ಜನ ಜೀವನವು ಈ ರಾಷ್ಟ್ರದ ಪ್ರಾಣಮಯ ಕೋಶವಾಗಿದೆ. ಈ ಎರಡೂ ಕೋಶಗಳು ಸೇರಿ ರಾಷ್ಟ್ರದ ಸ್ಥೂಲ ಭೌತಿಕ ಶರೀರವನ್ನು ನಿರ್ಮಿಸುತ್ತದೆ; ಈ ಸ್ಥೂಲ ದೇಹದೊಳಗೆ ಇರುವ ರಾಷ್ಟ್ರದ ಸೂಕ್ಷ್ಮ ದೇಹವು ಈ ರಾಷ್ಟ್ರದ ವೈಚಾರಿಕತೆ, ಸಾಹಿತ್ಯ, ತತ್ವ ಶಾಸ್ತ್ರ, ಮಾನಸಿಕ ಮತ್ತು ಭಾವನಾತ್ಮಕವಾದ ಚಟುವಟಿಕೆಗಳು, ಭರವಸೆಗಳು, ಆನಂದದ ಆಕಾಂಕ್ಷೆಗಳು,

ನಾಗರೀಕತೆಯ ಸಂಸ್ಕೃತಿಗಳನ್ನು ಒಳಗೊಂಡಿರುತ್ತದೆ; ನಮ್ಮ ಭೌತಿಕ ನೇತ್ರಗಳಿಗೆ ರಾಷ್ಟ್ರದ ವಿವಿಧ ಜನಾಂಗಗಳೆಂಬ ಸ್ಥೂಲ ದೇಹವು ಮಾತ್ರ ಗೋಚರಿಸುತ್ತದೆ. ನಮ್ಮ ಕಾಣ್ಕೆಯನ್ನು ಇನ್ನಷ್ಟು ವಿಸ್ತರಿಸಿದಂತೆ ರಾಷ್ಟ್ರದ ತತ್ವ–ಸಿದ್ಧಾಂತಗಳಿರುವ ಸೂಕ್ಷ್ಮ ದೇಹದ ದರ್ಶನವಾಗುತ್ತದೆ. ನಮ್ಮ ಈ ಪ್ರಜ್ಞಾ ಚಕ್ಷುವು ತನ್ನ ನೋಟವನ್ನು ಮತ್ತಷ್ಟು ಹಿಗ್ಗಿಸಿದಾಗ ಈ ರಾಷ್ಟ್ರದ ಕಲೆ–ಸಾಹಿತ್ಯಗಳಿಗೆ ಮೂಲ ಕಾರಣವಾಗಿರುವ ರಾಷ್ಟ್ರದ ಕಾರಣ ಶರೀರದ ದಿಗ್ದರ್ಶನವಾಗುತ್ತದೆ. ಈ ಕಾರಣ ಶರೀರದಲ್ಲಿರುವ ವಿಭಿನ್ನ ಮತ್ತು ವಿಚಿತ್ರವಾದ ಮನೋಧರ್ಮಗಳು ಆ ರಾಷ್ಟ್ರದ ಆತ್ಮವನ್ನು ಪ್ರತಿನಿಧಿಸುತ್ತದೆ. ಹಾಗಾಗಿ ರಾಷ್ಟ್ರವೆಂಬುದು ಚಿರಂತನವಾದ ನಾರಾಯಣನಾದರೆ, ನಾವೆಲ್ಲರು ಅವನಿಂದ ಬಂದ ನರ(ಮಕ್ಕಳು)ರಾಗಿದ್ದೇವೆ.

ನಾವು ಒಂದು ರಾಷ್ಟ್ರದ ಕುರಿತು ಮಾತನಾಡುವಾಗ ಆ ರಾಷ್ಟ್ರದ ನಿವಾಸಿಯಾರುವ ಲಕ್ಷಾಂತರ ಜನರ ಪ್ರತ್ಯೇಕ ಜೀವನವನ್ನು ಅರ್ಥೈಸುತ್ತೇವೆ. ಇನ್ನೂ ಮುಂದುವರಿದು ಆ ರಾಷ್ಟ್ರದ ನಾಗರೀಕತೆ ಮತ್ತು ಸಂಸ್ಕೃತಿಗಳನ್ನು ಅರಿಯುತ್ತೇವೆ. ಹೀಗೆ ಇವೆಲ್ಲಕ್ಕೂ ಮೂಲ ಕಾರಣವಾಗಿರುವ ಎಂದಿಗೂ ಬದಲಾಯಿಸಲಾಗದ ರಾಷ್ಟ್ರೀಯ ಮನೋಧರ್ಮವೊಂದು ಬಹಳ ಆಳವಾಗಿ ಅಲ್ಲಿ ಬೇರೂರಿರುತ್ತದೆ. ಹಾಗೆಯೇ ನಮ್ಮ ರಾಷ್ಟ್ರೀಯ ಜೀವನದಲ್ಲಿ ದೇವರ ಅಭಿವ್ಯಕ್ತಿಯಿದ್ದು, ಅದು ನಿತ್ಯ–ನಿರಂತರವೂ, ಅಮರ–ಚಿರಂತನವೂ, ಪವಿತ್ರ–ಆರಾಧನೀಯವೂ ಆಗಿದೆ. ಈ ಪರಿಕಲ್ಪನೆಯನ್ನೇ ನಾವು ಮಾತೆ ಎಂದು ಪರಿಗಣಿಸುವುದು. ಏಕೆಂದರೆ ನಾವು ಇಂದು ಇಲ್ಲಿ ಬದುಕುತ್ತಿದ್ದೇವೆ. ಮತ್ತೆಂದೋ ಸಾಯುತ್ತೇವೆ. ಆದರೆ ಈ ರಾಷ್ಟ್ರದ ಮೂಲ ಭೂಮಿಕೆಯಾದ ಆ ದಿವ್ಯ ಮಾತೆಯು ಸಹಸ್ರಾರು ವರ್ಷಗಳಿಂದ ಬದುಕುತ್ತಿದ್ದಾಳೆ. ಇನ್ನೂ ಸಹಸ್ರಾರು ವರ್ಷ ಅವಳು ಅಮರಳಾಗೇ ಇರುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/1115–16 – ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**17**

### ಅಧ್ಯಾಯ – 16 (2/2)

### ಅವತಾರದ ಪ್ರಕ್ರಿಯೆ

ಮಾನವನ ಆತ್ಮವು ಈ ರೀತಿ ದಿವ್ಯ ಪ್ರಜ್ಞೆಯನ್ನು ಧಾರಣ ಮಾಡಿ ಈಶ್ವರೀ ಪ್ರಜ್ಞೆಯಲ್ಲಿ ಪ್ರವಿಷ್ಟವಾಗುವಾಗ ಅದರ ಸಹಜ ಪ್ರತಿಕ್ರಿಯೆಯಾಗಿ ಶರೀರದಲ್ಲಿ ಸ್ವತಃ ಈಶ್ವರನೇ ಪ್ರವೇಶಿಸಿ ನೆಲೆಗೊಳ್ಳುವ ಸಾಧ್ಯತೆ ಇರುತ್ತದೆ. ನಮ್ಮ ಮಾನವೀಯ ಪ್ರಕೃತಿ, ಮಾನವೀಯ ಚಟುವಟಿಕೆ, ಕೃತಿ, ಮಾನವೀಯ ಮನೋಭೂಮಿಕೆ ಮತ್ತು ನಮ್ಮ ಅಸ್ತಿತ್ವದ ಮಾನವೀಯ ಅಂಶಗಳಲ್ಲಿ ಹರಿದು ಬಂದು ಭೌತಿಕದಲ್ಲೂ ಸಹ ವ್ಯಾಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ಬೇಕಾದರೆ ಅಂಶಾವತಾರ ಎಂದು ಕರೆಯಬಹುದು. "ಪರಮ ಪುರುಷನು ಮಾನವನ ಹೃದಯದಲ್ಲಿ ಸ್ಥಿತನಾಗಿದ್ದಾನೆ" ಎಂದು ಗೀತೆಯು ಹೇಳುವುದರ ನಿಜವಾದ ಅರ್ಥವೇನೆಂದರೆ, ಅವನು ಸ್ಥಿತನಾಗಿರುವುದು ಸ್ಥೂಲ ಶರೀರದ ಹೃದಯದಲ್ಲಿ ಅಲ್ಲ, ಸೂಕ್ಷ್ಮ ಸತ್ತೆಯ ಕೇಂದ್ರದಲ್ಲಿ, ಭಾವನೆಗಳು, ಸಂವೇದನೆಗಳು, ಮನೋಮಯ ಪ್ರಜ್ಞೆ ಇರುವ ಸೂಕ್ಷ್ಮ ಸ್ಥಾನದಲ್ಲಿ; ಜೀವಾತ್ಮನಿರುವುದೂ ಅಲ್ಲಿಯೇ, ಆದರೆ ಅವನು ಸ್ಥೂಲ ಕಣ್ಣಿಗೆ ಕಾಣುವುದಿಲ್ಲ ಅವನ ಮೇಲೆ ಮಾಯೆ ಎಂಬ ಗವಸು ಇದೆ. ಈ ಜೀವಾತ್ಮನಿರುವ ಸ್ತರದ ಮೇಲೆ ನಮ್ಮ ಅಂತರಂಗದಲ್ಲಿ ಮತ್ತೊಂದು ಉನ್ನತ ಸ್ತರ ಇದೆ, ನಮಗದರ ಅರಿವಿಲ್ಲವಾಗಿ ಅದು ನಮಗೆ ಅತಿ ಚೇತನಾ ಸ್ತರವೆಂಬಂತೆ ತೋರುತ್ತದೆ; ಇದನ್ನೇ ನಮ್ಮ ಪುರಾತನ ಋಷಿ ಮುನಿಗಳು ಸ್ವರ್ಗ ಎಂದು ಕರೆದಿದ್ದಾರೆ; ಇಲ್ಲಿ ಪುರುಷೋತ್ತಮನೂ ಜೀವಾತ್ಮನೂ ಒಂದೇ ಆಗಿ, ಏಕೈಕ ಸತ್ತೆಯ ಸಾರರೂಪವಾಗಿ ಏಕರೂಪರಾಗಿ ಇರುತ್ತಾರೆ. ಇದನ್ನೇ ಸಾಂಕೇತಿಕವಾಗಿ ದಿವ್ಯ ಪಿತಾ–ಪುತ್ರ ಎಂದು ಹೇಳಲಾಗುವುದು, ದಿವ್ಯ ಪ್ರಭು ಹಾಗೂ ಅವನ ಉನ್ನತ ದೈವೀ ಪ್ರಕೃತಿಯಿಂದ ಜನಿಸಿದ ದಿವ್ಯ ಮಾನವ ಎಂದು ಹೇಳುವುದೂ ಸಹ ಇದನ್ನೇ ಸೂಚಿಸುವುದು* ಅಕ್ಷತ ಕನ್ಯಾ ಮಾತೆ, ಪರಾ ಪ್ರಕೃತಿ, ಪರಾ ಮಾಯೆ ಇವೆಲ್ಲ ಈ ಸಾಂಕೇತಿಕತೆಯನ್ನೇ ತೋರಿಸುವುವು. ಕ್ರಿಶ್ಚಿಯನ್ ಧರ್ಮದ ಪುನರ್ಜನ್ಮದ (ಮರಣಾನಂತರ ಏಸೂ

ಪುನಃ ಶಿಷ್ಯರೆದುರು ಕಾಣಿಸಿಕೊಳ್ಳುವುದು) ಸಿದ್ಧಾಂತ ಕೂಡ ಇದನ್ನೇ ತೋರಿಸುವುದು. ಅದೇ ಧರ್ಮದ ತ್ರಿವಳಿ ತತ್ವ ಕೂಡ ಇದನ್ನೇ ಸಮರ್ಥಿಸುವುದು; ದಿವ್ಯ ಪಿತೃ ಇರುವುದು ಈ ಅಂತರಂಗದ ಸ್ವರ್ಗದಲ್ಲಿ, ದಿವ್ಯ ಪುತ್ರ ಅಥವಾ ಪರಾ ಪ್ರಕೃತಿಯೇ ಜೀವನಾಗಿ, ದಿವ್ಯ ಮಾನವನಾಗಿ ಮರ್ತ್ಯ ಶರೀರ ಧಾರಣ ಮಾಡಿ ಭೂಮಿಯ ಮೇಲೆ ಇಳಿದು ಬರುವುನು – ಗೀತೆ ಕೂಡ ಇದನ್ನೇ ಹೇಳುತ್ತದೆ. ಪವಿತ್ರ ಆತ್ಮ, ಪರಿಶುದ್ಧ ಜೀವ, ಬ್ರಾಹ್ಮಿಕ ಪ್ರಜ್ಞೆ ಇದನ್ನು ಒಂದಾಗಿಸುವುದು ಮತ್ತು ಪರಸ್ಪರ ಸಂವಹನ ಕಲ್ಪಿಸುವುದು. ಪವಿತ್ರ ಆತ್ಮನು ಏಸೂ ಕ್ರಿಸ್ತನಲ್ಲಿ ಇಳಿದು ಬರುವುದೆಂದರೆ ಉನ್ನತ ಸ್ತರದ ಉನ್ನತ ಶಕ್ತಿಗಳು ಇಳಿದು ಬರುವುದು ಎಂದೇ ಅರ್ಥ; ಇದನ್ನೇ ಅಪಾಸ್ಟಲ್ಸನಲ್ಲಿ Apostles ಹೇಳಲಾಗಿದೆ.

ಆದರೆ ಪುರುಷೋತ್ತಮನ ಉನ್ನತ ದಿವ್ಯ ಪ್ರಜ್ಞೆಯು ತಾನಾಗಿ ವ್ಯಕ್ತಿಯೊಬ್ಬನಲ್ಲಿ ಇಳಿದು ಬರುವುದೂ ಉಂಟು, ಮತ್ತು ಆಗ ಜೀವಾತ್ಮನೂ ಅದರಲ್ಲಿಯೇ ಸೇರಿ ಒಂದಾಗಿಬಿಡುವುದೂ ಉಂಟು. ಇಂಥದು ಚೈತನ್ಯ ಮಹಾಪ್ರಭುವಿನ ಪ್ರಸಂಗದಲ್ಲಿ ಮೇಲಿಂದ ಮೇಲೆ ಸಂಭವಿಸುತ್ತಿತ್ತೆಂದು ಅವರ ಅನೇಕ ಸಮಕಾಲೀನರು ಹೇಳುತ್ತಾರೆ. ಚೈತನ್ಯ ಪ್ರಭು ಸಾಮಾನ್ಯ ಮಾನವೀಯ ಪ್ರಜ್ಞೆಯಲ್ಲಿ ಇದ್ದಾಗ ಪರಮಾತ್ಮನ ಪರಮ ಭಕ್ತನಂತೆ ವರ್ತಿಸುತ್ತ ಜನರು ತನ್ನ ಮೇಲೆ ಆರೋಪಿಸುತ್ತಿದ್ದ ಎಲ್ಲ ದೈವಿಕತೆಯನ್ನು ನಿರಾಕರಿಸುತ್ತಿದ್ದರಂತೆ; ಆದರೆ ಅದೇ ಅಸಾಧಾರಣ ಸಂದರ್ಭಗಳಲ್ಲಿ ತಾನೇ ಪ್ರಭು ತಾನೇ ಭಗವಂತ, ಈಶ್ವರನೆಂಬಂತೆ ಮಾತನಾಡುತ್ತಿದ್ದರಂತೆ, ವರ್ತಿಸುತ್ತಿದ್ದರಂತೆ. ಆಗ ಅವರಲ್ಲಿರುವ ದೈವೀ ಸಾನಿಧ್ಯದ ಬೆಳಕು, ಪ್ರೇಮ, ಸಾಮರ್ಥ್ಯಗಳು ಬಾಹ್ಯದಲ್ಲಿ ತಾವಾಗಿ ಪ್ರಕಟವಾಗುತ್ತಿದ್ದವಂತೆ. ಇಂಥ ಅವಸ್ಥೆಯು ಓರ್ವ ಮಾನವ ವ್ಯಕ್ತಿಯಲ್ಲಿ ಸಾಮಾನ್ಯವಾಗಿಬಿಟ್ಟರೆ ಅವನು ದೈವೀ ಪ್ರಜ್ಞೆ ಮತ್ತು ದೈವೀ ಆನಂದಗಳ ಪಾತ್ರೆ ಮತ್ತು ಕಾರ್ಯ ಸಾಧನವಾಗಿ ಬದಲಾಗಿ ಬಿಡುತ್ತಾನೆ, ನಮ್ಮ ಅವತಾರದ ಮಾಧ್ಯಮಿಕ ಪರಿಕಲ್ಪನೆಯ ಪ್ರಕಾರ ಅಂಥ ವ್ಯಕ್ತಿಯನ್ನು ನಾವು ಅವತಾರ ಎಂದು ಹೇಳಬಹುದು. ನಮ್ಮ ಮಾನವೀಯ ಕಲ್ಪನೆಗೆ ಇಂಥ ಅವತಾರದ ಸಾಧ್ಯತೆ ಸುಲಭ ಗ್ರಾಹ್ಯವಾಗುತ್ತದೆ. ಮಾನವನು ತನ್ನ ಪ್ರಕೃತಿಯನ್ನು ಎತ್ತರಿಸಿ ಈಶ್ವರನ ದಿವ್ಯ ಅಸ್ತಿತ್ವದೊಡನೆ, ಪ್ರಕೃತಿಯೊಡನೆ ತಲ್ಲೀನಗೊಳಿಸಿ, ತನ್ನ ವ್ಯಕ್ತಿತ್ವ ಮತ್ತು ತನ್ನ ವೈಯಕ್ತಿಕ ಇಚ್ಛಾ ಸಂಕಲ್ಪಗಳನ್ನು ಈಶ್ವರೀ ಪ್ರಜ್ಞೆಯಲ್ಲಿ ತಾದಾತ್ಮ್ಯಗೊಳಿಸಿಬಿಟ್ಟಾಗ ಆ ದಿವ್ಯ ಈಶ್ವರೀ ಅಸ್ತಿತ್ವ, ಪ್ರಜ್ಞೆ, ಶಕ್ತಿ, ಪ್ರೇಮ, ಪ್ರಕಾಶ ಹಾಗೂ ಸಂಕಲ್ಪಗಳು ಈ ವ್ಯಕ್ತಿಯ (ಜೀವಾತ್ಮನ) ಮೂಲಕ ಪರಾವರ್ತಿತಗೊಂಡು ಪ್ರಕಟವಾಗುವುವು.

ಇದನ್ನೇ ನಿಜವಾದ ಆಧ್ಯಾತ್ಮಿಕ ಸ್ಥಿತಿ ಎಂದು ಅನೇಕ ಕಡೆ ಹೇಳಲಾಗಿದೆ. ಇದು ಕೇವಲ ದೈವೀ ಜನ್ಮದಲ್ಲಿ ಮತ್ತು ದೈವೀ ಪ್ರಜ್ಞೆಯಲ್ಲಿ ಮಾನವೀಯ ಆರೋಹಣವಾಗಿರದೇ, ದಿವ್ಯ ಪುರುಷನೇ ಮಾನವತೆಯಲ್ಲಿ ಅವರೋಹಿತನಾಗಿರುತ್ತಾನೆ; ಇದನ್ನೇ ಅವತಾರ ಅನ್ನುವುದು.

ಗೀತೆಯು ಈ ಅವತಾರದ ವಿಷಯದಲ್ಲಿ ಬಹಳೇ ಮುಂದುವರಿದು ಹೇಳುತ್ತದೆ. ಸೃಷ್ಟಿಯ ಪ್ರಭುವೇ ಸಾಕ್ಷಾತ್ತಾಗಿ ಮಾನವನಾಗಿ ಜನ್ಮ ತಾಳುತ್ತಾನೆ ಎಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ. ಶ್ರೀಕೃಷ್ಣನೇ ಸ್ವತಃ ತನ್ನ ಅನೇಕ ಗತ ಜನ್ಮಗಳ ಕುರಿತು ಹೇಳುತ್ತಾನೆ. ಮತ್ತು ಇದು ಮಾನವನು ದೈವೀ ಪ್ರಜ್ಞೆಯನ್ನು ಸ್ವೀಕರಿಸಿ, ಆ ಸ್ವರೂಪ ತಾಳಿಬಿಡುವುದಲ್ಲ ಬದಲಾಗಿ ಸೃಷ್ಟಿಕರ್ತೃವಾದ, ಈಶ್ವರನಾದ ಪುರುಷೋತ್ತಮನೇ ಸ್ವತಃ ಮಾನವನಾಗಿ ಹುಟ್ಟಿ ಬರುತ್ತಾನೆ ಎಂದು ಖಚಿತ ಸ್ವರದಲ್ಲಿ ಘೋಷಿಸುತ್ತಾನೆ. ಸೃಷ್ಟಿಯ ವಿಷಯವಾಗಿ ಹೇಳುವಾಗಲೂ ಸಹ “ನಾನು ಅಜಾತನಾಗಿದ್ದರೂ, ಈ ಸೃಷ್ಟಿಯ ಪ್ರಭುವಾಗಿದ್ದರೂ ಸಹ ನನ್ನ ಮಾಯೆಯ ಮೂಲಕ ನಾನು ಸೃಷ್ಟಿಯಲ್ಲಿ ಸ್ವತಃ ಹುಟ್ಟಿಬರುತ್ತೇನೆ” ಎಂದು ಗಟ್ಟಿಯಾದ ಭಾಷೆಯಲ್ಲಿ ಹೇಳುತ್ತಾನೆ. ಹಾಗೆ ಹುಟ್ಟಿ ಬಂದಾಗಲೂ ಸಹ ಪ್ರಕೃತಿಯು ಅವನ ಅಧೀಕ್ಷತೆಯಲ್ಲಿಯೇ ಕಾರ್ಯ ಮಾಡುತ್ತದೆ. ಇಲ್ಲಿ ಈಶ್ವರ ಮತ್ತು ಜೀವಾತ್ಮ ಅಥವಾ ದೈವೀ ಪಿತಾ ಪುತ್ರರು ಇವರ ಪ್ರಶ್ನೆಯೇ ಇಲ್ಲ; ಇಲ್ಲಿರುವುದು ಕೇವಲ ಈಶ್ವರ ಮತ್ತು ಅವನ ಪ್ರಕೃತಿ. ಭಗವಂತನೇ ಸ್ವತಃ ತನ್ನ ಪ್ರಕೃತಿಯ ಮೂಲಕ ಮಾನವನಾಗಿ ಭೂಮಿಯ ಮೇಲೆ ಜನ್ಮ ತಾಳುತ್ತಾನೆ, ತನ್ನಲ್ಲಿ ಎಲ್ಲ ದೈವೀ ಪ್ರಜ್ಞೆ, ಶಕ್ತಿಗಳನ್ನು ಧಾರಣ ಮಾಡಿಕೊಂಡೇ ಹುಟ್ಟುತ್ತಾನೆ; ಆದರೆ ಮಾನವೀಯ ಆಕಾರ, ಸ್ವರೂಪ, ಮಾನದಂಡಗಳಿಗೆ ಅಧೀನವಾಗಿ ಕಾರ್ಯಗೈಯಲು ಬದ್ಧನಾಗಿರುತ್ತಾನೆ, ತನ್ನ ಶಾರೀರಿಕ ಕಾರ್ಯಗಳನ್ನು ಅಂತೇವಾಸಿಪ ಹಾಗೂ ಅಧಿವಾಸಿಪ ಆತ್ಮದ ಮೂಲಕ ನಿರ್ವಹಿಸುತ್ತಾನೆ. ಮೇಲೆ ನಿಂತು ಎಲ್ಲವನ್ನೂ ಆಳುತ್ತಾನೆ, ಇಡೀ ಪ್ರಕೃತಿಯೇ ಅವನ ನಿಯಂತ್ರಣದಲ್ಲಿರುತ್ತದೆ. ಅಂತರಂಗದಲ್ಲಿ ಕೂಡ ಅವನದೇ ಸ್ವಾಯತ್ತ ಅಧಿಕಾರ, ಆದರೆ ಅದೆಲ್ಲವೂ ಮೇಲೆ ಕಾಣದಂತೆ ಗುಪ್ತವಾಗಿರುತ್ತದೆ. ಇಲ್ಲಿನ ವ್ಯತ್ಯಾಸವೇನೆಂದರೆ ಈಶ್ವರನು ಇಲ್ಲಿ ಸಾಕ್ಷಾತ್ತಾಗಿ ಪ್ರಕಟನಾಗಿದ್ದಾನೆ, ಅವನ ಈ ದಿವ್ಯ ಸಾನಿಧ್ಯದ ಸಂಪೂರ್ಣ ಅರಿವು ಪ್ರಕೃತಿಗೆ ಇರುತ್ತದೆ, ಅವನು ಸೃಷ್ಟಿಯ ಸ್ವಾಮಿಯೂ ಹೌದು, ಅಂತರಂಗದಲ್ಲಿ ಸ್ಥಿತನಾಗಿರುವ ಆತ್ಮ ಸ್ವರೂಪನೂ ಹೌದು, ಇದೇನೂ “ಸ್ವರ್ಗದಲ್ಲಿರುವ ದಿವ್ಯ ತಂದೆಯ ಅಣತಿಯಂತೆ ಅಥವಾ ಮೂಕ ಸಂಕಲ್ಪದಂತೆ ಅಲ್ಲ” ತನ್ನದೇ ಆದ ಸ್ವಂತ

ಪ್ರಕಟ ನಿರ್ಧಾರದ ಮೂಲಕ, ಸಂಕಲ್ಪದ ಮೂಲಕ ನೇರವಾಗಿ ಪ್ರಕೃತಿಯನ್ನು ಮುನ್ನಡೆಸುತ್ತಾನೆ. ಇಲ್ಲಿ ಮಾನವನ ಮಧ್ಯಸ್ತಿಕೆಯ ಅವಶ್ಯಕತೆ ಇರುವುದಿಲ್ಲ. ಏಕೆಂದರೆ "ಪ್ರಕೃತಿಂ ಸ್ವಾಮವಷ್ಟಭ್ಯ" ತನ್ನದೇ ಆದ ಪ್ರಕೃತಿಯನ್ನು ಧಾರಣ ಮಾಡಿಕೊಂಡೇ ಅವನು ಜನ್ಮ ತಾಳಿರುತ್ತಾನೆ; ಇಲ್ಲಿ ಮಾನವ 'ಜೀವ ಪ್ರಕೃತಿಯ' ಪ್ರಶ್ನೆಯೇ ಇರುವುದಿಲ್ಲ.

ಈ ಸಿದ್ಧಾಂತವನ್ನು ಮಾನವನ ಮನಸ್ಸು, ಬುದ್ಧಿ ಮತ್ತು ತರ್ಕ ಒಪ್ಪುವುದು ಕಠಿಣ. ಏಕೆಂದರೆ ಅವತಾರ ತಾಳಿದ ವ್ಯಕ್ತಿಯು (ಅಥವಾ ಭಗವಂತನು) ಸಾಮಾನ್ಯ ಮಾನವನ ಹಾಗೆಯೇ ತೋರುತ್ತಾನೆ, ಅವನ ವ್ಯಕ್ತಿತ್ವದಲ್ಲಿ ಮಾನವೀಯ ಅಂಶಗಳೇ ಒಡೆದು ತೋರುತ್ತವೆ, ಅವನು ಸಂಪೂರ್ಣ ಮಾನವನಾಗಿಯೇ ವರ್ತಿಸುತ್ತಾನೆ, ಯಾವ ಭೇದವೂ ಕಾಣುವುದಿಲ್ಲ. ಇದೇ ದೊಡ್ಡ ಸಮಸ್ಯೆ. ಅವತಾರವೆಂಬುದು ಯಾವಾಗಲೂ ಇಬ್ಬಗೆಯ ಸಂಗತಿಗಳಿಂದ ಕೂಡಿರುತ್ತದೆ, ಅಲ್ಲಿ ದೈವತ್ವವೂ ಇರುತ್ತದೆ, ಮಾನವತ್ವವೂ ಇರುತ್ತದೆ. ಸ್ವತಃ ಭಗವಂತನೇ ಮಾನವನ ರೂಪ, ಆಕಾರ, ಪ್ರಕೃತಿಯನ್ನು ಧಾರಣ ಮಾಡಿಕೊಂಡು ಮಾನವನಾಗಿ ಜನಿಸುತ್ತಾನೆ. ಮಾನವನ ಎಲ್ಲ ಮಿತಿಗಳು, ಕಟ್ಟುಪಾಡುಗಳು ಅವನಿಗೂ ಇರುತ್ತವೆ. ಅವೆಲ್ಲವನ್ನು ಒಪ್ಪಿಕೊಂಡೇ ಅವನು ಭೂಮಿಗೆ ಬಂದಿರುತ್ತಾನೆ. ಆ ಮಿತಿಗಳನ್ನೇ ಅವನು ಅನುಕೂಲಕರ ಪರಿಸ್ಥಿತಿಯಾಗಿ ಕಲ್ಪಿಸುತ್ತಾನೆ, ಅವುಗಳನ್ನು ಸಾಧನಗಳನ್ನಾಗಿ, ಉಪಕರಣಗಳನ್ನಾಗಿ ಬದಲಿಸಿಕೊಳ್ಳುತ್ತಾನೆ, ದೈವೀ ಪ್ರಜ್ಞೆ, ಶಕ್ತಿಗಳನ್ನು ದೈವೀ ಕಾರ್ಯಕ್ಕಾಗಿ ಮಾನವ ಜನ್ಮವನ್ನು ಮಾಧ್ಯಮವಾಗಿ ಉಪಯೋಗಿಸಿಕೊಂಡು ದಿವ್ಯ ಕಾರ್ಯಗಳನ್ನು ಮಾಡುತ್ತಾನೆ. ತಾತ್ವಿಕವಾಗಿ ಹಾಗೂ ವಾಸ್ತವಿಕವಾಗಿ ಅದು ಹಾಗೆಯೇ ಇರಬೇಕು, ಅನ್ಯಥಾ ಅವತಾರದ ಉದ್ದೇಶ ವಿಫಲವಾಗುವುದು. ಅವತಾರದ ಉದ್ದೇಶವೇನೆಂದರೆ, ಮಾನವ–ಜನ್ಮದ ಇತಿ–ಮಿತಿ, ಕೊರತೆ, ಅಭಾವ ಎಲ್ಲವನ್ನು ದಿವ್ಯ–ಜನ್ಮ ಹಾಗೂ ದಿವ್ಯ ಕರ್ಮಗಳನ್ನಾಗಿ ಮಾಡಲು ಸಾಧ್ಯವಿದೆ ಎಂಬುದನ್ನು ತನ್ನ ಜೀವನದ ಮೂಲಕ ತೋರಿಸುವುದೇ ಆಗಿದೆ. ಮಾನವ ಪ್ರಜ್ಞೆ ಹಾಗೂ ದಿವ್ಯ ಪ್ರಜ್ಞೆ ಎರಡೂ ಸಾರ ರೂಪವಾಗಿ ಪರಸ್ಪರ ಹೊಂದಿಕೆಯಾಗುತ್ತವೆ, ಮಾನವ ಪ್ರಜ್ಞೆಯಲ್ಲಿ ದಿವ್ಯ ಪ್ರಜ್ಞೆಯನ್ನು ಪ್ರಕಟಿಸಲು ಸಾಧ್ಯವಿದೆ, ಮಾನವನು ದಿವ್ಯತ್ವದ ಧಾರಣಾ ಪಾತ್ರೆಯಾಗಿ ಬದಲಾಗಲು ಸಾಧ್ಯವಿದೆ, ಮಾನವನ ಜೀವನದ ಮೂಲ ದ್ರವ್ಯವನ್ನೇ ಪರಿವರ್ತಿಸಿ ಅದರ ಶಕ್ತಿ, ಸಾಮರ್ಥ್ಯ, ಬೆಳಕು, ಪ್ರೇಮ, ಪಾವಿತ್ರ್ಯಗಳನ್ನು ಉನ್ನತೀಕರಿಸಿ ದೈವತ್ವದ ಎತ್ತರಕ್ಕೆ ಕೊಂಡೊಯ್ಯಲು ಸಾಧ್ಯವಿದೆ

ಎಂಬುದನ್ನು ಪ್ರತ್ಯಕ್ಷ ಸಾಧಿಸಿ ತೋರಿಸುವುದು ಅವತಾರದ ಉದ್ದೇಶವಾಗಿದೆ. ಅವತಾರವು ಸಂಪೂರ್ಣ ಅಸಹಜ, ಅಲೌಕಿಕ, ಅಪ್ರಾಕೃತಿಕ ರೀತಿಯಲ್ಲಿ ವರ್ತಿಸಿದ್ದೇ ಆದರೆ ಅವತಾರದ ಮೂಲ ಉದ್ದೇಶವೇ ಪೂರ್ತಿಯಾಗುವುದಿಲ್ಲ. ಕೇವಲ ಚಮತ್ಕಾರ, ಪವಾಡಗಳನ್ನು ಮೆರೆಯುತ್ತ ಹೋಗುವ ಅವತಾರವು ನಿರರ್ಥಕವಾದುದು, ಅದು ಅಪ್ರಯೋಜಕ, ಮತಿಗೇಡಿತನದ ಪ್ರತೀಕ. ಹಾಗೆಂದು ಅವತಾರ ಪುರುಷನು ಅಲೌಕಿಕ ಶಕ್ತಿಗಳನ್ನು ಎಂದಿಗೂ ಪ್ರದರ್ಶಿಸಲೇಬಾರದು ಎಂದೇನಲ್ಲ; ಏಸೂ ಕ್ರಿಸ್ತನು ತನ್ನಲ್ಲಿದ್ದ ದಿವ್ಯ ರೋಗ ನಿವಾರಣಾ ಶಕ್ತಿಯನ್ನು ಅನೇಕ ಸಂದರ್ಭಗಳಲ್ಲಿ ಪ್ರದರ್ಶಿಸಿದ್ದಾನೆ. ಮಾನವ–ಸ್ವಭಾವ ಮತ್ತು ಪ್ರಕೃತಿಗೆ ಅಲೌಕಿಕ ಶಕ್ತಿಗಳನ್ನು ಪ್ರದರ್ಶಿಸುವ ಪ್ರಲೋಭ ಸಹಜವಾಗಿ ಇರುತ್ತದೆ. ಆದರೆ ಅದೊಂದೇ ಏಕೋದ್ದೇಶವಾಗಿರಬಾರದು. ಅದೇನೂ ಅತಿ ಮಹತ್ವದ ಸಂಗತಿ ಅಲ್ಲ. ಅಪ್ರಾಕೃತಿಕ, ಅಸಾಧಾರಣ, ಅದ್ಭುತ ಪವಾಡಗಳನ್ನು ಸದಾ ಪ್ರದರ್ಶಿವುದು ಅವತಾರದ ಕೆಲಸವಲ್ಲ. ಅವತಾರವೆಂದರೆ ಸರ್ವ ಸಮರ್ಥ ಜಾದೂಗಾರ ಅಥವಾ ಮಾಯಕಾರನಲ್ಲ. ಅವನು ಮಾನವತೆಯ ವಿಕಾಸದ ನಾಯಕ, ದಿವ್ಯ ಮಾನವ ಜೀವನದ ಮೇಲ್ಪಂಕ್ತಿ ಹಾಕಿಕೊಡುವ ನೇತಾರ ಅವನು. ಮಾನವ ಸಹಜ ದುಃಖ ಯಾತನೆಗಳನ್ನು ಒಪ್ಪಿಕೊಂಡು ಅವುಗಳನ್ನು ತನ್ನ ಮೈಮೇಲೆ ಎಳೆದುಕೊಂಡು, ಅವುಗಳೇ ಹೇಗೆ ವಿಮೋಚನೆಯ ಸಾಧನಗಳಾಗಬಹುದೆಂಬುದನ್ನು ತೋರಿಸಿಕೊಡುತ್ತಾನೆ: ಏಸೂ ಕ್ರಿಸ್ತನು ಇದನ್ನೇ ಮಾಡಿ ತೋರಿಸಿದನು. ದಿವ್ಯ ಪುರುಷ ಅಥವಾ ಆತ್ಮ ಮಾನವ ಪ್ರಕೃತಿಯಲ್ಲಿಳಿದು ಬಂದು ಅದನ್ನು ಹೇಗೆ ಗೆಲ್ಲುವುದು ಸಾಧ್ಯ ಎಂಬುದನ್ನು ಗೌತಮ ಬುದ್ಧ ಮಾಡಿ ತೋರಿಸಿದನು. ಇದು ಅವತಾರದ ಮುಖ್ಯ ಉದ್ದೇಶ! ಇದೆಲ್ಲ ಬಿಟ್ಟು ಯಾರೋ ಒಂದಿಬ್ಬರು ವಿಚಾರವಾದಿಗಳು ಅಥವಾ ಸ್ವಘೋಷಿತ ಬುದ್ಧಿಜೀವಿಗಳು ಏಸೂವನ್ನುದ್ದೇಶಿಸಿ "ನೀನು ದೇವ ಸಂತಾನವೇ ಆಗಿದ್ದರೆ ನಿನ್ನನ್ನು ಬಿಗಿದು ಕಟ್ಟಿರುವ ಶೂಲದಿಂದ ಬಿಡಿಸಿಕೊಂಡು ಪಾರಾಗಿ ಬಾ ನೋಡೋಣ" ಎಂದು ಕೂಗಿದರೆ ಅಥವಾ ಯಾರೋ ಒಂದಿಬ್ಬರು ಇಂಥಿಂಥ ದೈವೀ ಪುರುಷರು ಇಂಥಿಂಥ ರೋಗದಿಂದ ನರಳಿ ಸತ್ತರು – ನಾಯಿಯ ರೀತಿಯಲ್ಲಿ ಸತ್ತರು – ಎಂದು ಹೇಳಿದರೆ ತಾವೇನು ಹೇಳುತ್ತಿದ್ದೇವೆ ಎಂಬುದರ ಅರ್ಥ ಅವರಿಗೆ ತಿಳಿಯದು, ಅವರು ಮೂರ್ಖರು ಎಂದೇ ಅರ್ಥ. ಅವತಾರದ ಪರಿಕಲ್ಪನೆಯ ತಳಬುಡವೇ ಅವರಿಗೆ ಗೊತ್ತಿಲ್ಲ ಎಂದರ್ಥ. ದೈವೀ ಆನಂದದ ಅವತಾರ ಬರುವ ಮೊದಲು ದುಃಖ, ಯಾತನೆಗಳ ಅವತಾರ ಬರಲೇಬೇಕು. ಮಾನವ ಬದುಕಿನ

ಇತಿಮಿತಿಗಳ ಒಳಗೇ ಕೆಲಸ ಮಾಡುತ್ತ ಅವುಗಳನ್ನೆಲ್ಲ ಹೇಗೆ ಮೀರುವುದು, ಹೇಗೆ ಗೆಲ್ಲುವುದು ಎಂಬುದನ್ನು ತೋರಿಸಿಕೊಡುವುದು ಅವುಗಳನ್ನು ಧಾರಣಮಾಡಿಕೊಂಡು ಬಂದಾಗಲೇ ಸಾಧ್ಯ. ಹೊರಬರುವ ದಾರಿ ಯಾವುದು, ಎಷ್ಟರ ಮಟ್ಟಿಗೆ ಹೊರಬರಲು ಸಾಧ್ಯ, ಇದು ಕೇವಲ ಆಂತರಿಕವೋ ಅಥವಾ ಬಾಹ್ಯದಲ್ಲೂ ಮಾಡಿತೋರಿಸಬಹುದೋ ಎಂಬುದು ಮಾನವತೆಯ ವಿಕಾಸದ ಹಂತದ ಮೇಲೆ ನಿರ್ಭರವಾಗಿರುತ್ತದೆ. ಅದನ್ನು ಅಮಾನುಷವಾದ ಪವಾಡದ ಮೂಲಕ ಮಾಡಬಾರದು (ಮಾಡುವುದಿಲ್ಲ).

ಅವತಾರದ ಪ್ರಕ್ರಿಯೆಯಲ್ಲಿ ಈಶ್ವರನು ಮಾನವೀಯ ಮನಸ್ಸು ಮತ್ತು ಮಾನವ ಶರೀರಗಳ ಆಶ್ರಯ ಪಡೆಯುತ್ತಾನೆ ಎಂಬುದನ್ನು ನಾವೀಗಾಗಲೇ ತಿಳಿದುಕೊಂಡಿದ್ದೇವೆ; ಈ ಮಾನವೀಯ ಮನಸ್ಸು ಮತ್ತು ದೇಹವನ್ನು ಈಶ್ವರ ಹೇಗೆ ಧಾರಣ ಮಾಡುತ್ತಾನೆ? ಯಾವ ರೀತಿ ಧಾರಣ ಮಾಡುತ್ತಾನೆ? ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಉದ್ಭವವಾಗುತ್ತದೆ. ನಿಜವಾಗಿ ಇದು ಅತ್ಯಂತ ಕಠಿಣವಾದ ಪ್ರಶ್ನೆಯಾಗಿದೆ. ಅವತಾರದ ವಿಷಯದಲ್ಲಿ ನಿಜವಾಗಿ ಇದೇ ಬಹುದೊಡ್ಡ ಪ್ರಶ್ನೆ. ಬುದ್ಧಿಗೆ ಇದು ನಿಲುಕುವುದಿಲ್ಲ, ಅದರ ಮಿತಿ ಅದನ್ನು ಕಟ್ಟಿ ಹಾಕುತ್ತದೆ. ಯಾವುದೇ ಮಾನವನ ದೇಹ ಮತ್ತು ಮನಸ್ಸು ಇವು ಭೌತಿಕ, ಆಧ್ಯಾತ್ಮಿಕ ಅಥವಾ ಇಬ್ಬಗೆಯ ವಿಕಾಸದ ಮೂಲಕ ಸಿದ್ಧವಾಗುತ್ತವೆ; ಅದೇನೂ ಏಕಾಏಕಿ ಸರ್ವಾಂಗಪೂರ್ಣವಾಗಿ ತಯಾರಾಗಿ ಬಿಡುವುದಿಲ್ಲ. ಅವತಾರದ ಅವರೋಹಣವು ಮಾನವನ ಆರೋಹಣದಂತೆ (ದಿವ್ಯ ಜನ್ಮದಂತೆ) ತಾತ್ವಿಕವಾಗಿ ಆಧ್ಯಾತ್ಮಿಕ ಘಟನೆಯಾಗಿದೆ. "ಆತ್ಮಾನಂ ಸೃಜಾಮಿ" ಎಂದು ಹೇಳುತ್ತ ಕೃಷ್ಣನು ಅವತಾರ ಪ್ರಕ್ರಿಯೆಯು ಆತ್ಮವು ಜನ್ಮ ತಾಳುವುದರ ಪ್ರಕ್ರಿಯೆಯಾಗಿದೆ ಎಂದು ಸ್ಪಷ್ಟಪಡಿಸಿದ್ದಾನೆ. ಆದರೂ ಸಹ ಆತ್ಮ ಜನ್ಮದ ಜೊತೆಜೊತೆಗೆ ಮಾನಸಿಕ ಮತ್ತು ದೈಹಿಕ ಜನ್ಮ ಕೂಡ ಅವತಾರದ ಪ್ರಕ್ರಿಯೆಯಲ್ಲಿನ ಭಾಗವಾಗಿದೆ. ಹಾಗಾದರೆ, ಅವತಾರಕ್ಕಾಗಿ ಮಾನವೀಯ ಮನ ಮತ್ತು ಮಾನವೀಯ ಶರೀರಗಳು ಸಿದ್ಧವಾಗುವುದೆಂತು? ಉತ್ತರ ರೂಪವಾಗಿ ನಾವು ಈ ರೀತಿ ಊಹಿಸಬಹುದು: ಅನುವಂಶಿಕ ವಿಕಾಸ ಮಾರ್ಗದಿಂದ ಮನೋಯುಕ್ತ ದೇಹ ನಿರ್ಮಾಣವಾಗುವುದೆಂಬುದು ನಮಗೆ ಗೊತ್ತು, ಅಚೇತನ ಪ್ರಕೃತಿ ಮತ್ತು ಅದರೊಳಗೆ ಸಂವ್ಯಾಪ್ತವಾಗಿರುವ ಪ್ರಾಣ ಚೈತನ್ಯವು ಅನುವಂಶಿಕ ವಿಕಾಸ ಮಾರ್ಗದ ಮೂಲಕ ದೇಹವನ್ನು ನಿರ್ಮಾಣ ಮಾಡುವುದು. ನಿರ್ಮಿತಿಯ ಈ ಪ್ರಕ್ರಿಯೆಯಲ್ಲಿ ಆತ್ಮವು ಭಾಗವಹಿಸುವುದಿಲ್ಲ. ಇದಿಷ್ಟು ಸರಳ ವಿವರಣೆ. ಇದನ್ನೇ

ಸ್ವಲ್ಪ ಮುಂದುವರಿಸಿ, ಅವತಾರಕ್ಕಾಗಿ ಯೋಗ್ಯವಾದ ಭೌತಿಕ ಮತ್ತು ಮಾನಸಿಕ ದೇಹವು ಶುದ್ಧ ಅಥವಾ ಮಹಾನ್ ಅನುವಂಶಿಕತೆಯ ಮೂಲಕ ತಯಾರಾಗುವುದು, ಭಗವಂತನು ಅವತಾರ ಧರಿಸುವಾಗ ಆ ಶರೀರವನ್ನು ಸ್ವೀಕರಿಸುವನು ಎಂದು ಹೇಳಬಹುದು. ಆದರೆ ಗೀತೆಯು ಈ ಪರಿಕಲ್ಪನೆಯನ್ನು ಒಪ್ಪುವುದಿಲ್ಲ; ಅದು ಅವತಾರಕ್ಕೆ ಪುನರ್ಜನ್ಮದ ಸಿದ್ಧಾಂತವನ್ನು ಅನ್ವಯಿಸುವ ಪ್ರಯತ್ನ ಮಾಡುತ್ತದೆ (ಗೀ 4, 5 ರಿಂದ 8) ಪುನರ್ಜನ್ಮದ ಸಿದ್ಧಾಂತ ಹೀಗಿದೆ. ಪುನರ್ಜನ್ಮ ತಾಳುವ ಆತ್ಮವು ತನ್ನ ಪೂರ್ವ ಕಾಲೀನ ಆಧ್ಯಾತ್ಮಿಕ ಮತ್ತು ಮಾನಸಿಕ ವಿಕಾಸದ ವಿಕಾಸಕ್ಕನುಗುಣವಾಗಿ ಹೊಸ ಜನ್ಮದಲ್ಲಿ ತನಗೆ ಯೋಗ್ಯವಾದ ಮಾನಸಿಕ ಹಾಗೂ ಭೌತಿಕ ಶರೀರವನ್ನು ತಾನೇ ನಿರ್ಧರಿಸುತ್ತದೆ, ತಾನೇ ತಯಾರಿಸಿಕೊಳ್ಳುತ್ತದೆ. ಆತ್ಮದ ಸ್ಪಷ್ಟ ಮಧ್ಯ ಪ್ರವೇಶವಿಲ್ಲದೇ ಅವತಾರದ ಶರೀರವು ತಯಾರಾಗುವುದಿಲ್ಲ. ಅಂದರೆ, ಅವತಾರವು ಸನಾತನ, ಶಾಶ್ವತ ಮತ್ತು ಅಖಂಡವಾಗಿ ಬರುವ–ಹೋಗುವಂಥದಾಗಿದ್ದುಂಥದಾಗಿದ್ದು ಅದು ವಿಶಿಷ್ಟ ಪ್ರಸಂಗದಲ್ಲಿ ಮಾನವ ಜಾತಿಯ ವಿಕಾಸವು ಎಲ್ಲಿಯವರೆಗೆ ಬಂದಿದೆ ಎಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಯೋಗ್ಯವಾದ ಮಾನಸಿಕ ಮತ್ತು ಭೌತಿಕ ಶರೀರವನ್ನು ವಿಕಾಸ ಮಾರ್ಗದ ಮೂಲಕ ಸಿದ್ಧಪಡಿಸಿ ಧರಿಸುತ್ತದೆ ಮತ್ತು "ಯುಗೇ ಯುಗೇ" ಕಾಲಕಾಲಕ್ಕೆ ಈ ರೀತಿ ಯೋಗ್ಯ ಮಾನಸಿಕ ಮತ್ತು ಭೌತಿಕ ಶರೀರವನ್ನು ಧರಿಸಿ ಭೂಮಿಯ ಮೇಲೆ ಬರುತ್ತಿರುತ್ತದೆ ಎಂದು ಧಾರಾಳವಾಗಿ ಹೇಳಬಹುದು. ಪುನರ್ಜನ್ಮದ ಮತ್ತು ವಿಕಾಸದ ಈ ಉಪಪತ್ತಿಯನ್ನಾಧರಿಸಿ ವಿಷ್ಣುವಿನ ದಶಾವತಾರಗಳ ವ್ಯಾಖ್ಯಾನವನ್ನು ಕೆಲವರು ಹೀಗೆ ಮಾಡುತ್ತಾರೆ: ವಿಷ್ಣುವು ಮೊದಲು ಮೀನ, ಆಮೆ ಮತ್ತು ವರಾಹ ಹೀಗೆ ಪ್ರಾಣಿಗಳ ರೂಪದಲ್ಲಿ ಅವತರಿಸಿದನು; ಆನಂತರ ಪಶು ಮತ್ತು ಮಾನವ ಏಕತ್ರಿತವಾಗಿರುವ ನರಸಿಂಹನ ರೂಪದಲ್ಲಿ ಅವತಾರ ತಾಳಿದನು; ಆನಂತರ ವಾಮನನಾಗಿ (ಕುಬ್ಜ ಮಾನವ) ಜನ್ಮ ಧರಿಸುತ್ತಾನೆ; ಆನಂತರ ಬಂದವನು ಅನಾಚಾರಿ ಆಸುರೀ ಪ್ರಕೃತಿಯ ಮಾನವ ಪರಶು ರಾಮ; ಆ ಮೇಲೆ ದಿವ್ಯ ಪ್ರಕೃತಿಯ, ಮನಸ್ಸಿನಿಂದ ಮಹಾನ್ ವ್ಯಕ್ತಿಯಾಗಿ ರಾಮ ಜನ್ಮ ತಾಳಿದನು; ನಂತರ ಕೃಷ್ಣ, ಬುದ್ಧ, ಕಲ್ಕಿ ಬರುವರು. ಬುದ್ಧನು ಜಾಗೃತ ಅಧ್ಯಾತ್ಮಿಕ ಮಾನವನಾಗಿದ್ದನು. ಕೃಷ್ಣನು ಈ ಅನುಕ್ರಮದಲ್ಲಿ ಬುದ್ಧನಿಗಿಂತ ಮೊದಲೇ ಹೇಳಲ್ಪಟ್ಟಿದ್ದರೂ ಸ್ಥಾನಕ್ರಮ ದೃಷ್ಟಿಯಿಂದ ಅವನ ನಂತರದ ಹಾಗೂ ಒಂದು ದೃಷ್ಟಿಯಿಂದ ಕೊನೆಯ ಅವತಾರನಾಗಿದ್ದಾನೆ. ಏಕೆಂದರೆ ಕೃಷ್ಣನು ಪೂರ್ಣ ದಿವ್ಯ

ಮಾನವನಾಗಿದ್ದಾನೆ. ದಶಾವತಾರದಲ್ಲಿ ಬರುವ ದಶಮ ಮತ್ತು ಕೊನೆಯ ಅವತಾರವಾದ ಕಲ್ಕಿಯು ಕೃಷ್ಣನು ಆರಂಭ ಮಾಡಿದ ಕೆಲಸವನ್ನು ಪೂರ್ಣಗೊಳಿಸುವ ಅವತಾರವಾಗಿದ್ದಾನೆ. ನಮ್ಮ ಆಧುನಿಕ ಮನಸ್ಸಿಗೆ ಈ ರೀತಿಯ ಅವತಾರದ ಪರಿಕಲ್ಪನೆಯು ವಿಶ್ವಸನೀಯ ಅನಿಸಲಿಕ್ಕಿಲ್ಲ; ಆದರೂ ಸಹ ಗೀತೆಯ ಭಾಷೆಯ ಪ್ರಕಾರ ಅವತಾರವು ತನ್ನ ಸಲುವಾಗಿ ಯೋಗ್ಯವಾದ ಮಾನಸಯುಕ್ತ ಶರೀರವನ್ನು ತಾನೇ ತಯಾರಿಸಿಕೊಂಡು ಭೂಮಿಯ ಮೇಲೆ ಇಳಿದು ಬರುವುದು ಎಂದು ಹೇಳುವುದು ಗೀತೆಗೆ ಮಾನ್ಯವಿದೆ ಎಂದು ಊಹಿಸಬಹುದು. ತಥಾಪಿ ಗೀತೆಯು ಈ ರೀತಿ ಸ್ಪಷ್ಟವಾದ ಶಬ್ದಗಳಲ್ಲಿ ಎಲ್ಲಿಯೂ ಹೇಳಿಲ್ಲವಾದ್ದರಿಂದ ನಾವು ಈ ಪ್ರಶ್ನೆಯನ್ನು ಬೇರೊಂದು ರೀತಿಯಲ್ಲಿ ಬಿಡಿಸಲು ಕೂಡ ಪ್ರಯತ್ನಿಸಬಹುದು. ಪುನರ್ಜನ್ಮದ ಸಿದ್ಧಾಂತದ ಪ್ರಕಾರ ಜೀವವು ತನಗಾಗಿ ವಿಶೇಷ ಶರೀರವನ್ನು ಸೃಷ್ಟಿಸಿಕೊಳ್ಳುತ್ತದೆ, ಮತ್ತು ಈ ಶರೀರವನ್ನು ಸಾಮಾನ್ಯವೆನಿಸುವ ಮಾನವನ ಜನ್ಮದ ಪ್ರಕಾರವೇ ಧಾರಣ ಮಾಡುತ್ತದೆ. ಅಥವಾ ನಾಲ್ಕು ಮನುಗಳಲ್ಲಿ (ಚತ್ವಾರೋ ಮನವಃ। ಗೀ 10.6) ಯಾರಾದರೊಬ್ಬರು ಅವತಾರಕ್ಕಾಗಿ ಭೌತಿಕ–ಮಾನಸಿಕ ಶರೀರವನ್ನು ನಿರ್ಮಾಣ ಮಾಡುತ್ತಾರೆ, ಮತ್ತು ಅವತಾರವು ಆ ವಿಶೇಷ ಶರೀರವನ್ನೇ ಧರಿಸುತ್ತದೆ, ಪ್ರತ್ಯೇಕ ಮಾನವೀ ಮನಸ್ಸಿನ ಮತ್ತು ಮಾನವೀ ಶರೀರದ ಆಧ್ಯಾತ್ಮಿಕ ಪಿತೃತ್ವವು ನಾಲ್ಕು ಮನುಗಳ ಅಧಿಕಾರದಲ್ಲಿದೆ. ಇದು ಗೀತೆಯ ಅಭಿಪ್ರಾಯ (ಗೀ 10.6). ಗೂಢ ವಿದ್ಯೆಯ ಕ್ಷೇತ್ರದಲ್ಲಿ ಬಹಳ ದೂರದವರೆಗೆ ಹೋಗಿ ಈ ಕಲ್ಪನೆಯನ್ನು ನಾವು ಮಂಡಿಸಿದ್ದೇವೆ. ಆಧುನಿಕ ಬುದ್ಧಿಯು ಗೂಢ ವಿದ್ಯೆಯನ್ನು ಆದಷ್ಟು ದೂರದಲ್ಲಿರಿಸುವ ಪ್ರಯತ್ನ ಮಾಡುತ್ತದೆ, ಇಂಥ ತರ್ಕವನ್ನದು ಅಮಾನ್ಯ ಮಾಡುತ್ತದೆ. ಆದರೆ, ಅವತಾರದ ಪರಿಕಲ್ಪನೆಯನ್ನು ನಾವು ಒಂದು ಸಲ ಒಪ್ಪಿಕೊಂಡಿದ್ದೇವಾದ್ದರಿಂದ ಗೂಢ ವಿದ್ಯೆಯ ಕ್ಷೇತ್ರದಲ್ಲಿ ಪ್ರವೇಶ ಮಾಡದೇ ಇರಲು ಸಾಧ್ಯವಿಲ್ಲ. ಈಗಾಗಲೇ ನಾವದನ್ನು ಮಾಡಿದ್ದಾಗಿದೆ. ಈಗ ಸಾಕಷ್ಟು ದೃಢವಾದ ಹೆಜ್ಜೆ ಹಾಕುತ್ತ ಮುಂದೆ ಹೋಗಲೇಬೇಕಾಗಿದೆ. ಮತ್ತು ನಾವೀಗ ಅದನ್ನೇ ಮಾಡಿದ್ದೇವೆ.

ಇದಿಷ್ಟು ಅವತಾರವನ್ನು ಮತ್ತು ಅದರ ಪ್ರಕ್ರಿಯೆಯನ್ನು ಕುರಿತು ಗೀತೆಯು ಹೇಳುವ ಮಾತು. ಅವತಾರದ ಸಾಧ್ಯತೆ, ಅದರ ಪ್ರಕ್ರಿಯೆ ಇದನ್ನೆಲ್ಲ ವಿವರಿಸುವಾಗ ಯುಕ್ತಿವಾದವನ್ನು ಮಂಡಿಸುವ ಮತ್ತು ಅವತಾರ ತತ್ವದ ವಿರುದ್ಧ ಆಕ್ಷೇಪಗಳನ್ನು ಎತ್ತುವ ಆಧುನಿಕ ಮಾನವನ ಮನಸ್ಸು ಇವನ್ನೆಲ್ಲ ಇಷ್ಟು ವಿವರವಾಗಿ

ಪ್ರಸ್ತಾಪಮಾಡುವುದು ಅವಶ್ಯವಿದ್ದುದರಿಂದಲೇ ಹಾಗೆ ಮಾಡಿದ್ದಾಯಿತು. ಭೌತಿಕ ಅವತಾರದ ವಿಷಯವಾಗಿ ಗೀತೆಯೇನೂ ಬಹಳ ವಿವರಗಳನ್ನು ನೀಡುವುದಿಲ್ಲ; ಆದರೂ ಸಹ ಅದರ ಕ್ರಮಬದ್ಧ ಬೋಧನೆಯಲ್ಲಿ ಅವತಾರ ಮತ್ತು ಅದರ ಭೌತಿಕ ಶರೀರದ ಸ್ಥಾನವು ಬಹಳಷ್ಟು ಮಹತ್ವದ್ದಿದೆ. ಗೀತೆಯ ಬೋಧನೆಯ ಚೌಕಟ್ಟು ಅವತಾರದ ಪರಿಕಲ್ಪನೆಯ ಪ್ರತ್ಯಂತರವೇ ಎಂದು ಹೇಳಿದರೆ ತಪ್ಪೇನಿಲ್ಲ. ಏಕೆಂದರೆ ಅವತಾರವು ಇಲ್ಲಿ ವಿಭೂತಿ ಪುರುಷನನ್ನು ಆಧ್ಯಾತ್ಮಿಕದ ಎತ್ತರಕ್ಕೆ ಎತ್ತರಿಸುವ ಕೆಲಸವನ್ನೇ ಮುಖ್ಯವಾಗಿ ಮಾಡುತ್ತದೆ. ವಿಭೂತಿ ಪುರುಷ ಅಂದರೆ ಮಾನವತೆಯ ಅತ್ಯುನ್ನತ ಶಿಖರವನ್ನು ಮುಟ್ಟಿದ, ದಿವ್ಯ ಜನ್ಮ ಪಡೆಯಲು ಮತ್ತು ದಿವ್ಯ ಕರ್ಮಗಳನ್ನು ಮಾಡಲು ಯೋಗ್ಯತೆ ಪಡೆದ ಸಾಧಕ. ಅರ್ಜುನನು ಇಂಥ ವಿಭೂತಿ ಪುರುಷನೇ. ಈಶ್ವರನ ಆಂತರಿಕ ಅವತರಣವು ಇಂಥ ವಿಭೂತಿ ಪುರುಷನಾದ ಮಾನವನ ಆತ್ಮವನ್ನು ತನ್ನೆತ್ತರಕ್ಕೆ ಎತ್ತರಿಸುವ ಕಾರ್ಯವನ್ನು ಮಾಡಲೆಂದೇ ಆಗಿರುತ್ತದೆ. ಇಲ್ಲಿ ಆಂತರಿಕ ಕ್ರಿಸ್ತ, ಕೃಷ್ಣ, ಬುದ್ಧ ಇವರ ಪಾತ್ರವೇ ಮುಖ್ಯ. ಆದರೆ ಆಂತರಿಕ ವಿಕಾಸಕ್ಕೆ ಬಾಹ್ಯ ಜೀವನ ಕೂಡ ಅತಿ ಮಹತ್ವದ್ದಿರುವಂತೆಯೇ ಆಧ್ಯಾತ್ಮಿಕ ಪ್ರಕಟನೆಯಲ್ಲಿ ಬಾಹ್ಯ ಅವತಾರವೂ ಸಹ ಅತಿ ಮಹತ್ವದ್ದೇ ಆಗಿರುತ್ತದೆ. ಮಾನಸಿಕ ಹಾಗೂ ಭೌತಿಕಗಳ ಸಾಂಕೇತಿಕ ಪರಿಪೂರ್ಣತೆಯು ಅಂತರಂಗದ ವಿಕಾಸಕ್ಕೆ ಸಹಾಯ ಮಾಡುವುದು. ಅದಾದನಂತರ ಈ ಸಂವರ್ಧಿತ ಆಂತರಿಕ ಸತ್ಯವು ಬಾಹ್ಯದಲ್ಲಿ, ಮನಃಶರೀರಗಳಲ್ಲಿ ಹೆಚ್ಚು ಹೆಚ್ಚು ಪ್ರಕಟವಾಗಲು ಆರಂಭವಾಗುವುದು. ಇವೆರಡರ ನಡುವೆ ಆಧ್ಯಾತ್ಮಿಕ ಸತ್ಯ ಮತ್ತು ಮಾನಸಿಕ ಹಾಗೂ ಭೌತಿಕ ಅಭಿವ್ಯಕ್ತಿ ಇವುಗಳ ಮಧ್ಯೆ ಪರಸ್ಪರ ಸಂವಹನ, ವಿನಿಮಯ, ಕ್ರಿಯೆ–ಪ್ರತಿಕ್ರಿಯೆಯು ನಿರಂತರವಾಗಿ ನಡೆಯುತ್ತಲೇ ಹೋಗಿ ಮಾನವತೆಯಲ್ಲಿ ದೈವತ್ವ ಪ್ರಕಟವಾಗುವುದು ಮೊದಲು ರಹಸ್ಯವಾಗಿ ಆನಂತರ ಪ್ರತ್ಯಕ್ಷ ಪ್ರಕಟವಾಗಿ ಚಿರಂತನ ರೂಪದಲ್ಲಿ ಶಾಶ್ವತ ಪ್ರಕ್ರಿಯೆಯಾಗಿ ಸದಾ ಜಾರಿಯಲ್ಲಿರುವುದು.

(ಸಶೇಷ)

---

* ಗೌತಮ ಬುದ್ಧನ ಕಥೆಗಳಲ್ಲಿ ಆತನ ತಾಯಿಯ ಹೆಸರು ಮಾಯಾದೇವಿ ಎಂದಿದೆ; ಅಂದರೆ ಅವನು ಪರಾ ಪ್ರಕೃತಿಯ ಪುತ್ರನಾಗಿದ್ದನೆಂಬುದು ಸ್ಪಷ್ಟವಾಗುವುದು. ಹಾಗೆಯೇ ಏಸೂ ಕ್ರಿಸ್ತನ ತಾಯಿ ಮೇರಿ ಅಕ್ಷತ ಕನ್ಯೆ ಅಥವಾ ಕುಮಾರಿ ಮಾತಾ ಆಗಿದ್ದಳೆಂದು ಹೇಳುವುದು ಕೂಡ ಪರಾ ಪ್ರಕೃತಿಯ ಪುತ್ರ ಎಂಬುದನ್ನೇ ಸಾಬೀತು ಪಡಿಸುತ್ತದೆ.

# ತ್ರಾಟಕ ಸೂರ್ಯ

## 2

**– ಪುಟ್ಟು ಕುಲಕರ್ಣಿ**

ಪದ್ಮಾ ನದಿಯ ಸ್ಟೀಮರ್ ಪ್ರಯಾಣದ ಮೂಲಕ ಮತ್ತೆ ಬರಿಸಾಲ ಕಡೆಗೆ ಮರಳಿದೆ.ಪದ್ಮಾ ಗಂಗಾನದಿಯ ಉಪನದಿ. 221 ಮೈಲುಗಳ ಪಯಣದ ಕೊನೆಯ ಹಂತದಲ್ಲಿ, ಮೇಘನಾ ನದಿಯೊಂದಿಗೆ ಸಂಗಮಗೊಂಡು, ಬಂಗಾಲ ಉಪ ಸಾಗರವನ್ನು ಸೇರುತ್ತಿದೆ. ನಾಲ್ಕೈದು ವರ್ಷಗಳ ಹಿಂದೆಯೇ 'ವಂಗ–ಭಂಗ'ದಿಂದಾಗಿ ಇದೀಗ ಪೂರ್ವ–ಬಂಗಾಳದಲ್ಲಿ ಎಂದು ಹೇಳಬೇಕಾಗಿದೆ. ಆಡಳಿತಾತ್ಮಕವಾಗಿ, ನಿಯಂತ್ರಣದ ಸುಲಭ ಸಾಧ್ಯತೆಗಾಗಿ, ಆಡಳಿತದ ವಲಯಗಳು ನಿರ್ಮಾಣ–ವಾಗುವದೇನೂ ಹೊಸತಲ್ಲ, ಆದರೆ, ಸಾಂಸ್ಕೃತಿಕ ಏಕತೆಯನ್ನೇ ಚೂರು ಚೂರು ಮಾಡುವ ಈ 'ವಂಗ–ಭಂಗ'ದಿಂದಾಗಿಯೇ, ಬಡೋದಾ ಸಂಸ್ಥಾನವನ್ನು ಬಿಟ್ಟು ಬಂದದ್ದು, ಇದು ಮತ್ತೆ ಒಗ್ಗೂಡುವದೇ? ಅಖಂಡ ವಂಗ ಪ್ರದೇಶವಾಗುವದೇ ಎನ್ನುವ ಪ್ರಶ್ನೆ ಉದ್ಭವಿಸಿತು. ಏನೂ ಅರಿಯದ ಮುಗ್ಧತೆಯಲ್ಲಿಯೋ ಅಥವಾ ಏನೂ ಮಾಡಲಾಗುವದಿಲ್ಲ ಎನ್ನುವ ಮೌಢ್ಯತೆಯಲ್ಲಿಯೋ, ಜನ ಸಮುದಾಯ ಮಾತ್ರ, ಚೈತನ್ಯರಹಿತ ಜೀವನ ಶೈಲಿಯಲ್ಲಿ, ಇದೇ ನದಿಯಲ್ಲಿ ದೋಣಿಯಲ್ಲಿ, ಸಣ್ಣಪುಟ್ಟ ಹಡಗುಗಳಲ್ಲಿ ಹಾಗೂ ಆಗಾಗ ಆಗಾಗ ಬರುತ್ತಿರುವ ಅಬ್ಬರದ ಶಬ್ದದ ಸ್ಟೀಮರಗಳಲ್ಲಿ –ಸತ್ತ ಮೀನಿನ ಹಾಗೆ– ತೇಲುತ್ತ ಸಾಗುತ್ತಿವೆ. ಪ್ರಯಾಣದುದ್ದಕ್ಕೂ ಮನಸ್ಸಿನಾಳದಲ್ಲಿ ಈ ಯೋಗದ ಫಲಿತದ ಕುರಿತು ಸೂಕ್ಷ್ಮವಾದ ಸಂಚಲನ ಅನುಭವಕ್ಕೆ ಬರುತ್ತಿದೆ. ತಾಂತ್ರಿಕ ವಿಧಾನದಲ್ಲಿ ನಾನೀಗ ಈ ಹಂತಕ್ಕೆ ಬಂದು, ಈ ಅಮಾವಾಸ್ಯೆ ದಿನ, ಮತ್ತೊಂದು ಆರೋಹಣದ ಪಥವನ್ನು ತಲುಪಬೇಕಿದೆ. ಲೇಲೆ ತೋರಿಸಿದ್ದ ಪಥಕ್ಕಿಂತ ಭಿನ್ನವಾಗಿ, ಅಂದರೆ ಶೀಘ್ರಾತಿ ಶೀಘ್ರವಾಗಿ ಈ ಅನುಭೂತಿಯನ್ನು ಪಡೆಯುವದರ ಕುರಿತು, ಯಾವುದೇ ಒತ್ತಡವೂ ನನಗಿರಲಿಲ್ಲ, ಅಳಿದುಳಿದ ಅಹಂಕಾರದಿಂದಾಗಿಯೇ ಈ ರೀತಿಯ ವಿಚಾರಗಳು ಬರುತ್ತಿವೆಯೋ ಎಂದೆನಿಸಿ, ಆ ವಿಚಾರವನ್ನೂ ಬಿಟ್ಟೆ, ಅಲೀಪುರ ಸೆರೆಮನೆಯಿಂದ ಮುಕ್ತನಾಗಿ ಒಂದು ತಿಂಗಳಾಗುತ್ತ ಬಂದಿದೆ, ಅಲ್ಲಿದ್ದಾಗಲೇ ನನ್ನ ಮುಂದಿನ ಮಾರ್ಗವನ್ನು ನಿಚ್ಚಳವಾಗಿಯೇ ವಾಸುದೇವ ತೋರಿಸಿದ್ದಾನೆ. ಆ ಪಥದಲ್ಲಿ ಸಾಗುವದಷ್ಟೇ ನನ್ನ

ಕಾರ್ಯ. ಇದನ್ನೇ ಉತ್ತರಪಾಡಾ ಭಾಷಣದಲ್ಲಿಯೂ ಹೇಳಿದ್ದೆ. ಸೆರೆಮನೆಯಿಂದ ಹೊರಗೆ ಬಂದ ನಂತರ ನನ್ನ ಹೋರಾಟ ತೀವ್ರವಾಗುತ್ತದೆಂದು ಸಮುದಾಯದ ಆಶಯವಿತ್ತೇನೋ.. ಅದನ್ನು ಸಭೆಯಲ್ಲಿ ವ್ಯಕ್ತಪಡಿಸಿದ್ದರು. ಆದರೆ ನನ್ನ ನಿರ್ಧಾರ ಅಚಲವಾಗಿತ್ತು. ಅರ್ಧಕ್ಕೆ ನಿಂತಿರುವ ಯೋಗ–ಸಾಧನೆಯನ್ನು ತೀವ್ರವಾಗಿಯೇ ಪೂರ್ಣಗೊಳಿಸಿಕೊಳ್ಳಬೇಕಿದೆ. ಇದನ್ನೆಲ್ಲವನ್ನೂ ಹೇಳಿದರೆ, ಅವಧಾನದಿಂದ ಆಲಿಸುವ ಮನಸ್ಸುಗಳು ಇಲ್ಲ, ಕೇವಲ ಬಂಗಾಳ ಮಾತ್ರವಲ್ಲ, ಇಡೀ ದೇಶವೇ ವಿಲಕ್ಷಣ ಸ್ಥಿತಿಯಲ್ಲಿ, ಪ್ರಕ್ಷುಬ್ದಗೊಂಡಿದೆ. ಆಡಳಿತವಾದರೂ ಜನರನ್ನು ನಿಯಂತ್ರಿಸಲಾಗದೇ ದಂಡ ನೀತಿಯನ್ನೇ ಅನುಷ್ಠಾನಗೊಳಿಸಿ, ಜೇಲು ಭರ್ತಿ ಮಾಡುತ್ತಿದ್ದಾರೆ. ಖುದಿರಾಮನ ನೇಣು ಶಿಕ್ಷೆಯಿಂದಂತೂ ಸಮಾಜ ತಲ್ಲಣಗೊಂಡಿದ್ದು, ಇನ್ನೂ ಅದರಿಂದ ಹೊರ ಬಂದಿಲ್ಲ. ಇವೆಲ್ಲಕ್ಕೂ ಸಮಾಧಾನ ಮಾಡಿ, ನಾನು ಮುಂದೆ ನಿಂತು ದಾರಿಯನ್ನು ನಿರ್ದೇಶಿಸಬೇಕು ಎನ್ನುವದೇ ಅವರ ಇಚ್ಛೆಯಾಗಿತ್ತು. ನನಗೆ ಮಾತ್ರ ನನ್ನ ಗುರಿ ಮತ್ತು ಪಥ ನಿಗದಿ ಮಾಡಿಕೊಂಡಿದ್ದೆ. ಅದರಂತೆ ಸಾಗುವದೇ ನಿಯತಿಯೂ ಇದ್ದಂತೆ ಕಾಣುತ್ತದೆ. ಜೇಲಿನಿಂದ ಹೊರ ಬಂದ ಮೇಲೆ, ಅಲ್ಲಿದ್ದ ಏಕಾಂತದ ಅನುಭಾವದ ಆನಂದದಿಂದ ನಾನು ಪೂರ್ತಿ ಹೊರಗೆ ಬಂದಿರಲಿಲ್ಲ. ಈಗಲೂ ಹೆಚ್ಚು ಸಮಯ ಏಕಾಕಿಯಾಗಿಯೇ ಇರಲು ಪ್ರಯತ್ನಿಸದೆ. ಬಹುಶಃ, ಉಳಿದವರೂ ಸಹಿತ, ಸ್ವಲ್ಪ ಸಮಯ ಸುಧಾರಿಸಿಕೊಳ್ಳಲಿ – ದೀರ್ಘ ಕಾಲದ ಆ ಏಕಾಂತದಿಂದ ಹೊರಬರಲು ಸಮಯ ಬೇಕು ಎಂದುಕೊಂಡು, ತೀರ ಸಂಕ್ಷಿಪ್ತವಾಗಿಯೇ ತಮ್ಮ ಸಂಭಾಷಣೆ ಮುಗಿಸಿ ಹೊರಟು ಬಿಡುತ್ತಿದ್ದರು.

ಈ ಎಲ್ಲ ಬಂಧನಗಳಿಂದ ಕೆಲವು ದಿನವಾದರೂ ದೂರ ಇರಬೇಕೆಂದು, ಕಲಕತ್ತೆಯಿಂದ ದೂರ ಇರಬೇಕೆಂದು, ಯೋಚಿಸುತ್ತಿರುವಾಗಲೇ, ಬರಿಸಾಲ ಸ್ಮರಣೆಗೆ ಬಂದಿತು. ಸರಿ ಇದೇ ಸರಿಯಾದ ಸ್ಥಳ, ಅಲ್ಲಿರುವ ಕಾಳಿಮಾತೆಯ ದೇವಾಲಯದಲ್ಲಿಯೇ ನನ್ನ ಯೋಗ ಸಾಧನೆಯನ್ನು ಮುಂದುವರೆಸುವಾ ಎಂದುಕೊಂಡು ಹೊರಟು ಬಂದಿದ್ದೆ.

ಇಲ್ಲಿಗೆ ಬಂದ ಮೇಲೆ, ಈ ದಿನ ಅನುಷ್ಠಾನಗೊಳಿಸಬೇಕಾದ ವಿಧಾನದ ಕುರಿತು, ಅದನ್ನು ನಾನೇ ಮಾಡಿಕೊಳ್ಳಬೇಕೋ ಎನ್ನುವ ಪ್ರಶ್ನೆ ಉಳಿಯಿತು. ಬಡೋದಾ ಸಂಸ್ಥಾನದ ರಾಜಾಶ್ರಯವನ್ನು ಬಿಟ್ಟು ಬಂದ ಮೇಲೆ, ಸಹಜವಾಗಿಯೇ ಬಳಗದವರಲ್ಲಿ ನನ್ನ ಬಗೆಗೆ ನಿರಾಶೆ ಮೂಡಿದೆ. ಆದರೆ ಅವರ

ನಿರಾಶೆಯನ್ನು ಹೋಗಲಾಡಿಸುವ ಸಲುವಾಗಿ ನಾನು ಬಂದಿದ್ದೇನೆಯೇ? ಎಂದುಕೊಂಡೆ. ಏನೇ ಆಗಲೀ ಹೇಗೂ ಈ **ತ್ರಾಟಕ ಸೂರ್ಯನ ಸಾಕ್ಷಾತ್ಕಾರಕ್ಕೆ** ಬೇಕಾದ ಯಂತ್ರವೆಂದರೆ, ಕೇವಲ ಒಂದು ಪಣತಿ ಮಾತ್ರ. ಅದನ್ನು ಬೆಳಗಿಸಿ, ನನ್ನೆದುರಿಗೇ ನಾಲ್ಕು–ಐದು ಅಡಿ ದೂರದಲ್ಲಿ ಪ್ರತಿಷ್ಠಾಪಿಸಿದರಾಯಿತು. ಆ ಜ್ಯೋತಿಯನ್ನೇ ಒಂದು ನಿರ್ದಿಷ್ಟ ದೂರದಲ್ಲಿ, ನೇರವಾಗಿ ದಿಟ್ಟಿಸುತ್ತ, ಏಕಾಗ್ರಚಿತ್ತವಾಗುತ್ತಿದ್ದಂತೆಯೇ, ಮಸ್ತಿಷ್ಕದಲ್ಲಿರುವ ವಲಯಗಳಲ್ಲಿನ ಸಂಚಲನಕ್ಕೂ ಹಾಗು ಜಾಗ್ರತಪೂರ್ಣವಾದ ಮನೋಭೂಮಿಕೆಯಲ್ಲಿ ದಿಟ್ಟಿಸುತ್ತಿರುವ ಕ್ರಿಯೆಗೆ ಪರಸ್ಪರ ಸೂಕ್ಷ್ಮ ಸಂಬಂಧಗಳು ಗೋಚರಿಸತೊಡಗಿದವು.

ಇದು ಗೊತ್ತು–ಗುರಿ ಇರದ ಪಯಣವಂತೂ ಅಲ್ಲವೇ ಅಲ್ಲ. ಈ ಕಾಲದ ಅರ್ಣವದ ಮೇಲೆ ತೇಲಿ ತೇಲಿ ಯಾನ ಮಾಡಲು ನಿರ್ಧರಿಸಿದಾಗಲೇ, ಗಮ್ಯವೂ ನಿಗದಿಯಾಗಿರುತ್ತದೆ ಅಲ್ಲವೇ? ಅದನ್ನು ಪಡೆದುಕೊಳ್ಳಲು, ಸಫಲತೆಯನ್ನು ಕಾಣಲು ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುವದು ಆಯಾ ಹಂತದಲ್ಲಿ ಇರಬೇಕಾದ ಪ್ರಯತ್ನಗಳಲ್ಲಿ ಮತ್ತು ಅದನ್ನು ಪಡೆದುಕೊಳ್ಳುವ ಅಭೀಪ್ಸೆಯನ್ನು ಆಧರಿಸಿದೆ ಎನ್ನುವದು ಖಚಿತವಾಗಿದೆ. ಭಾರತಕ್ಕೆ ಮರಳಿ ಬಂದ ಮೇಲೆ, ಯೋಗಾಭ್ಯಾಸವನ್ನು ಪ್ರಾರಂಭ ಮಾಡುವ ಮುನ್ನ, ಗುರುಗಳನ್ನು ಅರಸುತ್ತಿದ್ದಾಗ ನಾನು ಹೇಳಿದ್ದು ಇದನ್ನೇ ಅಲ್ಲವೇ?. 'ನನ್ನ ಕಾವ್ಯ ಮತ್ತು ದೇಶಭಕ್ತಿಯ ಕರ್ತವ್ಯಗಳಿಗೆ ಯಾವುದೇ ರೀತಿಯಲ್ಲಿಯೂ ವಿಚಲನೆಗೊಳಿಸದ ಹಾಗೆ ಇರುವ 'ಯೋಗ'ವನ್ನು ಕಲಿಯುತ್ತೇನೆ'. ಇದೀಗ ಅದನ್ನು ಮತ್ತೆ ಪ್ರಗತಿಗೊಳಿಸಕೊಳ್ಳಬೇಕಿದೆ.

ಮೃಣ್ಮಯದ ಜೀವ–ಜೀವನವನ್ನು ಪರಿವರ್ತಗೊಳಿಸಿಕೊಂಡು ದಿವ್ಯ ಜೀವನದ ಭವ್ಯ ಸಾರವನ್ನು ಸುಶ್ರಾವ್ಯಗೊಳಿಸಿಕೊಂಡು, ಆತ್ಮದ ಈ ತುಡಿತದಭಿಲಾಷೆಯ ಸ್ಪಂದವನ್ನು ಸತತದಲ್ಲೂ ಹೊಂದಿ, ಈ ಜಗವನ್ನು ಮತ್ತು ಮನುಕುಲವನ್ನು ಉಳಿಸಿ, ವಿಕಸನದ ಅಲೆಯಲ್ಲಿ ಕರೆದೊಯ್ಯುವ ಸಾಧನೆಗೆ ಬೇಕಾದದ್ದು ಈ ಹಂತದ "ಪ್ರಾರ್ಥನೆ". ಇದೇ 'ಸಾಧಕನ ಪ್ರಾರ್ಥನೆ' ಇಲ್ಲಿ ಸಾಧಕನ ಜೀವನವೇ (ಜೀವನ ವಿಧಾನವು) ಪ್ರಾರ್ಥನೆಯಾಗಿರುತ್ತದೆ. 'ಭಾವ ಬೆತ್ತಲೆಯಾಗಿ ಮನ ದಿಗಂಬರವಾದಾಗ ಆತ್ಮ ವಿಶ್ವಂಭರ'ವಾಗುತ್ತದೆ ಎಂದಲ್ಲವೇ ಆಯೋಕ್ತಿ ಇರುವದು? ಯಾರೆಲ್ಲಾ ತಮ್ಮ ತಮ್ಮ ಹೃದಯದಲ್ಲಿ ಪರಮ ಪರಿಶುದ್ಧ ಭಾವದಲ್ಲಿ ಆ ದೇವನಿಗೆ ನೆಲೆಯನ್ನು ಕೊಟ್ಟಿರುತ್ತಾರೆಯೋ, ಅವರ ಚಿಂತಗಳೆಲ್ಲವೂ "ಪ್ರಾರ್ಥನಾ ಸದೃಶವೇ"

ಆಗಿರುತ್ತವೆ; ಕಾಲಾತೀತವಾಗಿರುತ್ತವೆ. ಏಕೆಂದರೆ ಆ ಚಿಂತನೆಗಳಿಗೆ ದೈವಕೃಪೆಯು ಇರುತ್ತದೆ. ಈ ಸ್ವರ್ಗಸೀಮೆಯ ಚಿನ್ಮಯದ ತೋಷವನ್ನು ಪ್ರತಿಫಲನಗೊಳಿಸಲೆಂದು ಹಾಗೂ ವಿಶ್ವ ಚೇತನದ ವಲಯದೆದೆಯಿಂದ ಅವತರಿಸಿ ಬರುವದನ್ನು, ಜೊತೆಗೆ ಅದು ಸಹವರ್ತಿ–ಯಾಗಿರುತ್ತದೆ. ಈ ಚಿತ್ಪ್ರಭೆಯ ಮಂಡಲದಲ್ಲಿ ವಿಶ್ವಶಕ್ತಿಯನ್ನು ಕಾಣುವದನ್ನು 'ಪ್ರತ್ಯಭಿಜ್ಞಾ' ಹಂತದಲ್ಲಿ ಅನುಷ್ಠಾನಗೊಳಿಸುವದೇ ಈ 'ಪ್ರಾರ್ಥನೆಯ ಸಾಧನಾ ವಿಶೇಷ'ವಾಗಿದೆ. ಇದು ಸುಪ್ತ ಚೈತನವು ಸಚ್ಚಿದಾನಂದ ಸ್ವರೂಪದ ಸಮ್ಯಕ್ಸಮಾಧಿಯಲ್ಲಿ ವಿಶ್ವಶಕ್ತಿಯ ಜೊತೆಗೆ ಸ್ಪಂದಗೊಳ್ಳುವ ಪಥವಾಗಿದೆ. ನಮ್ಮ ದೇಹದಲ್ಲಿ ಅಭಿಧಮನಿ ನಾಳದಲ್ಲಿ ಪ್ರವಹಿಸುವ ರಕ್ತವು ಹೇಗೆ ಹೃದಯದಲ್ಲಿ ಹೊಕ್ಕು ಪರಿಶುದ್ಧಗೊಂಡು ಅಪಧಮನಿಗಳ ಮೂಲಕ ಪ್ರಾಣರಸವಾಗುತ್ತದೆಯೋ, ಅದೇ ರೀತಿಯಲ್ಲಿ ಸಾಧನಾ ಪಥದ ಪ್ರಾರ್ಥನೆಯೂ ಇರುತ್ತದೆ.

ಪಶ್ಯಂತಿ ಹಂತದಲ್ಲಿ ಉದಿಸುವ ತನ್ನದೇ ಭಾವಗಳನ್ನು ಆಲಿಸುತ್ತಾ, ಅದು ಪ್ರತಿಬೋಧದ ದೀಪ್ತಿಯ ಉಲಿತವಾಗಿರುವದನ್ನು ಅರಿತು, ತನ್ನ ಮನೋಕೋಶ–ಗಳಲೆಲ್ಲ ಅವುಗಳನ್ನೇ ತುಂಬಿಕೊಂಡು ವಿಕಸನದ ಹಂತದಲ್ಲಿ ಮುಂದುವರೆಯುವಲ್ಲಿ ಇದು ಮೊದಲನೆಯ ಹಂತವಾಗಿದೆ. ಆ ನಾದದ ಶ್ರುತಿಗೆ ಶ್ರುತಿಗೊಂಡು, ಧ್ವನಿಗೆ ಪ್ರತಿಧ್ವನಿಯಾಗಿ ಅನುರಣನಗೊಂಡು, ಆವರ್ತಗೊಳ್ಳುತ್ತಾ ಸಾಗುವ ಅನುಭಾವದ ಪಥವು ಇದಾಗಿದೆ. ಆ ಭವ್ಯ ದೇವಪ್ರಸ್ಥಾನದಿಂದ ಪಡಿಮೂಡಿಕೊಂಡು ಬಂದ ಆ ವಾಗ್ಬೀಜಗಳು ವಾಣಿ–ನಾದದಲ್ಲಿ ಹ್ಲಾದುನುಹ್ಲಾದವನ್ನು ತರುತ್ತವೆ. ಘನಮೌನದ ಅಂತರಾಳದ ನಿರ್ಮಾಯ ತಾಣದಲ್ಲಿ ಚಿಂತನವು ವಿಕಸನಗೊಳ್ಳುತ್ತ ಪರಿಪೂರ್ಣತೆಯ ಕಡೆಗೆ ಚಲಿಸುತ್ತಾ ಇರುತ್ತದೆ. ಭೌತಿಕ ದೇಹದ ವ್ಯವಸ್ಥೆಯ ಕುಂಡಲಿಯೂ ಸಹಿತ ಅನುಸ್ಪಂದನ ಹೊಂದಿ, ಪ್ರಜ್ಞಾನ ಸ್ಪರ್ಶಕ್ಕೆ ಹೃದಯದ ಸ್ಪಂದವು ಸಮ್ಮಿಲಿತಗೊಂಡಿರುತ್ತದೆ. ಅಲ್ಲಿ ಅನಂತತೆ ಮತ್ತು ಚಿನ್ಮಯದ ಘನಪ್ರಶಾಂತವಾದ ಕಾಂತಿ ಜ್ಯೋತಿಯಲ್ಲದೇ ಬೇರೇನೂ ಇರುವದಿಲ್ಲ.

ಈ ಹಂತಕ್ಕಿಂತ ಮೊದಲು ಇರುವ ನೇತಿ, ಧೌತಿ, ನೌಲಿ, ಬಸ್ತಿ, ಕಪಾಲಭಾತಿ ಆಮೇಲೆ ತ್ರಾಟಕ. ನಾನು ಈಗ ತ್ರಾಟಕ ಹಂತದಲ್ಲಿದ್ದೇನೆ. ಮೊದಲಿನ ಹಂತಗಳೆಲ್ಲವನ್ನೂ ಶೀಘ್ರವಾಗಿಯೇ ಮುಗಿಸುವಂತಾದುದು ಒಂದು ಸುಯೋಗವೇ ಆಗಿದೆ, 1905 ರಲ್ಲಿಯೇ ಅಂದರೆ ಬಡೋದಾದಲ್ಲಿ ಇದ್ದಾಗಲಲ್ಲವೇ ಪ್ರಥಮ ಹೆಜ್ಜೆ ಪ್ರಾರಂಭವಾದದ್ದು, ಆದರೆ ಮಧ್ಯದ ಒಂದು ವರ್ಷದ ಸೆರೆವಾಸ, ನನ್ನ ಯಾನವನ್ನು ವಿಳಂಬಗೊಳಿಸಿತು, ಅಥವಾ ಅದೂ ಪೂರ್ವನಿರ್ಧರಿತವೋ?

ಎಂದುಕೊಂಡೇ ಪ್ರಯಾಣ ಮುಗಿಸಿದ್ದೆ. ಈ ಷಟ್ಕ್ರಿಯಾ ಹಂತಗಳ ಜೊತೆಗೆ ಮತ್ತೆ ಎರಡು ಶುದ್ಧೀಕರಣದ ಹಂತಗಳನ್ನು – ಚಕ್ರೀ ಮತ್ತು ಗಜಕರಣೀ – ಎಂದು 'ಹಠ ರತ್ನಾವಳಿ' ಭಾಷ್ಯ ಪ್ರದೀಪಿಕೆಯಲ್ಲಿ ಹೇಳುತ್ತಿದ್ದರೂ, ಈ ಮೊದಲಿನ ಆರು 'ಷಟ್ಕ್ರಿಯಾ ಕರ್ಮ'ಗಳೇ ಸುಲಭವಾಗಿವೆ, ಅದೇ ಪರಂಪರೆ ಹೆಚ್ಚು ಪ್ರಚಲಿತದಲ್ಲಿಯೂ ಇದೆಯಲ್ಲವೇ? ಎಂದು ಪರಿಹಾರ ಕಂಡಿತು. ಅದನ್ನೂ ಸಹಿತ ಶೀಘ್ರವಾಗಿಯೇ ಸಂಪನ್ನಗೊಳಿಸಬಹುದಾದ ಪಥವೂ ಕಾಣಿಸುತ್ತಿದೆ.

ಪಣತಿಗೆ ತೈಲವನ್ನು ಎರೆದು, ಜ್ಯೋತಿಯನ್ನೂ ಊಡಿ, ಕೋಣೆಯಲ್ಲಿ ಪ್ರತಿಸ್ಥಾಪಿಸಲಾಯಿತು. ಪದ್ಮಾಸನವೋ ಅಥವಾ ಸೂಕ್ತ ಆಸನವೋ, ಒಟ್ಟಿನಲ್ಲಿ ದೇಹದ ಯಾವುದೇ ಅಂಗವೂ ಧ್ಯಾನಾವಸ್ಥೆಯಲ್ಲಿದ್ದಾಗ, ಅನಾನುಕೂಲವಾಗದ ಹಾಗಿರುವ ಆಸನದಲ್ಲಿ, ಧ್ಯಾನಸ್ಥನಾಗುವದು ಸಿದ್ಧಿಸಿದೆ. ಶ್ವಾಸೋಚ್ಛ್ವಾಸವನ್ನು ನಿಯಂತ್ರಿತಗೊಳಿಸಿ, ಪ್ರಾಣಾಯಾಮದ ವಿನ್ಯಾಸದ ಮಾದರಿಯಲ್ಲಿಯೇ, ನೇರವಾಗಿ ಆ ಜ್ಯೋತಿಯನ್ನೇ ದಿಟ್ಟಿಸತೊಡಗಿದೆ. ಕೋಣೆಯಲ್ಲಿ ನಿತಾಂತ ಮೌನ. ಮನೆಯಲ್ಲಿಯೂ ಪ್ರಶಾಂತ ಮೌನ. ಪ್ರಕೃತಿಯೂ ಸಹಿತ ಗಾಢ ಮೌನದಲ್ಲಿ ಸಮಾಧಿಯಲ್ಲಿದ್ದಂತೆ ದೃಷ್ಟವಾಗುತ್ತಿದೆ. ನೀರವ ಮೌನದ ಅಂತರಾಳದಲ್ಲಿ, ವಿಶ್ವನಾದದ ನಿತಾಂತ ನಿನಾದದ ಸೂಕ್ಷ್ಮ ಧ್ವನಿಯೊಂದು ಅವಿರತವಾಗಿಯೇ ಇದ್ದರೂ, ಅದು ಮೌನದ ಸಮಾಧಿಯನ್ನು ಭಂಗಗೊಳಿಸುವದಿಲ್ಲ. ದೇಹದ ಒಂದೊಂದು ಉಸಿರೂ, ಈ ಮೌನದ ಅಂತರಾಳದ ಜೊತೆಗೆ ಸ್ಪಂದಗೊಳ್ಳತೊಡಗಿತು. ಅದೇ ಸ್ಥಿತಿಯಲ್ಲಿಯೇ ತಲ್ಲೀನನಾಗುತ್ತಿದ್ದಂತೆಯೇ, ಇದ್ದಕಿದ್ದಂತೆ ಜ್ಯೋತಿಯೊಂದು ಮಿನುಗಿತು. ಈಗಿದೋ **'ತ್ರಾಟಕ ಸೂರ್ಯ'**. ದೀರ್ಘ ವೃತ್ತಾಕಾರದ ಸ್ವರೂಪದಲ್ಲಿ ನೀಲ ವರ್ಣದ ಸೂಕ್ಷ್ಮ ಸೂರ್ಯ ಕಾಂತಿಯ ಬಿಂಬ. ತಿಳಿಹಳದಿ ವರ್ಣದಾ ಪರಿಪ್ರೇಕ್ಷ್ಯದಲ್ಲಿ ಕಡುಕೆಂಪು ವರ್ಣದಾ ಬಾಗುರೇಖೆಗಳು. ನೇರಳೆಯ ಹರಿತ ತೀಕ್ಷ್ಣತೆ. ಕಡುರಕ್ತ ವರ್ಣದ ತೀಕ್ಷ್ಣತೆ. ಚಿತ್ತದಿಂದಲೇ ಬುದ್ಧಿಯೊಳಗೆ ಸಂಯೋಗ ಹೊಂದಲು ಆರೋಹಗೊಂಡ ಧ್ವನಿ. ಕಾಮಾನಂದವು ತನ್ನಿಂದ ತಾನೆ ಇಲ್ಲಿ ಪ್ರಗತಿಗೊಂಡಿತು, ಜೊತೆಗೆ, ಮಸ್ತಿಷ್ಕದಲ್ಲಿ ಮಾತ್ರ ಕೇವಲ ಚಿಂತನದ ಕ್ಷಣವೊಂದು ಇದರ ಸಾಂಗತ್ಯದಲ್ಲಿದೆ. ಅಂತಿಮದ ಕೆಲವು ಕ್ಷಣಗಳಲ್ಲಿ ಉಳಿದ ಎಲ್ಲವೂ ದೇಹವನ್ನು ವ್ಯಾಪಿಸಿಕೊಂಡವು. ವೈದುತ್ಯಮಾನವನ ಅರ್ಧಪ್ರತಿಮೆ ಕಾಣಿಸಿಕೊಂಡು ಜೊತೆಗೆನೇ (ಸೂಕ್ಷ್ಮ) ಚಂದ್ರನೂ ಸಹಿತ ವಿದ್ಯುತ್‌ನಿಂದ ಸಂಪನ್ನನಾಗಿದ್ದಾನೆ. ಶರೀರವೂ ಒಂದು ಕ್ಷಣ ನಿಶ್ಚಲವಾಗಿ ಮತ್ತೆ

ಸಂಚಲನಗೊಂಡಿತು. ಆ ನಿಯಂತ್ರಣವು ಸತತವಾಗಿ ಅಲ್ಲಿದ್ದರೂ, ಆದರೆ ಯಾವಾಗಲೂ ಸೂಚನೆಯನ್ನು ಕೊಡುವದಿಲ್ಲ.

**ವಿದ್ಯುನ್ಮಂಡಲವೊಂದು ಅಲ್ಲಿ ನಿರ್ಮಾಣಗೊಂಡಿದೆ**. ಅದರಲ್ಲಿ ಮಿಂಚಿನ ಸ್ಫುಲಿಂಗಗಳು (ವಿಜಸ್). ಪರಿಪ್ರೇಕ್ಷ್ಯದಲ್ಲಿ ಕೆಂಪು, ಕಡುರಕ್ತ ವರ್ಣದಾ ಅಥವಾ ಕಂದು ವರ್ಣದ ಕೆಂಪು. ಸುವಿಶಾಲವಾದ ಸ್ವರ್ಣ ವರ್ಣದ ಅಂಚಿನ ವಲಯದ ಒಳಗೆ ಕಂದು ಬಣ್ಣಕ್ಕೆ ಪರಿವರ್ತಗೊಳ್ಳುತ್ತಿರುವ ಸೂರ್ಯ. ಸ್ವರ್ಣಗೆಂಪಿನಾ ಬಾಗುಖಡ್ಗ(ಸತ್ತ್ವ–ರಜಸ್). ವಾಸುದೇವನ ಸಾಕ್ಷಾತ್ಕಾರ. ಅಗ್ನಿ, ಜಲ, ಪೃಥ್ವಿ ಬೀಜಗಳು (ಅಣುಗಳು) ಬಾಹ್ಯದಲ್ಲಿ ಸತತವಾಗಿ ದರ್ಶಗೊಳ್ಳತೊಡಗಿದವು. 'ಛಾಯಾ–ಪುರುಷ'ನ ಅರ್ಧ–ಪ್ರತಿಮೆಯೂ ಇಲ್ಲಿದೆ. ಅವನ ಸ್ವರೂಪ ಕೆಂಪು. **ಯು.ಆರ್** ಕಾಮಾನಂದದ ಹಂತದಲ್ಲಿ ಪ್ರಯೋಗದಲ್ಲಿದೆ. ಪೃಥ್ವಿಯ ಸುದೀರ್ಘವಾದ ತಂತು, ವಾಯುವಿನ ಮೇಘಗಳಲ್ಲಿ ಉಜ್ಜ್ವಲದಲ್ಲಿ ಜೊತೆಗೆ ಕುಂಡಲಿಯಲ್ಲಿದೆ, ಅತ್ಯುಜ್ವಲವಾದ ಉದಿತ ಸ್ಥಿತಿ. ನೀಲಿಗಪ್ಪು ವರ್ಣದಲ್ಲಿ ಕಾಳಿಯ ಅರ್ಧ–ಪ್ರತಿಮೆ, ಶಕ್ತಿ–ತೇಜದ ಮುಕುಟಧಾರಿ ಜಾಗ್ರತಗೊಂಡ ಬುದ್ಧಿಯಲ್ಲಿ. ಆದರೆ ಈ ಬುದ್ಧಿಯು ಉಗ್ರವಲ್ಲ, ಕೇವಲ ಹೊರಾವರಣದಂತೆ ಭಾಸವಾಗುತ್ತಿದೆ. ಇದೇ ಸವಿಕಲ್ಪ, ಸವಿಚಾರ ಮತ್ತು ಅವಿಚಾರ ಸಮಾಧಿಯ ಸ್ಥಿತಿ. ಸಂಕ್ಷಿಪ್ತದಲ್ಲಿದ್ದಂತೆ ತೋರಿದರೂ ಕರ್ಣಕ್ಕೆ ಅಪ್ಪಳಿಸುವ ಜೋರು–ಧ್ವನಿಗಿಂತ ಅತ್ಯಂತ ಗಹನವಾಗಿದೆ. ತಂಪು–ವಾಯುವನ್ನೂ ಮತ್ತೂ ತೀಕ್ಷ್ಣಗೊಳಿಸುವ ಪ್ರಾದುರ್ಭಾವವಾದರೂ ಶೀತದ ಯಾವುದೇ ಅನುಭವವಿಲ್ಲ; ಇದೆಲ್ಲವೂ ಸಾಮರ್ಥ್ಯಪೂರ್ಣ ಈ ತೇಜಕಾಂತಿಗೆ! ಇಲ್ಲಿರುವದು ಕೇವಲ ಕೇವಲ ಆಹ್ಲಾದಮಯ ಅನುಭೂತಿಯ ಸುಖೋಷ್ಣತೆ ಮಾತ್ರ. ತಿಳಿಹಸಿರು ವರ್ಣದಲ್ಲಿ ದಟ್ಟವಾಗಿರುವ ದ್ರವ್ಯರಾಶಿ (ದ್ರವ್ಯಮಾನ). ಸರೂಪ ಧ್ಯಾನ, ಅಂತರ್–ದರ್ಶಿ. ಶುಭ್ರ–ಸ್ಫಟಿಕದ ಧವಳತೆಯ ಮುಖ. ಕುಮುದಿನಿಯ ವದನ.

ಭವದ ಅನುಭವಗಳಿಂದ– ಮೈಥುನಾನಂದ, ಇಂದ್ರಿಯಗಳ ಸಂವೇದನೆಯ ಪ್ರಭಾವದಿಂದ ವಿಷಯಾನಂದ, ರೋಮಾಂಚನದಿಂದ ಉದಿಸುವ ತೀವ್ರಾನಂದ, ಯಾತನಾಮಯದಿಂದ ಕೂಡಿರುವ ರೌದ್ರಾನಂದ ಮತ್ತು ವಿದ್ಯುತ್ತಾನಂದದಿಂದ– ಉದಿತಗೊಂಡ ಕಾಮಾನಂದವು ಒಂದು ಕ್ಷಣ ಬೆದರಿಸುವ ಭಾವದಲ್ಲಿ ಅಲ್ಪವಿದ್ದಂತೆ ಕಂಡರೂ ವ್ಯಾಪಕವಾಗಿದೆ. ಇದು ದೇಹ ಮತ್ತು ಅನ್ನಕೋಶದ ಪ್ರಭಾವದಿಂದ

ಇನ್ನೂ ಮುಕ್ತಗೊಂಡಿರುವದಿಲ್ಲ, ಛಾಯಾ ಪೃಥ್ವಿಯ ಸ್ವರೂಪದಲ್ಲಿಯೇ ಸ್ಥಿತವಾಗಿರುವದೂ ಇದಕ್ಕೆ ಕಾರಣವಿರಬಹುದೇನೋ.

ಅಲ್ಲಿದ್ದ ವಸ್ತ್ರದ ಮೇಲೆ ದ್ರಾಕ್ಷಿ ತುಂಬಿರುವ ಬುಟ್ಟಿ, ಒಂದು ಬದಿಗೆ ಹೊದಿಕೆ ಹಾಕಲಾಗಿದೆ. ಸ್ವಪ್ನಾವಸ್ಥೆಯಲ್ಲಿರುವ ಕಲ್ಪನೆಯ ಲೀಲೆಯಂತೆಯೇ ಇಲ್ಲಿಯೂ– ಸಮಾಧಿಯ ಸ್ಥಿತಿಯಲ್ಲಿಯೂ– ಲೀಲೆಗೊಳ್ಳುತ್ತಿದೆ. ಮೇಲ್ಭಾಗದಲ್ಲಿ ವಸ್ತ್ರ ಹೊದಿಕೆ ಹೊಂದಿರುವ ಒಂದು ಗಾಜಿನ ಹೂಜಿ ಇದೆ. **'ಕೆ.ನಿಲ್'** ಸೂರ್ಯ ನೀಲಮಯ–ದಲ್ಲಿರುವ ಧೂಮ್ರ ವರ್ಣದ ಕಿರಣದಲ್ಲಿದ್ದಾನೆ. ನಾಮದೃಷ್ಟ, 1. ತೇಜೋನಾಮ 2. ಕೆಂಗುಲಾಬಿಯ ಅಕ್ಷರಗಳಲ್ಲಿ ಬೀಜಕಗಳಿವೆ. 3 ಸಾಮಾನ್ಯ ವರ್ಣಗಳು ಕಪ್ಪು ಅಕ್ಷರಗಳಲ್ಲಿವೆ. ಇಲ್ಲಿ ದೃಷ್ಟಗೊಂಡಿರುವದೆಲ್ಲವನ್ನೂ ಲೇಖನಕ್ಕಿಳಿಸುವದು ಸುಸಂಗತವೂ ಅಲ್ಲ ಮತ್ತೆ ಮೇಲಾಗಿ ಇದನ್ನು ಮುದ್ರಿಸುವದೂ ಸಹಿತ ಮುಖ್ಯ ಸಂಗತಿಯಾಗಿಲ್ಲ. ಓರ್ವ ವ್ಯಕ್ತಿಯ ಆತ್ಮಾಭಿಲಾಶೆಗೆ ಲಭ್ಯಗೊಳ್ಳುವ ದರ್ಶನದ ಸಂಗತಿಗಳೆಲ್ಲವೂ ಸಾರ್ವತ್ರಿಕವಾಗಲಾರವೇ? ಅಥವಾ ವಿಕಾಸದ ಹಂತದಲ್ಲಿ, ಈ ಘಟನೆಗಳು ವಿಕಸನೆಗೆ ಒಂದು ತಡೆಯನ್ನು ನಿರ್ಮಿಸುತ್ತವೆಯೇ ಎನ್ನುವ ವಿಚಾರವೊಂದು ಬಂದು, ಅಲ್ಲಿ ಕಂಡ ಸರ್ವಸ್ವವನ್ನೂ ಲಿಖಿತಗೊಳಿಸಲು ಸಾಧ್ಯವಾಗುವದಿಲ್ಲ. ಹೀಗಾಗಿ ಸರ್ವವನ್ನೂ ಲಿಖಿತಗೊಳಿಸದೇ ಇರಲು ನಿರ್ಣಯಿಸಿದೆ.

ನೀಲಮಯದ ವ್ಯೋಮದಲ್ಲಿ ಜೊತೆಗೆ ಪಚ್ಚೆ ಸಮೃದ್ಧವಾಗಿ ಕುಸುರು ಕುಸುರಿನೊಳಗೆ ವರ್ಣಮಯ ಸ್ಪಂದನವನ್ನು ಯಾವ ಹಸ್ತವು ರೂಪಿಸುತ್ತಿದೆ ಹೀಗೆ? ಪರಾಕಾಶದ ಗುಹ್ಯ–ಗರ್ಭದೊಳಗೆ ಈ ತರದ ಅಂತರಂಗವಾಗಿ ಪವನಗಳು ಸುಪ್ತವಾಗಿಯೇ ಇವೆ. ಇವೆಲ್ಲವೂ ಚಿಮ್ಮಿ ಹೊಮ್ಮಬೇಕೆಂದು, ಸರ್ವಸ್ವವನ್ನೂ ಜಾಗರಗೊಳಿಸಲೆಂದು ಯಾರು ಹೀಗೆ ಆಜ್ಞೆ ಕೊಡುತ್ತಿದ್ದಾರೆ? ಸೂಕ್ಷ್ಮವಾಗಿ ಚಿತ್ತದ ಹಂತದಲ್ಲಿಯೇ ಗಮನಿಸಿದಾಗ ಅವನು ಹೃದಯಲ್ಲಿಯೇ ಲೀನವಾಗಿದ್ದಾನೆ, ಪ್ರಕೃತಿಯ ಗುಹೆಯ ಒಳಗೆ ಗುಹ್ಯವೂ ಆಗಿದ್ದಾನೆ. ಇದರೊಡನೆ ಸ್ಪಂದಗೊಳ್ಳುತ್ತಿರುವ ಪುಷ್ಪಗಳು ಸ್ವಸ್ವರೂಪವನ್ನೇ ಪಡೆದುಕೊಳ್ಳುತ್ತಿವೆ. ಜಾಲಂಧ್ರದ ಹಾಗೆ ಕಾಂತಿಯನ್ನು ಬೀರುತ್ತಿರುವ ನಕ್ಷತ್ರ–ಮಂಡಲದಲ್ಲಿ ಅವನೀಗ ಬಂಧಗೊಂಡಿದ್ದಾನೆ. ಅವನ ಕೃಪೆಯ ಆವರಣದಲ್ಲಿ ಪುರುಷ ಪೌರುಷವನ್ನು ಹೊಂದಿದ್ದಾನೆ, ಪ್ರಕೃತಿ ಲಾವಣ್ಯಪೂರ್ಣ ಲಾಲಿತ್ಯದಲ್ಲಿದ್ದರೆ, ಬಾಲಕನು ಮುಗ್ಧ ಹಸಿತದಲ್ಲಿ ವಿಕಸಗೊಳ್ಳುತ್ತಿದ್ದಾನೆ, ಬಾಲಿಕೆಯೋ ಲಜ್ಜೆಯ ಮೌನದಲ್ಲಿ ಹೆಜ್ಜೆ

ಇಡುತ್ತಿದ್ದಾಳೆ. ಇನ್ನು ಆಕಾಶಕಾಯಗಳೋ ಗುರುತ್ವದ ಗುರುತರದ ಸುತ್ತಿನಲ್ಲಿ ನಿತ್ಯ ಸಂಚನವಿರುವ ಹಾಗೆ ಈ ಹಸ್ತವು ನಿಗದಿಗೊಳಿಸುತ್ತಿದೆ. ಅಲ್ಲಲ್ಲಿ ಅಲ್ಲಲ್ಲಿ ಅಡಗಿರಬಹುದಾದ ಧೂರ್ತತತೆಯನ್ನು ಕಳೆಯುವದರ ಸಲುವಾಗಿ ಸುರುಳಿ ಸುರುಳಿಯಾಗಿ ಭ್ರಮಣಗೊಳಿಸುತ್ತಿದೆ. ಇವೆಲ್ಲವೂ 'ಅವನ' ಕಾರ್ಯಗಳಾಗಿವೆ, ಜೊತೆಗೆ ಅವನದೇ ಕವಚಗಳೂ ಆಗಿವೆ, 'ಅವನದೇ' ಛಾಯೆಯೂ ಆಗಿದೆ. ಆದರೂ ಅವನು ಎಲ್ಲಿದ್ದಾನೆ? ಎಲ್ಲಿದ್ದಾನೆ? ಏಕೆ ಕಾಣುತ್ತಿಲ್ಲ? ನಾನು ಅವನನ್ನು ಯಾವ ನಾಮದಲ್ಲಿ ಗುರುತಿಸಲಿ? ಯಾವ ಸ್ವರೂಪದಲ್ಲಿ ಅವನ ಪೂರ್ಣತ್ವವನ್ನು ಅರಿಯಲಿ? ಬ್ರಹ್ಮ ಎನ್ನಲೇ? ವಿಷ್ಣುವೇ ಅವನು? ಪುರುಷನೋ ಅಥವಾ ಪ್ರಕೃತಿಯೋ? ದೇಹವನ್ನು ಪಡೆದುಕೊಂಡು ರೂಹು ತಾಳಿರುವನೋ? ನಿರ್ದೇಹಿಯಾಗಿದ್ದಾನೆಯೇ? ದ್ವೈತಿಯೋ ಅದ್ವೈತಿಯೋ?

ಭವ್ಯವಾಗಿರುವ ತೇಜ ತುಂಬಿರುವ ಕಂದು ವರ್ಣದ ಈ ಶಿಶುವು ನಮಗೆ ಪ್ರೇಮಮಯವಾಗಿದೆ, ನಮ್ಮೆಲ್ಲರ ಜಗನ್ಮಾತೆಯಾಗಿರುವ ಅವಳು ಅತ್ಯುಗ್ರವಾಗಿದ್ದಾಳೆ. ಆ ಔನ್ನತ್ಯದ ಶೃಂಗಗಳಲ್ಲಿ ಶೀತದಲ್ಲಿ ಸದಾ ನಾದಮಯವಾಗಿರುವ 'ಅವನನ್ನು' ನಾವೀಗ ದರ್ಶಗೊಳ್ಳಲು ಸಾಧ್ಯ. ಬ್ರಹ್ಮಾಂಡದ ಗೋಳ–ಗೋಳಗಳ ಹೃದಯದಲ್ಲೆಲ್ಲವೂ ಅವನು ಕರ್ತವ್ಯವಾಗಿರುವದು ಕಾಣುತ್ತಿದೆ. ಇವನಿಂದ ಇಲ್ಲಿ ರೂಪುಗೊಂಡಿರುವ ತತ್–ಪಥಗಳನ್ನು ತತ್–ತಂತ್ರಗಳನ್ನು ನಾವೀಗ ಜಗಕೆಲ್ಲ ಸಾರಬೇಕಿದೆ. ವೃತ್ತಿರಾಗಗಳಲ್ಲಿ, ನೋವು–ಯಾತನೆಯ ಮಧ್ಯದಲ್ಲೂ ಇವನು ತೋಷವನ್ನೇ ಹೊಂದಿ ಅದನ್ನೇ ಸರ್ವಸ್ವಕ್ಕೂ ಬೀರುತ್ತಿದ್ದಾನೆ. ನಮ್ಮ ದುಃಖವೂ ಅವನಿಗೆ ತೋಷವೇ ಆಗಿದೆ, ಆದರೆ ಈ ರೀತಿಯಲ್ಲಿ ರೋದಿಸುತ್ತಿದ್ದಲ್ಲಿ ಮಾತ್ರ ಚಲನ ಸಾಧ್ಯ! ಅವನ ಆ ಮುದದ ಹಸಿತವೂ ಸಹಿತ ನಾದವಾಗಿ ನಿನದಗೊಂಡು ಸಾರವಾಗುತ್ತಿದೆ, ಅವನ ಆ ತೋಷವೇ ರಾಗಸ್ಮಿತವಾಗಿ ಸರ್ವವೂ ಸೌಂದರ್ಯಮಯವಾಗುತ್ತಿದೆ. ನಮ್ಮ ಜೀವಗಳು ನಮ್ಮ ಪ್ರಾಣಗಳು ಅವನ ಹೃತ್–ಸ್ಪಂದವಾಗುತ್ತಿರಲು ಅದೇ ನಮ್ಮ ಪುಲಕವಾಗುತ್ತಿದೆ. ಇದೇ ಅಲ್ಲವೇ ರಾಧೆ–ಕೃಷ್ಣರ ಸಂಯೋಗ, ಅದೇ ನಮಗೆಲ್ಲ ಪ್ರೇಮವೀಗ.

ವಿಜಯದ ಕಹಳೆಯ ಘೋಷಗಳಲ್ಲೀಗ ಉಚ್ಚ ಬಲ ತೇಜನಾಗಿದ್ದಾನೆ ಅವನು. ಮುತ್ತಿರುವ ಕತ್ತಲೆಯನ್ನು ಅನವರತವಾಗಿ ಕತ್ತರಿಸಲೆಂದು ಅವನದೇ ರಥದಲ್ಲಿ ಚಲಿಸುತ್ತ, ತನ್ನ ಭಲ್ಲೆಗಳನ್ನು ಎಸೆಯುತ್ತ, ಸಹನೆಯನ್ನು ತುಂಬುತ್ತ ಸಾಗುತ್ತಿದ್ದಾನೆ. ಈ ಜಗತ್ತಿಗಾಗಿಯೇ ಅವನ ಹೋರಾಟವಿದೆ. ವಿಕಾಸನಕ್ಕೆ

ಇಂಬುಗೊಂಡುತ್ತ ಸಾಗುತ್ತಿದ್ದಾನೆ. ಈ ಲೋಕ–ಲೋಕಗಳ ಲಯಬದ್ಧ ನಿರ್ಮಿತಿಯ ಒಡನೆ ಯುಗಗಳೇರಿಳಿತದಲ್ಲಿ ಬದ್ಧನಾಗಿದ್ದಾನೆ. ಅದನ್ನು ವರ್ಣಿಸಲು ಅಸಾಧ್ಯ. ತುಂಬ ಸಾಮರ್ಥ್ಯಪೂರ್ಣ ಜೊತೆಗೆ ವೈಭವೋಪೇತವಾಗಿ ಪರಮ ಪರಿಶುದ್ಧವಾಗಿದ್ದಾನೆ. ಚಿಂತನಾ ವಲಯವು ಹೆಣೆದಿರುವ ಚರಮ ಶಿಖರಕ್ಕೂ ಆಚೆ ಆಚೆ ಆಚೆ ಪರಮಶಕ್ತವಾಗಿಯೇ ಇದ್ದಾನೆ. ನಿತ್ಯ ಸಹನೆಯ ಅವನದೇ ಪೀಠದಲ್ಲಿ ಅವನೀಗ ಅಭಿಷಿಕ್ತನಾಗಿದ್ದಾನೆ.

ಈ ಭವಲೋಕಕ್ಕೆ ಇವನೇ ದೇವನಾಗಿದ್ದಾನೆ. ಜೊತೆಗೆ ಅವನದೇ ಸೃಷ್ಟಿಯನ್ನು ನಿತ್ಯವೂ ಪ್ರೀತಿಸುವ. ನಮ್ಮ ಹೃದಯಗಳಿಗೆ ಈಗ ಇವನು ಆಪ್ತನಾಗಿದ್ದಾನೆ. ದೃಷ್ಟಿಸಲು ಕಾಣ್ಕೆಯಾಗಿ ಸತ್ಯವಾಗಿದ್ದಾನೆ. ಆದರೆ ನಾವು ನಮ್ಮ ಸೊಕ್ಕಿನಲ್ಲಿ, ನಮ್ಮದೇ ಹುಸಿಯಾಡಂಬರಕ್ಕೆ ಸಿಲುಕಿ ನಮ್ಮ ನಮ್ಮದೇ ಚಿಂತನದಲ್ಲಿ ಬಂಧಿತರಾಗಿದ್ದೇವೆ. ಇದನ್ನೂ ಮುಕ್ತಗೊಳಿಸಲಿಕ್ಕೆ ಅವನು ಬರುತ್ತಿದ್ದಾನೆ. ಹೀಗಾಗಿಯೇ ಇವನು ಕಾಲಾತೀತನಾಗಿದ್ದಾನೆ. ಅಮೃತತ್ವವಾಗಿದ್ದಾನೆ. ತೇಜತ್ವವಾಗಿದ್ದಾನೆ. ಮಧ್ಯರಾತ್ರಿಯಲ್ಲೂ ಸಹಿತ ತನ್ನದೇ ಛಾಯೆಯನ್ನು ಬೀರುತ್ತಾನೆ. ಈ ತಮವು ಅಂಧತ್ವದೊಳಗೆ ಇರುವದರಿಂದ, ಆ ತಮವನ್ನೂ ನುಂಗಿಕೊಂಡು, ಅದರಂತರಂಗದಲ್ಲೂ ತನ್ನ ಸುಪತವಾಗಿರುವ ವ್ಯಾಪ್ತತ್ವದ ಕಾಂತಿಯನ್ನು ಭರಣಗೊಳಿಸಿ, ಏಕಮೇವನಾಗಿ ಪೀಠಗೊಂಡು ಕಂಗೊಳಿಸುತ್ತಿದ್ದಾನೆ. ಇಲ್ಲಿ ದರ್ಶಗೊಂಡಿದ್ದೆಲ್ಲವೂ ಬರಿ ಹುಸಿಯ ಸ್ವಪ್ನವಲ್ಲ. ತಲ್ಲೀಯ ಘನದ ಚಿತ್ಸಮಾಧಿಯಲ್ಲಿ ಇದು ದೃಷ್ಟಗೊಳ್ಳುವ ಕಾಣ್ಕೆಯಾಗಿದೆ. ಬರಲಿರುವ ಕಾಲವನ್ನು ಎದುರಿಸಲು ಮತ್ತು ಅಷ್ಟೇ ಸಾಮರ್ಥ್ಯಪೂರ್ಣವಾಗಿ ಪ್ರಗತಿಗೊಳ್ಳಲೆಂದೇ ಈ ಸಂಕೇತಗಳಿವೆ. ಅಥವಾ ಘನಗೊಳ್ಳುತ್ತಿರುವ ತಮದ ಒತ್ತಡವೇ ಸ್ಫೋಟಗೊಂಡು ಚಿಮ್ಮಿ ಈ ಜ್ಯೋತಿ ಹೊಮ್ಮಿ ಬಂದಿದಿಯೋ ಎನಿಸಿತು. ಆದರೆ ಸಾಗಲಿರುವ ಪಥದ ಉದ್ದಕ್ಕೂ ಚಿನ್ಮಯದ ಕಾಂತಿಯೊಂದು ಸಹವರ್ತಿಯಾಗುವದನ್ನು ಸ್ಪಂದಗೊಂಡಿದ್ದರಿಂದ, ಅದೇ ಅನುಭಾವದ ಮೂಲಕ ಹೃದಯದಲ್ಲಿ ಸ್ಥಿತಗೊಂಡಿತು. ಮುಂದೆ ಸಾಗಲು ಅವಶ್ಯವಿರುವ ಚಿಚ್ಛಕ್ತಿ ಅರಳುತ್ತಿರುವದನ್ನು ಸಂಕೇತಿಸುತ್ತಿತ್ತು.

ಧ್ಯಾನಾವಸ್ಥೆಯ ಹಂತದಲ್ಲಿ ಅದೆಷ್ಟು ಸಮಯ ಇದ್ದೆನೋ? ಸಾವಧಾನ ಚಿತ್ತದಿಂದ ಮೇಲೆದ್ದೆ. **ತ್ರಾಟಕ ಸೂರ್ಯನ ದರ್ಶನದ ಸಂಕೇತ ಗೋಚರಿಸಿದ್ದರಿಂದ** ಮನಸ್ಸು, ಚಿತ್ತ, ಹೃದಯ, ಪ್ರಾಣ, ಜೀವ ಜೊತೆಗೆ ಆತ್ಮವೂ ಪ್ರಫುಲ್ಲಿತವಾಗಿದೆ. ಇಡೀ ವಾತಾವರಣವೇ ಆ ಸೂರ್ಯನ ತೇಜಕಾಂತಿಯ ಪ್ರಶಾಂತ ಕಿರಣಗಳಿಂದ

ಪೂರಣಗೊಂಡಿದೆ. ನಿಧಾನವಾಗಿ ನಡೆದು ಬಂದು, ಬಾಗಿಲನ್ನು ತೆರೆದೆ. ಎದುರಿಗೆ ವರಾಂಡ. ಅಲ್ಲಿದ್ದುದು ನಮಾಸಿಯ ಬೆಕ್ಕಿನ ಮರಿ, ಜೊತೆಗೆ ಒಂದು ಪತ್ರಿಕೆ. ಪ್ರಾಯಃ 'ವಂದೇ ಮಾತರಂ' ಸಾಪ್ತಾಹಿಕ ಇರಬೇಕು ಎನಿಸಿತು. ನಾನೇ ಬರೆದ ಲೇಖನ ಅಲ್ಲಿದೆ. ಅದರಲ್ಲಿನ ಕೆಲವೊಂದು ಶಬ್ದಗಳನ್ನು ಮತ್ತೆ ಕೈಬರಹದಲ್ಲಿ ಬರೆದುಕೊಂಡೆ, ಅವುಗಳ ರೂಪಗಳನ್ನೂ ಅರ್ಥೈಸಿಕೊಂಡೆ. ಒಂದಿಷ್ಟು ಸೂಕ್ಷ್ಮವಾದ ಮರುಜೋಡಣೆಯ ಅವಶ್ಯಕತೆ ಇದೆ ಎಂದೆನಿಸಿತು. ಅಲ್ಲಿ ಕೈಬರಹದಲ್ಲಿ, ಬಹುತೇಕವಾಗಿ ಅರ್ಥೈಸಿಕೊಂಡ ಶಬ್ದಗಳೆಲ್ಲವೂ ಈಗ ಸ್ಮೃತಿಗೆ ಬರುತ್ತಿಲ್ಲ.

ಸಮಾಧಿಯ ಸ್ಥಿತಿಯಲ್ಲಿ ಸ್ವರ್ಣ ವರ್ಣದ ಹಿನ್ನೆಲೆಯ ಆವರಣ. ಇದೇ ಸಮಾಧಿ ಸ್ಥಿತಿಯಲ್ಲಿಯೇ **ಯುಡಬ್ಲ್ಯು** ಸಂಗಡ ಸಂವಾದ ನಡೆಸಿದೆ. ಮತ್ತೊಬ್ಬರ ಜೊತೆಗೂ ಸಂವಾದ ನಡೆಸಿದೆ, ಪ್ರಾಯಃ ರಾಜಕೀಯ ವಿಷಯವಿರಬೇಕು. ಪಾದದಲ್ಲಿ ವೇದನೆಯಾದಾಗ ಅದು ತಕ್ಷಣದಲ್ಲಿಯೇ ಮುಖದಲ್ಲಿಯೂ ಕಾಣಿಸಿಕೊಂಡು, ನರ ಮಂಡಲದ ಸಂವೇದನಾಶೀಲ ಶಕ್ತಿಯ ಹರಿವನ್ನು ತೋರುತ್ತಿದೆ.

ನಾಮದೃಷ್ಟಿ. ಟೈಪರೈಟರಿನಲ್ಲಿ ನಿಖರವಾಗಿ ಪಡಿಮೂಡಿಸಿದ ಹಾಗೆಯೇ ಇರುವ ಗೂಢಾಕ್ಷರಗಳ ಆಂತರ್ಯವನ್ನು ಸುಸಂಗತವಾಗಿಯೇ ಅರ್ಥೈಸಿಕೊಳ್ಳುವಂತಿವೆ, ಆದರೆ ಈಗ ನೆನಪಿಗೆ ಬರುತ್ತಿಲ್ಲ. ಅಲ್ಲೊಂದು ಟೆನಿಸ್ ರಾಕೆಟ್ ಸಹ ಇತ್ತು, ಆದರೆ ಪೂರ್ತಿ ಮಣ್ಣು ಮೆತ್ತಿಕೊಂಡು ಕಪ್ಪು–ಕಪ್ಪಾಗಿ ಕಾಣುತ್ತಿತ್ತು. ಸಮಾಧಿ ಸ್ಥಿತಿಯಲ್ಲಿಯೇ ಆಹಾರವೂ – ರೋಟಿ ಮತ್ತು ಚಟ್ನಿ ದೊರಕಿತು. ಕೆ.ಭ.(ಕಾಲ ಭೈರವನ)ನ ಮುಖವು ಕಂಡಿತು. ಘನಕಪ್ಪು ತುಂಬಿರುವ ಮೇಘಗಳಿಂದ ಆವರಿತ ಆಕಾಶದಂತೆ ಹೊಳೆಯುವ ಕಾಂತಿಯ ಜೊತೆಗೆ ಮೇಘಗಳ ಮಧ್ಯೆಯೇ ಬಲವತ್ತಾದ ಶಕ್ತಿಯ ಪ್ರಕಾಶ–ಮಿಂಚು. ಕೆಂಗುಲಾಬಿಯನ್ನೂ ಮುತ್ತಿರುವ ಘನಕಪ್ಪು ತುಂಬಿಕೊಂಡಿದೆ. ದಟ್ಟವಾದ ವೃಕ್ಷಗಳೂ ಹೊರಗೆ ನಿಧಾನವಾಗಿ ಕಲಕಲಗೊಳ್ಳುತ್ತ ತುಯ್ಯಲಾಡುತ್ತಿವೆ, ವುಡನ್ನ.

ಹೊರಾವರಣದಲ್ಲಿ ಸಂಪಾತ್ರೈಯ ವದನ ಕಾಣಿಸಿತು. ಕೈಯಲ್ಲಿ ಒಂದು ಕಪ್ ಹಿಡಿದ ನಮಾಸಿ (ಪೇಲವದಲ್ಲಿರುವ ಛಾಯಾಮಯಿಯು) ಸಹಿತ. ಅಲ್ಲೊಂದು ಉದ್ದವಾದ ಕಟ್ಟಿಗೆ ಬೆಂಚ್ ಇತ್ತು. ವಿದ್ಯುತ್ ಸಂಚಾಲಿತಗೊಂಡಂತೆ ಇರುವ ಕಾಲುಗಳ ತೀವ್ರ ಚಲನೆ. ನನ್ನೆದುರು ಈಗಿದೋ ಪೀಠವೊಂದರ ಪೂರ್ಣ ಚಿತ್ರ ಸೂಕ್ಷ್ಮ ರೂಪದಲ್ಲಿ ಕಾಣುತ್ತಿದೆ. ಅಲ್ಲಿ ಅಪರಿಚಿತವಿರುವ ಅಥವಾ ಸ್ಮರಣೆಯಿಂದ

ದೂರಾಗಿರುವ ಎರಡು ಮುಖಗಳು.. ಅಪೂರ್ಣ ಆಧಾರ ದೃಷ್ಟಿ. ರುಮಾಲು ಸುತ್ತಿಕೊಳ್ಳುತ್ತಿರುವ ಒಬ್ಬ ಬಾಲಕನು ಬಾಗಿ, ತನ್ನ ಬೆರಳುಗಳಿಂದ ಅಪರಿಚಿತವಾದ ಏನನ್ನೋ ಕೆದಕುತ್ತಿದ್ದಾನೆ. ಕಟಿ ಪ್ರದೇಶದವರೆಗೂ ಇರುವ ಅಶ್ವಿನಿ ದತ್ತ. ಆದರೆ ಅವನ ವಿಶೇಷತೆಗಳು ಅಸ್ಪಷ್ಟವಾಗಿವೆ. ಕಾಯಿಪಲ್ಯ ತುಂಬಿದ ಪಾತ್ರೆಯೊಂದು, ಚಲನಗೊಳ್ಳುತ್ತಲಿತ್ತು. ಸ್ನಾನದ ವೇಳೆಯಲ್ಲಿ ಅನೈಚ್ಛಿಕವಾಗಿ ನಡೆಯುವಂತೆ ಬಹುತೇಕ ಸಂಚಲನಗಳಿದ್ದವು.

ಅಂಶಿಕ ಉತ್ತಾಪನೆ: ಪ್ರಚಂಡವಾಗಿಯೇ ಮೇಲಕ್ಕೆ ಮೇಲಕ್ಕೆ ಸಾಗುತ್ತ, ಹಸ್ತದ ಚಲನೆಯ ಸಹಾಯದೊಂದಿಗೆ ನೀರಿನ ಮೇಲೆ ತೇಲುತ್ತಲಿತ್ತು. ತೆಳು ಮೋಡಗಳಿಗೆ ಸದಾ ವಿರುದ್ಧವೇ ಆಗಿರುವ ಗಾಳಿಯನ್ನು ಅಲ್ಲಿ ಘನಗೊಂಡ ಕಪ್ಪಿನಲ್ಲಿ ಇರುವ ಕತ್ತಲೆಯಲ್ಲಿ ಕಂಡೆ, ಇದರ ಜೊತೆಗೆ ಮೇಘದ ದ್ರವ್ಯತ್ವವೆಲ್ಲವೂ ಕಂಬದಂತೆ ಇರುವದನ್ನು ಕಂಡೆ. ಒಂದು ತೀವ್ರಾತಿ ತೀವ್ರವಾದ ಅಬ್ಬರದ ಪರಾಕಾಷ್ಠೆಯಲ್ಲಿರುವ ಸಾಮರ್ಥ್ಯಪೂರ್ಣವಾದ ಧಾರೆಯೊಂದು ಬಲ ಭಾಗದಲ್ಲಿ ತಿರುಗಣಿಗಳ ರೂಪಗಳಲ್ಲಿ, ಸುಳಿಗಳಾಗಿ ಮತ್ತು ಏಕಕಾಲಕ್ಕೇ ಮೇಲ್ಮುಖವಾಗಿ ಹಾಗು ಕೆಳಮುಖವಾಗಿ ಗಿರಗಿರನೆ ಸುತ್ತುತ್ತಲಿವೆ, ಧಾರೆಗೊಳ್ಳುತ್ತಲಿವೆ; ಮತ್ತೊಂದು ಎಡ ಭಾಗದಿಂದ ಹಾಗು ಹಿಂಬದಿಯಿಂದ ಬರುತ್ತಿದ್ದಂತೆ ಕಂಡ ಕೊಂಚ ಸಾಧಾರಣ ಸ್ವರೂಪದ ಧಾರೆ. ಈ ಸಮಯದಲ್ಲಿಯೇ ಚಂಡ ವೇಗದ ಗಾಳಿ ಮತ್ತು ಭಯವನ್ನು ಹೆಚ್ಚಿಸುತ್ತಿರುವ ರಭಸದ ಮಳೆ.

ಮಧ್ಯಾಹ್ನದ ವೇಳೆ. ದೈಹಿಕ ಚಲನವಲನಗಳನ್ನು ಸಂಪೂರ್ಣವಾಗಿ ಸಾವಧಾನವಾಗಿಯೇ ಹತೋಟಿಗೆ ತರಲಾಗಿದೆ. ದೇಹವಿದೀಗ ನಿಶ್ಚಲತೆಯಲ್ಲಿ ಸ್ಥಿರವಾಗಿದೆ. ಇದೇ ಸಮಯಕ್ಕೇ ಹೃದಯದಲ್ಲಿ ಹಾಗು ಎರರಡನೇ ಧ್ವನಿಯು ಮಸ್ತಿಷ್ಕದಲ್ಲಿ ಕೇಳಿಸಿತು. ಹೃದಯದಲ್ಲಿ ಕೇಳಿದ್ದು ಶ್ರೀ ಕೆ (ಕೃಷ್ಣನ) ಧ್ವನಿ– 'ನಾನು ಕತ್ತರಿಸಲೆಂದೇ ಆಗಮಿಸಿದ್ದೇನೆ–,' ಪ್ರಪ್ರಥಮ ಧ್ವನಿ ಉದಿಸುವದೇ ಹೃದಯದಲ್ಲಿ ಅಂದರೆ ಅದು ಮೆದುಳನ್ನು ಪ್ರವೇಶಿಸುವದಕ್ಕಿಂತ ಮೊದಲೇ. ಈ ಪ್ರಥಮ ಧ್ವನಿಗೆ ತನ್ನದೇ ಆದ ವ್ಯಕ್ತಿತ್ವ (ಅಸ್ಮಿತೆ) ಇದೆ. ಎರಡನೇಯದಕ್ಕೆ ಇನ್ನೂ ರೂಪುಗೊಂಡಿಲ್ಲ.

ರಾತ್ರಿ; ಸ್ಟೀಮರದಲ್ಲಿ ಪ್ರಯಾಣಿಸುತ್ತಿದ್ದಂತೆಯೇ ಭಾವವು ಆವೇಶದಲ್ಲಿ ದೇಹವನ್ನು ಕಂಪಿಸುವಂತೆ ಮಾಡುತ್ತಿದೆ. ಇದೇ ರೀತಿಯ ಅನುಭವವು ಕಾಳಿ ಮಂದಿರದಲ್ಲಿಯೂ ಆಗಿತ್ತು ಮತ್ತು ನಾನು ಉಳಿದುಕೊಂಡ ಮನೆಗೆ ಬರುವಾಗಲೂ

ಸಹಿತ. ಕರ್ನಾಲಿಯಲ್ಲಿಯೂ ಇದೇ ಅನುಭವವಾದದ್ದು ಸ್ಮರಣೆಗೆ ಬಂದಿತು. ದೇವ ಗಣಗಳೇ ಇರುವ ಆ ಪುಟ್ಟ ತಾಣವೊಂದರಲ್ಲಿ, ಅದರಲ್ಲಿಯೂ ಪುಟ್ಟ ದೇವಳದಲ್ಲಿ ನೆಲೆಸಿರುವ ಆ ಪರಮ ದೇವತೆ ಶಿಲ್ಪಗೊಂಡಿದ್ದರೂ ನನ್ನನ್ನೇ ದೃಷ್ಟಿಸಿದ್ದು ಸದಾ ಅನುಭವದಲ್ಲಿದೆ. ಅವಳು ಅಲ್ಲಿ ಜೀವಂತವಾಗಿ ಸ್ಪಂದಿಸುತ್ತಿರುವದನ್ನು ಅರಿಯದವರು 'ಶಿಲಾದೇವಿ' ಎಂದು ಆರಾಧಿಸುತ್ತಿದ್ದಾರೆ! ಆದರೆ ನನಗೆ ಮಾತ್ರ ಅಮರತ್ವವೊಂದು ತನ್ನ ಸಮ್ಮುಖವನ್ನು ಜೀವ–ಚೈತನ್ಯದ ಜೊತೆಗೆ ದಿವ್ಯತ್ವಪೂರ್ಣವಾಗಿ ದರ್ಶನಗೊಳ್ಳಲೆಂದೇ, ಅನಂತವೂ ಸಹಿತ ಆಶ್ರಯವನ್ನು ಪಡೆಯಲೆಂದೇ ಆಕಾರ ಧರಿಸಿ ಮೂರ್ತಗೊಂಡಂತೆ ದರ್ಶನವಾಗಿತ್ತು. ಈ ವಿರಾಟ್–ವಿಶ್ವಮಾತೆ ಅವಳದೇ ಮಹತಿಯಾಗಿರುವ ಶಕ್ತಿಯ ಇಚ್ಛೆಯೂ, ಬುವಿಯ ಚರಮ–ಸುಪ್ತಿಯಲ್ಲಿ ತಾನೇ ಅಧಿಷ್ಠಾತ್ರಗೊಂಡಂತೆ, ನಿರ್ವಾಣಿಯಾಗಿ, ಸರ್ವಶಕ್ತಿಮಯವಾಗಿ ಘನ–ಗುಹ್ಯವೇ ಆಗಿ, ವ್ಯೋಮದ ಔನ್ನತ್ಯದಲ್ಲಿ ಮತ್ತು ಆಳದಾಳಗಳಲ್ಲಿ ಜೊತೆಗೆ ಮರುಧರೆಯ ಮೌನದಲ್ಲಿಯೂ ವಿರಾಜಮಾನಳಾಗಿದ್ದಾಳೆ. ಈಗಿದೋ ಮನದ ಕವಚದಲ್ಲಿ ವಾಸಿಯಾಗಿ, ಆದರೆ ಮೌನವಾಗಿದ್ದಾಳೆ. ಅಷ್ಟೇ ಅಲ್ಲ ನೀರವಳಾಗಿದ್ದಾಳೆ. ಸರ್ವ–ಸರ್ವಜ್ಞೆಯಾಗಿದ್ದಾಳೆ. ನಮ್ಮಾತ್ಮವನ್ನು ಅವಳ ಈ ಸ್ವರೂಪವನ್ನು ಅರಿತುಕೊಳ್ಳುವ–ವರೆಗೂ ಈ ಸರ್ವಸ್ವವನ್ನೂ ತನ್ನಲ್ಲಿಯೇ ಅಡಗಿಸಿಕೊಂಡೇ ಇರುತ್ತಾಳೆ! ಅಚ್ಚರಿಯಲ್ಲಿ ನಿತ್ಯಾವತಾರವಾಗಿರುವ ಅವಳ ಈ ಆಂತರ್ಯದ ರಹಸ್ಯವನ್ನು ಅರಿತುಕೊಳ್ಳಲು ಉಪಾಸಕನ ಅಭೀಪ್ಸೆ ಮತ್ತು ಅವನ ಸತತ ಪ್ರಯತ್ನಗಳ ಮೂಲಕ, ಅದನ್ನು ರೂಪಿಸಿ, ಪೋಷಿಸಿ ಫಲಪ್ರದವಾಗುವಂತೆ ಮಾಡುತ್ತಾಳೆ. ಅದಕ್ಕಾಗಿಯೇ ಅವಳು ಶಿಲಾವಸನೆಯಾಗಿದ್ದರೂ ಸೌಂದರ್ಯದುಂಬಿರುವ ನಿತ್ಯತ್ವವಾಗಿದ್ದಾಳೆ.

**ಈ ಎಲ್ಲವೂ ಸಾಕಾರಗೊಂಡು ಕಪ್ಪು ಪರಿಪ್ರೇಕ್ಷ್ಯದಲ್ಲಿ ಉಜ್ಜ್ವಲದ ತಾರೆಯಂತೆ ಸ್ವರೂಪವು ಹೊಳೆಯುತ್ತಿತ್ತು. ತೆಳುವಾದ ಶೂನ್ಯ** ತ್ರಿಕೋನವೊಂದು ಪ್ರಾಚೀನ ಹಿಂದೂ ಶಿಖರದಂತೆಯೇ ತೀವ್ರ ಮೊನಚಾದ ಶೃಂಗವನ್ನು ಹೊಂದಿದೆ, ಮಧ್ಯದಲ್ಲಿ ಒಂದು ಕಾಂತಿಪೂರ್ಣವಾದ ಸ್ವರ್ಣ ರೇಖೆಯೂ ಇದೆ.

ದಟ್ಟ ವೃಕ್ಷಗಳಿಂದ ಕಂಗೊಳಿಸುತ್ತಿರುವ ಎರಡೂ ಬದಿಯ ದಂಡೆಗಳು. ಅಲ್ಲಲ್ಲಿ ಅಲ್ಲಲ್ಲಿ ನಡುಗಡ್ಡೆಗಳನ್ನು ಸೃಷ್ಟಿಸಿಕೊಂಡು ಸಾಗುತ್ತಿರುವ ಹೊಳೆಹೊಳೆಯ ಪ್ರವಾಹ. ಪದ್ಮಾ ನದಿಯು ಸದಾ ಸಂಚಲನದಲ್ಲಿರುವ ದೋಣಿಗಳ ಮೂಲಕ ಜೀವ ಸ್ಪಂದನಗೊಂಡಿದೆ. ಸದಾ ಹಸಿರಿನಿಂದ ಕೂಡಿರುವ ದಂಡೆ, ಅಲ್ಲಲ್ಲಿ ಅಲ್ಲಲ್ಲಿ ಮೆಟ್ಟಿಲು ಮೆಟ್ಟಿಲುಗಳನ್ನು ರೂಪಿಸಿಕೊಂಡು ಬದುಕಿದೆ.

ಹಲವು ವಿಧದ ನಾಮದೃಷ್ಟಿಗಳು, ಅತ್ಯಂತ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಮನನಗೊಳ್ಳುವ ಕ್ರಿಯೆ, ಜೊತೆಗೆ ಸ್ಮರಣೆಯಲ್ಲಿಯೂ ಇರಿಸಿಕೊಳ್ಳುವದಾಗಿದೆ. ಈ ದಿನ ಕಾಳಿ ಮಂದಿರದಲ್ಲಿ ನಾನು ಅನುಭಾವವನ್ನು ಪಡೆದುಕೊಂಡೆ. ಬರಿಸಾಲದ ಕುರಿತು ಜೇ (ಜಗನ್ಮಾತೆ) ಹೇಳಿದ ಭವಿಷ್ಯವಾಣಿಯ ಅನುಭಾವವಿದು. 'ಪ್ರಕೃತಿಯೇ ಜೂನ್ ತಿಂಗಳಲ್ಲಿ ತುಷಾರದ ಪರದೆಯನ್ನು ಕತ್ತರಿಸಲು ಪ್ರಾರಂಭ ಮಾಡುತ್ತದೆ, ಅಗಸ್ಟ್ ಕೊನೆಯ ಭಾಗದಲ್ಲಿ ಹಿಮವನ್ನು ತುಂಡರಿಸುತ್ತ, ಡಿಸೆಂಬರದಲ್ಲಿ ಇದ್ದಕಿದ್ದಂತೆ ಸ್ಫೋಟಗೊಂಡಂತೆ ಆ ಗುಲಾಬಿಗಳು ಮೇಲ್ಮೈಯಲ್ಲಿ ಉದಿತಗೊಳ್ಳುತ್ತಿವೆ, ಆದರೆ ಈ ರೀತಿಯಲ್ಲಿ ಎಂದಿಗೂ ಘಟಿಸಬಾರದು, ಓ ತತ್ ನಶ್ವರದ ಪರಮಾನಂದವೇ ಬೇಡ ಬೇಡ, ಅದು ಯಾತನಾಮಯವಾಗಿದ್ದರೂ, ನಿನ್ನದೇ ತಿರಸ್ಕಾರಪೂರ್ಣ ಭೇಟಿಯಾಗಿದ್ದರೂ ಸಹಿತ. ಪ್ರತಿಯೊಬ್ಬನೂ ಜೀವನವ ಪಡೆದುಕೊಳ್ಳಲಿ' ಯಾವ ಉದ್ದೇಶದಿಂದ ನಾನು ಈ ಬರಿಸಾಲಗೆ ಬರುವಂತಾಯಿತು, ಪದ್ಮಾ ನದಿಯ ಅಲೆಗಳಲ್ಲಿ ಸ್ಟೀಮರಿನ ತುಯ್ದಾಟದ ಜೊತೆಗೆ ಹೊಗೆಯುಗುಳುವ ಅಬ್ಬರದಲ್ಲಿ ಈ ಪಯಣ, ಇದು ನಡೆಯಲೇಬೇಕೆ? ಎಂದು ಪ್ರಯಾಣದ ಸಮಯದಲ್ಲಿ ಯೋಚಿಸುತ್ತಲಿದ್ದೆ.

ಆದರೆ ಧ್ಯಾನದಲ್ಲಿ, ಆ ತುರೀಯಾವಸ್ಥೆಯಲ್ಲಿ ಇಲ್ಲೋರ್ವ ಮಹಿಳೆಯ ಪಾದ ಕಾಣಿಸಿತು, ಅದು ಸುದೀರ್ಘವಿದ್ದಂತೆ ಹಾಗೂ ಕೃಶವಿದ್ದಂತೆ ತೋರುತ್ತಿತ್ತು. ಅಲ್ಲಿ ದಟ್ಟವಾದ ಹಸಿರು ಕೇಂದ್ರ. ಅಲ್ಲಿರುವ ಸರೋವರದ ಮುಂದಿರುವ ದೊಡ್ಡ ಪೊದೆಯೆದುರು ಮನುಷ್ಯರ ಕಟಿಗಳ ಸಾಲು. ಯು ಆರ್.

ಅಪರಾಹ್ನದವರೆಗೂ ಅದೇ ಸ್ಥಿತಿಯಲ್ಲಿದ್ದೆನೇನೋ, ಆ ಸಮಯದಲ್ಲಿ ಚಿತ್ತದ ಮೂಲದಿಂದಲೇ ವಾಣಿ ಶ್ರಾವ್ಯಗೊಳ್ಳತೊಡಗಿತು. ಅಲ್ಲಿರುವ ಕಾಮನೆಯ ಪ್ರತಿಬಿಂಬಗಳ ಭವಿಷ್ಯದ ಸ್ವರೂಪಗಳು ಕುರಿತು, ಧ್ವನಿಯೇ ವಿವರಣೆಯನ್ನು ನೀಡುತ್ತಲಿದೆ. ಭಯದ, ಜಿಗುಪ್ಸೆಯ, ತಿರಸ್ಕಾರದ, ಸಂದಿಗ್ಧತೆಯ ಸರ್ವ ಅವಶೇಷಗಳು ತೀವ್ರವಾಗಿಯೇ ಕರಗಿಹೋಗುತ್ತಲಿವೆ. ಸಂದೇಹಗಳನ್ನೆಲ್ಲವನ್ನೂ ಪರಿಶೀಲಿಸಲಾಗಿದೆ, ನ್ಯಾಯ ನಿರ್ಣಯ ಮಾತ್ರ ಇನ್ನೂ ನಿಲಂಬನಗೊಂಡಿದೆ. ಉಪಲಬ್ಧಿ ಇಲ್ಲದ ಜ್ಞಾನವನ್ನು ಅರಸುತ್ತಿರುವಾಗಲೆಲ್ಲ ಅಂಗಾಂಗಗಳ ಚಲನೆಯು– ದೈನಂದಿನ ಚಲನವಲನಗಳನ್ನು ಹೊರತುಪಡಿಸಿ– ಯಾವಾಗಲೂ ಅಪರಿಚಿತವಾಗಿಯೇ ಇರುವಂತಿದೆ.

ಅಷ್ಟರಲ್ಲಿ ಇಂದು ಬಾಕರಗಂಜ್‌ಗೆ ಹೋಗಬೇಕಾದ ಸಂದರ್ಭ ಸ್ಮರಣೆಗೆ ಬಂದಿತು. ಇಂದು ಬಾಕರಗಂಜ್‌ದಲ್ಲಿ ನನ್ನ ಉಪನ್ಯಾಸವೊಂದನ್ನು ಹಮ್ಮಿಕೊಂಡಿದ್ದಾರೆ. ಇಲ್ಲಿಂದ ಸುಮಾರು 16 ಮೈಲುಗಳು. ಸಮಯಕ್ಕೆ ಸರಿಯಾಗಿ ಕರೆದುಕೊಂಡು ಹೋಗುವ ವ್ಯವಸ್ಥೆಯನ್ನೂ ಮಾಡಿದ್ದಾರೆ, 1862 ರ ನವೆಂಬರ್ ತಿಂಗಳಿನಿಂದಲೇ ಇಲ್ಲಿ ರೈಲು ಪ್ರಯಾಣ ಪ್ರಾರಂಭವಾಗಿದೆ. ಮುಖ್ಯ ಪಟ್ಟಣವಾದ ಇದನ್ನು ಜಿಲ್ಲಾ ಕೇಂದ್ರವನ್ನಾಗಿಸಿಕೊಂಡು ಬ್ರಿಟಿಶ್ ಸರಕಾರ ಆಡಳಿತ ನಡೆಸುತ್ತಲಿದೆ. ಆದರೆ ಇದೀಗ ಪೂರ್ವ–ಬಂಗಾಲದ ಪ್ರದೇಶವಾಗಿ ಗುರುತಿಸಬೇಕಾಗಿದೆ. ಈ ಬಾಕರಗಂಜ್ ಪೂರ್ವ ಬಂಗಾಲದಿಂದ ಆಸಾಮ ಕಡೆಗೆ ಹೋಗುವಾಗ ಇರುವ ಮುಖ್ಯ ಪಟ್ಟಣ.

ಉಪನ್ಯಾಸ ಇದ್ದದ್ದು ಝಾಲಕಟಿ ಪ್ರದೇಶದಲ್ಲಿ, ಅಲ್ಲಿ ಬರಿಸಾಲದಿಂದ, ಬಾಕರಗಂಜ್‌ದಿಂದ ಸ್ಥಳೀಯರು ದೊಡ್ಡ ಸಂಖ್ಯೆಯಲ್ಲಿಯೇ ಸೇರಿದ್ದಾರೆ. ನನ್ನನ್ನು ಈ ಸಭೆಗೆ ಆಹ್ವಾನಿಸಿರುವದಕ್ಕೆ ಇಲ್ಲಿ ಸೇರಿದ ಎಲ್ಲರಿಗೂ ನಾನು ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದೇ ನನ್ನ ಮನೋಗತವನ್ನು ಹೇಳಲು ಪ್ರಾರಂಭಿಸಿದೆ. ಉತ್ತರಪಾಡಾದಲ್ಲಿ ನನ್ನ ಹೃದಯಾಭಿಲಾಶೆಯನ್ನು ಈಗಾಗಲೇ ತಿಳಿಸಿದ್ದೇನೆ. ಅದನ್ನು ಮತ್ತೆ ಇಲ್ಲಿ ಪುನರಾವರ್ತಿಗೊಳಿಸದಂತೆ ನಿರ್ಧರಿಸಿಕೊಂಡು, ಕಳೆದ ಒಂದು ವರ್ಷ ಜನತೆಯ ಆತ್ಮೀಯ ಸಹೋದರತ್ವದ ಅಪ್ಪುಗೆಯಿಂದ ದೂರವಾಗಿದ್ದೆ. ಹೀಗಾಗಿ ನೀವು ಇದೀಗ ನೀಡುತ್ತಿರುವ ಆದರಾತಿಥ್ಯ ಮತ್ತು ದಯಾಳುತನದ ಸ್ವಾಗತವು, ನನ್ನ ಆಂತರಂಗದಲ್ಲಿ ಸಂವೇದನೆಗಳನ್ನು ಹುಟ್ಟುಹಾಕಿ, ಕಳೆದ ವರ್ಷದ ಘಟನೆಯನ್ನು ದೂರ ಮಾಡುತ್ತಿದೆ. ಅದರಲ್ಲೂ ಬರಿಸಾಲಗೆ ಬರುವದೆಂದರೆ ನನ್ನ ಸಂತೋಷವನ್ನು ಮರಳಿಪಡೆದುಕೊಳ್ಳುವದೇ ಆಗಿದೆ. ನಾನು ಯಾವಾಗ ಈ ಜಿಲ್ಲೆಗೆ ಆಗಮಿಸಿದೆನೋ, ಅದರಲ್ಲೂ ಈ ಬಾಕರಗಂಜಿನ ಮಣ್ಣಿನ ಸ್ಪರ್ಶವನ್ನು ಅನುಭವಿಸಿದೆನೋ, ಇದೊಂದು ಪವಿತ್ರ ಘಳಿಗೆಯಾಗಿದೆ, ಇದು ಕೇವಲ ನನಗೆ ಮಾತ್ರವಲ್ಲ, ಇದು ಈ ದೇಶದ ಇತಿಹಾಸದಲ್ಲಿಯೂ ಚಿರಸ್ಥಾಯಿಯಾಗಿ ನೆಲೆಸುತ್ತದೆ– ನಾನು ಬಂದಿರುವದು ಯಾವುದೋ ಒಂದು ಸಾಧಾರಣ ಪ್ರದೇಶವಂತೂ ಅಲ್ಲ. ನಾನು ಬಂದದ್ದು ಒಂದು ವಿಶಿಷ್ಟ ಘಟನೆಗಾಗಿ ಆಯ್ಕೆ ಮಾಡಲ್ಪಟ್ಟಿರುವ ಮಾತೆಯ ಮಂದಿರಕ್ಕೆ. ರಾಷ್ಟ್ರೀಯ ಶಕ್ತಿಯ ಪವಿತ್ರ–ಪೀಠಸ್ಥಾನವಾಗಿರುವ ಮಂದಿರಕ್ಕೆ ಬಂದಿದ್ದೇನೆ. ಅದೂ ಅಲ್ಲದೇ ಅಶ್ವಿನಿಕುಮಾರ ದತ್ತನ ಜನ್ಮಭೂಮಿ ಮತ್ತು ಕರ್ಮಭೂಮಿಗೆ ಬಂದಿದ್ದೇನೆ.

ನಾನು ಬರಿಸಾಲಗೆ ಬರುತ್ತಿರುವದು ನಾಲ್ಕನೇ ಸಲ. ಮೊದಲ ಬಾರಿ ವಿಭಾಗೀಯ ಸಮ್ಮೇಳನಕ್ಕೆಂದು ಈ ಬರಿಸಾಲಗೆ ಬಂದಿದ್ದೆ. ನೋಡ ನೋಡುತ್ತಿದ್ದಂತೆಯೇ ಮೂರು ವರ್ಷಗಳು ಕಳೆದಿವೆ. ಈ ಮೂರು ವರ್ಷಗಳು ತಲ್ಲಣಗಳಿಂದ, ಭೀಕರವಾದ ತುಮುಲಗಳಿಂದ ತುಂಬಿದ ವಾತಾವರಣದಿಂದಲೇ ಈ ಪ್ರದೇಶ–ದೇಶ ಒತ್ತಡಕ್ಕೆ ಒಳಗಾಗಿದೆ. ಇತಿಹಾಸ ರಚನೆಗೊಳ್ಳುವಲ್ಲಿ ಸುದೀರ್ಘ ಅವಧಿಯೇ ಬೇಕು, ಈ ರೀತಿಯ ಪ್ರಕ್ರಿಯೆಯಲ್ಲಿ ಭಾರತವು ನವ ಜನ್ಮದ ಪ್ರಕ್ರಿಯೆಯ ಹಂತದಲ್ಲಿ ಸಾಗಬೇಕಿದೆ. ಈ ಮೂರು ವರ್ಷಗಳಲ್ಲಿ ಅನೇಕಾನೇಕ ಘಟನೆಗಳು ನಡೆದಿವೆ. ಅದರಲ್ಲೂ ಕಳೆದ ಕೆಲವು ತಿಂಗಳಲ್ಲಂತೂ ತೀರ ತುಮುಲದಿಂದ ಕೂಡಿರುವ ಘಟನೆಗಳು ನಡೆದಿವೆ.

ಎಂದು ಹೇಳುತ್ತ ಅಲ್ಲಿದ್ದ ಒಂದು ಖಾಲಿ ಖುರ್ಚಿಯನ್ನು – ಆದರೆ ಅದರಲ್ಲಿ ಅಶ್ವಿನಿಕುಮಾರ ದತ್ತನ ಫೋಟೊ ಮಾತ್ರ ಇದೆ– ತೋರಿಸುತ್ತಲೇ, “ಇದು ಇತ್ತೀಚಿನ ದಿನಗಳಲ್ಲಿ ನಡೆದ ಘಟನೆಗೆ ಸಾಕ್ಷಿ, ಈ ಕೆಲವು ವರ್ಷಗಳ ಫಲಿತಾಂಶವೆಂದರೆ ದಮನಗೊಳಿಸುವ ನಿರಂತರ ಸರಣಿಗಳು, ಇವುಗಳು ಇನ್ನೂ ಕೆಲವು ವರ್ಷಗಳ ಕಾಲ ಮುಂದುವರೆಯುತ್ತಲೇ ಸಾಗುತ್ತವೆ, ಅವುಗಳಿಂದಾಗಿ ಯಾತನೆಗಳೂ ಹೆಚ್ಚುತ್ತವೆ, ಅವುಗಳನ್ನು ನಾವು ಅನುಭವಿಸಲೇಬೇಕಾಗಿದೆ, ಇಲ್ಲಿ ಬಲಿದಾನಗಳೂ ಈ ದಮನ ಕಾರ್ಯದ ಚಟುವಟಿಕೆಗಳೇ ಆಗುತ್ತವೆ. ಈ ಬರಿಸಾಲ ಈ ಎಲ್ಲ ಘಟನೆಗಳಿಂದ ಯಾತನೆಗಳನ್ನು ಅನುಭವಿಸಬೇಕಾಗುತ್ತದೆ.”

ನಾನು ಇಲ್ಲಿಗೆ ಬರುವ ಮೊದಲೇ ‘ಅವರೆಲ್ಲ’ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ, ನಿಮ್ಮಲ್ಲಿಗೆ ಬಂದವರಲ್ಲಿ ಬಹುಶಃ ನಾನೇ ಕೊನೆಯ ವ್ಯಕ್ತಿ. ನೀವು ತದನಂತರದಲ್ಲಿ ಲಾಠಿ–ನಿಯಮಗಳನ್ನು ಮತ್ತು ಗುರ್ಖಾಗಳಿಂದ ತನಿಖಾ ಸಂದರ್ಶನವನ್ನು ಎದುರಿಸಲೇಬೇಕಾಗುತ್ತದೆ. ಇದು ಹೇಗಿರುತ್ತದೆ ಎಂದರೆ– ಹಲವು ವಿಧದ ಭಯದಿಂದ ಕೂಡಿದ ಒತ್ತಡಗಳು ಪ್ರಾರಂಭಗೊಳ್ಳುತ್ತವೆ. ಈ ಪಟ್ಟಣ ಝಾಲಕಾಟಿಯೂ ಸಹಿತ ಪೊಲೀಸರಿಂದ ವಿಧಿಸಲ್ಪಡುವ ದಂಡವನ್ನು ಪಾವತಿಸಬೇಕಾಗುತ್ತದೆ. ಈ ದಂಡದ ಕರವನ್ನು ನೀವು ಯಾವುದೇ ತಪ್ಪು ಎಸಗದಿದ್ದರೂ ಹೇರಲ್ಪಡುತ್ತದೆ.

(ಸಶೇಷ)



ಫೋಟೋ: ಇಮೇಜಿಂಗ್ ಸಾವಿತ್ರಿ

ಹೊಮ್ಮಿತೋ ಚಿಮ್ಮಿ ಆಂತರ್ಯದಲ್ಲಿ ಸರ್ವಸ್ವ ಶೋಭೆಗೊಂಡು
ದರ್ಶನದ ದಿವ್ಯ ಪ್ರಜ್ವಲನ ಭವ್ಯ ಮಿನುಗುತಲಿ ರೂಹುಗೊಂಡು;

**– ಪುಟ್ಟು ಕುಲಕರ್ಣಿ**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಕುಂಡಲದ ಸುರುಳಿ–ಸುರುಳಿಯಲಿ ಹೊರಳಿ ತಿರುತಿರುಗು ಸುತ್ತುತಿರುವ
ಈ ವಿಶ್ವವನ್ನು ನೀನೀಗ ಇಂತು ರಕ್ಷಿಸಿರೆ ಸರ್ವ ಜೀವ,

**– ಪುಟ್ಟು ಕುಲಕರ್ಣಿ**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.